ತಿಳಿನಗೆಯ ಕಾರಂಜಿ

ಮಾರ್ಚ್ 2017




ನಾನು ನಾಸ್ತಿಕ ಯಾಕಾದೆ ಎಂದು ಕೇಳಿದೆಯಲ್ಲಾ? ಅದು ದೈವೇಚ್ಛೆ ಕಣಪ್ಪಾ..

**ಸಂಪಾದಕಮಂಡಳಿ**

**ಸಂಪಾದಕರು**
ಶ್ರೀ ಎಂ. ಶಿವಕುಮಾರ್

**ಉಪಸಂಪಾದಕರು**
ಶ್ರೀ ಬೇಲೂರು ರಾಮಮೂರ್ತಿ

**ಸದಸ್ಯರು**
ಶ್ರೀ ಎಚ್.ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ

**ಆಡಳಿತ ಮಂಡಳಿ**

**ಮ್ಯಾನೇಜಿಂಗ್ ಟ್ರಸ್ಟಿ**
ಶ್ರೀ ಎಂ. ಶಿವಕುಮಾರ್

**ಟ್ರಸ್ಟಿಗಳು**
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ವಿ.ಆರ್. ನಾಥ್
ಶ್ರೀ ಎಚ್.ಎನ್. ಆನಂದ
ಶ್ರೀ ಸಿ.ಆರ್. ಸತ್ಯ
ಶ್ರೀ ಕೆ. ರವೀಂದ್ರ ರಾವ್

**ಚಂದಾ ವಿವರ:**
**ಬಿಡಿಪ್ರತಿ: ರೂ. 10/-**
**ವಾರ್ಷಿಕ ಚಂದಾ: ರೂ. 100/-**
**ಹತ್ತು ವರ್ಷದ ಚಂದಾ: ರೂ. 750/-**

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳಿಸಿ.
ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ.



# ಅಪರಂಜಿ

ತಿಳಿನಗೆಯ ಕಾರಂಜಿ

**ಸಂಪುಟ 34**
**ಸಂಚಿಕೆ - 6**
**ಮಾರ್ಚ್ - 2017**

**ಈ ಸಂಚಿಕೆಯಲ್ಲಿ .....**


| | | |
|---|---|---|
| ಅಪರಂಜಿ ಕಿಡಿ | **ಪ್ರಕಾಶ್** | 2 |
| ನಮ್ಮ ನಿಮ್ಮಲ್ಲಿ | **ಶಿವಕುಮಾರ್** | 3 |
| ಮೊಬೈಲ್ ಅನ್ನೋ .. | **ಗುಂಡುರಾವ್ ದೇಸಾಯಿ** | 7 |
| ತುಂತುರು | **ದಂನಾಳ** | 11 |
| ಹೀಗೂ ಉಂಟೆ | **ಗೌತಮ** | 12 |
| ಡ್ರೀಮ್ ಕ್ವೀನೋ... | **ಎಚ್.ಆರ್.ಹನುಮಂತರಾವ್** | 20 |
| ಪಂಚ್ ಪದ್ಯಗಳು | **ಎಚ್. ಡುಂಡಿರಾಜ್** | 27 |
| ವ್ಯಂಗ್ಯ ಮೆಲುಕು | **ಪ್ರಕಾಶ್ ಶೆಟ್ಟಿ** | 28 |
| ಮನೆ ದೇವ್ರು | **ಗಣೇಶ್ ಹೆಗ್ಗಡೆ** | 29 |
| ಚುಟುಕು ಮೋಹ | **ಗಾಯತ್ರಿ ಮೂರ್ತಿ** | 32 |
| ಮೀನುಗಳೂ ....... | **ನಂನಾಗ್ರಾಜ್** | 36 |
| ನೊಂದ ನಾಯಿಗಳು | **ವೈ.ವಿ. ಗುಂಡೂರಾವ್** | 38 |


**ಮುಖಪುಟ ವ್ಯಂಗ್ಯಚಿತ್ರ - ಗುಜ್ಜಾರ್**

ಪ್ರಕಾಶಕರು : ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003. email: koravanji42@hotmail.com

ಸಂಪರ್ಕ ವಿಳಾಸ: **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು - 560 068. ದೂರವಾಣಿ: 080-26688488. email: belururamamurthy@gmail.com

*ಮುದ್ರಣ : ರವಿ ಗ್ರಾಫಿಕ್ಸ್ - ಅಕ್ಷರ ಜೋಡಣೆ: ಒಮೇಗಾ ಲೇಸರ್‌ಟೆಕ್*

# ಅಪರಂಜಿ ಕಿಡಿ

● ಪ್ರಕಾಶ್



'ಮೋದಿ ಆಸ್ಪತ್ರೆ ರಸ್ತೆ ಅಂಧಕಾರದಲ್ಲಿ' – ಪತ್ರಿಕೆ

***● ಆಹಾ, ಸುದ್ದಿ ಎಂದರೆ ಹೀಗಿರಬೇಕು !!***

★★★

ಎರಡು ಲಕ್ಷಕ್ಕಿಂತ ಕಡಿಮೆ ಜಮೆ ಮಾಡಿದವರ ವಿಚಾರಣೆ ಇಲ್ಲ– ದಿನಪತ್ರಿಕೆ

***● 'ನಮಗೆ' ನಿರಾತಂಕ !!***

★★★

ಮೆಟ್ರೋ ಮೊದಲ ಹಂತ ಏಪ್ರಿಲ್‌ಗೆ ಪೂರ್ಣ – ಸುದ್ದಿ

***● ಒಂದನೇ ತಾರೀಖು ಆಗಲ್ಲ ತಾನೆ !?***

★★★

ಉತ್ತರಾಧಿಮಠದ ವಿರುದ್ಧ ದೂರು – ಪತ್ರಿಕೆ

***● ಇದಕ್ಕೆ ಉತ್ತರ ಹುಡುಕಲೇ ಬೇಕು !!***

★★★

ಆರು ತಿಂಗಳು ಚರ್ಚ್ ಸ್ಟ್ರೀಟ್ ಬಂದ್ – ಸುದ್ದಿ

***● ಮೈ ಗಾಡ್ !?***

★★★

'ಸ್ವಾರ್ಥ ರಹಿತ ಹೊಸ ಜಗತ್ತು ಕಟ್ಟಬೇಕು' – ಹೇಳಿಕೆ

***● ಅರಣ್ಯ ರೋದನ ಎಂದರೆ ಇದೇ ಇರಬೇಕು !!***

★★★

'ಸದನದಲ್ಲಿ ಕೋರಂ ಅಭಾವ' – ಸುದ್ದಿ

***● ಅವರೆಲ್ಲ ಜನಸೇವೆಯಲ್ಲಿ ತೊಡಗಿದ್ದರೇನೋ ಪಾಪ !!***

★★★

ಸರ್ದಾರ್‌ಜಿ ಜೋಕ್ಸ್ ನಿಷೇಧಕ್ಕೆ ಸುಪ್ರೀಂ ಕೋರ್ಟ್ ನಕಾರ – ಪತ್ರಿಕೆ

***● ತೀರ್ಪು ಹನ್ನೆರಡು ಗಂಟೆಗೆ ಕೊಡಲಾಯಿತು ಎಂದು ಖಚಿತವಲ್ಲವಂತೆ !!***

★★★

## ನಮ್ಮ ನಿಮ್ಮಲ್ಲಿ

**ಮೊ**ನ್ನೆ ನನ್ನ ಕನ್ನಡ ಪುಸ್ತಕಗಳ ಕಪಾಟಿನಲ್ಲಿನ ಪುಸ್ತಕಗಳನ್ನು ಜೋಡಿಸುತ್ತಿದ್ದಾಗ ವೀ.ಸೀ.ಯವರ ಪುಸ್ತಕಗಳ ಗುಂಪಿನಲ್ಲಿ ''ಮಹನೀಯರು'' ಎಂಬ ಪುಸ್ತಕ ಕಣ್ಣಿಗೆ ಬಿತ್ತು. ಮರು ಓದಿಗಾಗಿ ಅದನ್ನು ಕೈಗೆತ್ತಿಕೊಂಡೆ. ಈ ಪುಸ್ತಕದಲ್ಲಿ ವೀ.ಸೀ.ಯವರು ಕನ್ನಡ ಸಾರಸ್ವತ ಲೋಕದ ಹತ್ತು ಹಲವಾರು ಖ್ಯಾತನಾಮರನ್ನು ಆರಿಸಿಕೊಂಡು ಅವರುಗಳ ಬಗ್ಗೆ ಕಿರು ಲೇಖನಿ ಚಿತ್ರಗಳನ್ನು ಬಿಂಬಿಸಿದ್ದಾರೆ. ಬಿ.ಎಂ.ಶ್ರೀ., ಪಂಜೆಯವರು, ಗೋವಿಂದ ಪೈ, ಕಾರಂತರು ಮತ್ತಿತರರ ಚಿತ್ರಣಗಳು ಬಹು ಆಪ್ತವಾಗಿ, ಸೊಗಸಾಗಿ ಮೂಡಿಬಂದಿವೆ. ಈ ಚಿತ್ರಣಗಳಲ್ಲಿ ಒಂದಾದ ಮಾಸ್ತಿಯವರ ಬಗೆಗಿನ ಬರಹವನ್ನು ಓದಲು ಪ್ರಾರಂಭಿಸಿದೆ.

ವೀ.ಸೀ.ಯವರ ಶೈಲಿಯಲ್ಲೇ ಒಂದು ಸೊಬಗಿದೆ. ಮಾಸ್ತಿಯವರಂತೆ, ಗೊರೂರರಂತೆ ವೀ.ಸೀ.ಯವರೂ ಸಹಾ ಆಡಂಬರವಿಲ್ಲದ ಸರಳ ಭಾಷೆಯನ್ನೇ ಬಳಸಿ ಮನಮುಟ್ಟುವಂತೆ ಕಥಾನಕಗಳನ್ನು ನೇಯಬಲ್ಲವರು. ಮಾಸ್ತಿಯವರು ''ಶ್ರೀನಿವಾಸ'' ಎಂಬ ಹೆಸರನ್ನು ಆರಿಸಿಕೊಂಡು ಕಥೆಗಳನ್ನು ಬರೆಯತೊಡಗಿದ ಸಂದರ್ಭವನ್ನು ಕುರಿತು ವೀ.ಸೀ.ಯವರು ಹೀಗೆನ್ನುತ್ತಾರೆ. ''ಅವರು ಬರೆಯತೊಡಗಿದ ಕಾಲ ಹಳೆಯ ಮೈಸೂರಿನಲ್ಲಿ ಸೂಕ್ಷ್ಮವಾದದ್ದು. ಇಂಗ್ಲೀಷ್ ಓದಿದವರು ಕನ್ನಡವನ್ನು ಓದುವುದು, ಕನ್ನಡದಲ್ಲಿ ಮಾತನಾಡುವುದೇ ಹೀನಾಯವೆಂದು ತಿಳಿದಿದ್ದ ಕಾಲ. ಅವರಲ್ಲಿ ಈ ಪಕ್ಷಪಾತವಿದೆಯೆಂದು ಕಂಡರೆ ಮೇಲಿನ ಅಧಿಕಾರಿಗಳ ವ್ಯಂಗ್ಯ, ಅಣಕ ಅಂಥವರಿಗೆ ಬೀರಿ ಕೀಳ್ಮೆ ತರುತ್ತಿತ್ತು. ಕನ್ನಡಕ್ಕೆ ಒಂದು ಆಚಾರ್ಯ ಪದವಿಯನ್ನು ಪಡೆದುಕೊಂಡಿದ್ದ ''ಶ್ರೀ'' ಯವರೇ ಸುಮಾರು 1926 ರವರೆಗೂ ಸಾರ್ವಜನಿಕ ವೇದಿಕೆಗಳ ಮೇಲಾಗಲೀ ಕಾಲೇಜಿನಲ್ಲಾಗಲೀ ಕನ್ನಡದಲ್ಲಿ ಭಾಷಣ ಮಾಡುತ್ತಿರಲಿಲ್ಲ. ಮಾಸ್ತಿಯವರ ಮೇಲಧಿಕಾರಿಗಳೊಬ್ಬರು ಈಚೀಚೆಗೆ ಕೂಡ ''ನಿಮಗೆ ಸಿವಿಲ್ ಸರ್ವೀಸ್ ಅಧಿಕಾರ ಹೆಚ್ಚು ಪ್ರಿಯವೋ ಕನ್ನಡದ ಕೆಲಸ ಹೆಚ್ಚು ಪ್ರಿಯವೋ ಎಂದು ಮಾಸ್ತಿಯವರನ್ನು ಕೇಳಿದರೆ ಮಾಸ್ತಿಯವರು ಕನ್ನಡಕ್ಕೆ ಮೊದಲ ಸ್ಥಾನ ಕೊಡುವರು'' ಎಂದು ಕಟಕಿ ನುಡಿದರಂತೆ. ಅವರಿಗೆ ಆಗದವರು ಅವರ ಅಧಿಕಾರ ಪ್ರಪಂಚದಲ್ಲೂ ಈ ಕಾರಣದಿಂದ ಅನ್ಯಾಯ ಮಾಡಿರುವುದುಂಟೆಂದು ಕೇಳಿದ್ದೇನೆ. ಇಂಥ ಕಾಲದಲ್ಲಿ ಸಿವಿಲ್ ಸರ್ವೀಸಿನಲ್ಲಿದ್ದ ಮಾಸ್ತಿಯವರು ಸಣ್ಣಕತೆಗಳನ್ನೂ ಕವಿತೆಗಳನ್ನೂ ಬರೆಯತೊಡಗಿದುದು ಸಾಹಸವೇ, ಅದ್ಭುತವೇ ಆಯಿತು. ಅವರು ''ಶ್ರೀನಿವಾಸ'' ಎಂಬ ಹೆಸರಿನಲ್ಲಿ ಬರೆದುದು ಒಂದು ಬಗೆಯಲ್ಲಿ ಉಪಕಾರವಾಯಿತು. ಸರ್ಕಾರದ ಅಧಿಕಾರಿಯಾಗಿದ್ದವರು ಅದನ್ನು ಬರೆಯುವವರೆಂಬ ಶಂಕೆ, ಪಕ್ಷಪಾತ ಆ ಬರವಣಿಗೆಯ ಮೇಲೆ ಕವಿಯುವ ಹಾಗಿರಲಿಲ್ಲ.

ವೀ.ಸೀ.ಯವರು ಮಾಸ್ತಿಯವರ ಸರಳ ಶೈಲಿಯ ಬಗ್ಗೆ ಹೇಳುವ ಮಾತುಗಳನ್ನು ಕೇಳಿ ''ಅವರ ಭಾಷೆ ತೀರ ಸುಲಭ, ಸರಳ. ಕಷ್ಟ ಪದಗಳನ್ನೂ ಉಚ್ಚಾರಣೆಗೆ ಕ್ಲೇಶತರುವಂಥದನ್ನೂ ಅವರು ಎಂದಿಗೂ ಬಳಸುವುದಿಲ್ಲ. ವಾಕ್ಯಗಳು ಚಿಕ್ಕವು. ಎಲ್ಲರಿಗೂ ಅರ್ಥವಾಗುತ್ತವೆ. ಇದು ಯಾವ ಮಹಾಗುಣ? – ಅರ್ಥಕ್ಕೇಕೆ ಕುದಿಯುತ್ತೀರಿ ಎಂದು ಕೇಳುವ ಕಾಲ ಇದು. ನಿರೂಪಣೆಯನ್ನು ಗಾಸಿಪಡದೇ, ತಾವು ಗಾಸಿಪಡದೇ ನಡೆಸಿ ಕಥೆ ಕೃತಾರ್ಥವಾಗುತ್ತದೆ..... ಗಂಗಾಸಲಿಲದಂತೆ ಮಾಸ್ತಿಯವರ ಶೈಲಿಗೆ ಒದಗುವ ಮಾತು: ನಿರ್ಮಲ ಸ್ಫಟಿಕೋದಕ.''

ಈ ಪುಸ್ತಕದಲ್ಲಿ ವೀ.ಸೀ.ಯವರು ಮಾಸ್ತಿಯವರ ಸಣ್ಣಕತೆಗಳ ಬಗ್ಗೆ ಸವಿಸ್ತಾರವಾಗಿ ಪ್ರಸ್ತಾಪಿಸಿ ಅನಂತರ ಅವರ ಪದ್ಯಕತೆಗಳ ಬಗ್ಗೆ ಹೇಳುತ್ತಾ ''ನೀಲಗಾರ ಮಾದ'' ಕವನದ ಬಗ್ಗೆ ಹೇಳಿರುವುದನ್ನು ಓದುತ್ತಿದ್ದಾಗ, ನನಗೆ ಬಹು ಹಿಂದೆ ಶ್ರೀನಿವಾಸರ ಚೆಲುವು ಪುಸ್ತಕದಲ್ಲಿ ಈ ಕವನವನ್ನು ಓದಿದ್ದ ನೆನಪಾಯಿತು. ಬಹು ಸ್ವಾರಸ್ಯವಾದ ಪದ್ಯ ಕತೆ ಅದು.

ಹೈದರಾಲಿಯ ಕಾಲ. ಒಮ್ಮೆ ಹೈದರಾಲಿ ತನ್ನ ಎಂದಿನ ಪ್ರವಾಸವನ್ನು ಕೈಗೊಂಡಿದ್ದಾಗ ಕಟ್ಟೇಮಳಲವಾಡಿ ಎಂಬ ಹಳ್ಳಿಗೆ ಬಂದು ಬಿಡಾರ ಹೂಡುತ್ತಾನೆ. ಆ ಹಳ್ಳಿಯ ಒಬ್ಬ ಕಟ್ಟಾಳು ನೀಲಗಾರ ಮಾದ. ಆತ ಯಾಸ (ವೇಷ) ಹಾಕುವುದರಲ್ಲಿ ನಿಸ್ಸೀಮ. ಹೈದರಾಲಿ ಅವನ ಹಳ್ಳಿಗೆ ಬಂದಿರುವಾಗಲೇ ಮೊಹರಮ್ ಹಬ್ಬ ಬರುತ್ತದೆ. ಮೊಹರಮ್ ಹಬ್ಬದಲ್ಲಿ ಹುಲಿವೇಷ ಹಾಕುವುದು ನಾಡಿನಲ್ಲಿ ಅನೂಚಾನವಾಗಿ ಬಂದ ಪದ್ಧತಿ. ಹಳ್ಳಿಯ ಮುಲ್ಲಾ ಸಾಹೇಬನು ಸುಲ್ತಾನರ ಮುಂದೆ ಹುಲಿವೇಷ ಹಾಕುವಂತೆ ನೀಲಗಾರ ಮಾದನಿಗೆ ಆಜ್ಞಾಪಿಸುತ್ತಾನೆ. ಮಾದನಿಗೋ ಉಭಯ ಸಂಕಟ. ಆ ವಾರದಲ್ಲೇ ನಡೆಯಬೇಕಾದ ಮಾರಮ್ಮನ ಹಬ್ಬಕ್ಕೆ ವೇಷ ಹಾಕುವುದಕ್ಕಾಗಿ ನೀಲಗಾರನ ಅವ್ವ ಅವನನ್ನು ಮೀಸಲಾಗಿ ಕೊಟ್ಟುಬಿಟ್ಟಿರುತ್ತಾಳೆ. ಮಾರಮ್ಮನಿಗೆ ಮೀಸಲಿರುವಾಗ ಇನ್ನಾವ ದೇವರ ಮುಂದೆ ಅವನು ವೇಷ ಹಾಕಲಾಗದು.

ಯಲ್ಲಾರು ಬಂದಾರು ಯಾಸಗಳು ಹಾಕ್ಯಾರು
ಕಟ್ಟಾಳು ಮಾದ ಬರನಿಲ್ಲ;
ಮುಲ್ಲಾನ ಸಾಹೇಬ್ರು ಹೇಳಿಕಳಿಸಿದರವಗೆ
ನೆಟ್ಟನೆ ಬಂದಾ ಮಾದಣ್ಣ

ಯಾತಕ್ಕೆ ನೀ ಯಾಸ ಹಾಕೋಲ್ಲ ಅಂದರೆ
ಮಾದ ಅಂದ ನಾ ನೀಲಗಾರ
ಜಾತೀಯ ಜನವೆಲ್ಲ ಬಂದೈತೆ, ಕಳಿಶಿವಿ
ನಾ ದೇವರಿಗೆ ಮೀಸಲೆಂದ

ಮುಲ್ಲಾ ಸಾಹೇಬ್ರು ಎಷ್ಟು ಪರಿಯಲ್ಲಿ ಕೇಳಿದರೂ ಮಾದ ಒಪ್ಪುವುದಿಲ್ಲ. ಅವನ ಹೆದರಿಕೆ ಅವನಿಗೆ. ಕೊನೆಗೆ ಮುಲ್ಲಾ, ಸುಲ್ತಾನ್ ಹೈದರಾಲಿಗೆ ಚಾಡಿ ಹೇಳುತ್ತಾನೆ. ಸುಲ್ತಾನರು ಅವನನ್ನ ವಿಚಾರಣೆ ಮಾಡಲು ಕರೆಸುತ್ತಾರೆ. ಹೈದರಾಲಿಯ ಮುಂದೆಯೂ ಮಾದನ ವಾದ ಬದಲಾಗದು.

ಬುದ್ಧಿ ನನ್ನನ್ನು ನಮ್ಮ ಅವ್ವ ಮಾರ‍್ಯಮ್ಮನಿಗೆ
ಮೀಸಲು ಮಾಡಿಕೊಟ್ಟವಳೆ;
ಸಿದ್ಯೋರ ದೇವರಿಗೆ ನಾ ಯಾಸ ಹಾಕಿದ್ರೆ
ಗಾಶಿ ಮಾಡ್ಯಾಳು ಮಾರ‍್ಯಮ್ಮ;

ನೀಲಗಾರನ ನೇಮ ಬಹಳೈತೆ ಮಾಸೋಮಿ,
ಖಂಡಿತದ ಬದುಕು ನನ್ನೊಡೆಯ;
ಸೂಲಕ್ಕೆ ಯಿಕ್ಕಿದರು ಪೂಜೇಲಿ ಒಪ್ಪಿಸದ
ಹೆಂಡ ಕುಡಿಯೋಲ್ಲ ನೀಲಗಾರ.

ಹೈದರಾಲಿ ಸುಲ್ತಾನರಿಗೆ ಇವನ ವಾದ ಕೇಳಿ ಆಶ್ಚರ್ಯ ಆಗುತ್ತದೆ. ಹಿಂದೆಲ್ಲೂ ಯಾರೂ ಅವನ ಮುಂದೆ ಈ ಬಗೆಯ ವಾದ ಮಾಡಿರಲಿಲ್ಲ. ಪೂರ್ಣಯ್ಯನವರಂತಹ ಬ್ರಾಹ್ಮಣರೂ ಕೂಡ ಇವರ ಮುಂದೆ ತಗ್ಗಿ ಬಗ್ಗಿ ನಡೆಯುತ್ತಿರುವಾಗ ಈ ಮಾರಮ್ಮನ ಭಕ್ತ ಯಾವ ದೊಡ್ಡ ಆಸಾಮಿ ಅಂತ ಅನಿಸುತ್ತದೆ ಅವರಿಗೆ. ನಮ್ಮ ದೇವರ ಮುಂದೆ ಬ್ರಾಹ್ಮಣರೂ ತಲೆ ಬಾಗಿ ನಡೀತಾರೆ, ನೀನ್ಯಾಕೆ ತಲೆ ಬಾಗೋಲ್ಲ? ಅಂತ ಸುಲ್ತಾನರು ಮಾದಣ್ಣನ ಕೇಳುತ್ತಾರೆ. ಅದಕ್ಕೆ ಮಾದಣ್ಣನ ಉತ್ತರ ಸಿದ್ಧವಾಗಿಯೇ ಇರುತ್ತದೆ.

ಬ್ರಾಮರ ದೇವರು ಬರಿ ಬೋನ* ಉಣತಾರೆ;
ಕೋಪ ಮಾಡಿದಾಗ ಐನೋರು
ಆ ಮಂತ್ರ ಈ ಮಂತ್ರ ಹೇಳಿ ತೆಂಕಾಯೊಡೆದು
ದೂಪ ಹಾಕಿದರೆ ಮರಿತಾರೆ
(*ಬೋನ ಎಂದರೆ ಅನ್ನ)

ನಮ್ದೇವ್ರು ಮಾರ್‍ಯಮ್ಮ ಕುರಿಕೋಣ ತಿಂಬೋಳು
ಬಾಬ್ತೆಗೆ ನಾನು ನಡಕೊಂಡ್ರೆ
ಒಂದೆ ಮಾತಂತಾಳೆ, ತಾ ನಿನ್ನ ತಲೆಕಾಯಿ
ತಾ ಬೋಳಿ ಮಗನೆ ಅಂತಾಳೆ

ಗಡ್ಡ ನೀವುತ್ತಾ ನವಾಬರು ನೀಲಗಾರನನ್ನು ಕುರಿತು "ಹಾಗಾದರೆ ನಿನ್ನ ದೇವರು ಮಾರಮ್ಮ, ಈ ಶ್ರೀರಂಗಪಟ್ಟಣದ ರಂಗನಾಥಸ್ವಾಮಿಗಿಂತಾ ದೊಡ್ಡವಳೋ?" ಅಂತ ಪ್ರಶ್ನಿಸುತ್ತಾರೆ. ಅದಕ್ಕೆ ಮಾದಣ್ಣ ಹೀಗೆನ್ನುತ್ತಾನೆ. "ಸುಲ್ತಾನರೇ, ಪಟ್ಟಣದ ಅರಸರು ನಿಮಗಿಂತ ದೊಡ್ಡೋರು ಅಂತ ಎಲ್ಲ ಹೇಳ್ತಾರೆ. ಯಾರಾದರೂ ಅವರ ಮುಂದೆ ತಪ್ಪು ಮಾತನಾಡಿದರೆ ಸುಮ್ಮನೆ ನಗುತ್ತಾ ಅವನನ್ನು ಕ್ಷಮಿಸಿ ಬಿಡುತ್ತಾರೆ ಅಂತಲೂ ಜನ ಹೇಳುತ್ತಾರೆ. ಆದರೆ ನಿಮ್ಮ ಮುಂದೆ ನಾನು ಹಾಗೆ ತಪ್ಪು ಮಾಡಿದರೆ ನೀವು ನನ್ನನ್ನು ಸುಮ್ಮನೆ ಬಿಟ್ಟೀರಾ? ಎರಡೇಟು ಬಿಟ್ಟು, ಗಲ್ಲಿ ಶಿಕ್ಷೆ ಹೆದರಿಸಿ ನನಗೆ ಚೆನ್ನಾಗಿ ಬುದ್ಧಿ ಕಲಿಸ್ತೀರಿ.

ಅರಸರು ನಗಬಹುದು; ಅರಸಾಗಿ ಇರಬಹುದು;
ಸುತ್ತು ಕಡೆ ನಿಂತ ಪರಿವಾರ
ಕುರಿ ಕೋಳಿ ತಿಂಬೋದು ಸುಮ್ಮನಿದ್ದರಾದಾತೆ
ಕತ್ತಿ ಮುಚ್ಚಿದರೆ ನಡೆದಾತೆ?

ರಂಗಪ್ಪನ್ಹಂಗೆ ಮಾರ್ಯಮ್ಮ ನಗನಗತಿದ್ರೆ
ಜನ ಅವಳ ನೋಡಿ ನಕ್ಕಾತು;
ಹಂಗೀಶಿ ನುಡಿದಾತು, ಕೊಂಕ್ಫಲೆತ್ಕೊಂಡ್ಹೋಗಿ
ಮನೆ ಮುಂದೆ ಮೆಟ್ಲು ಮಾಡ್ಯಾತು

ಮಾದನ ಮಾತು ಕೇಳಿ ಸುಲ್ತಾನರಿಗೆ ನಗು ಬರುತ್ತದೆ. ಭೇಷ್ ಮಾದಣ್ಣ ನೀನೇನೂ ವೇಷ ಹಾಕೋದು ಬೇಡ. ಅಂತ ಹೇಳಿ ಎಲೆಡಕೆ ಕೊಟ್ಟು ಮರ್ಯಾದೆ ಮಾಡಿ ಅವನನ್ನ ಕಳಿಸುತ್ತಾರೆ.

ಕಟ್ಟೇಮಳಲವಾಡಿ ಮಾದಣ ಮಾತನ
ನಾ ನಿಮಗೆ ಈಗ ಹೇಳಿವಿ
ಗಟ್ಯಾಗಿ ನೀವೆಲ್ಲ ನಿಮ್ಮ ದೇವ್ರ ನಂಬಿರ್ರ
ನಾ ನಮ್ಮ ದೇವ್ರ ನಂಬತೀನಿ.

ಹಿಂದೊಮ್ಮೆ ಓದಿದ್ದ ಈ ಕವನವನ್ನು ಮತ್ತೆ ಓದಿ ಸಂತಸಪಟ್ಟೆ, ಇಂತಹ ಸಂತಸಗಳಿಂದ ತುಂಬಿದ್ದ ಅಂದಿನ ಸಾಹಿತ್ಯಲೋಕವನ್ನು ಅನುಭವಿಸಿ, ಈಗಲೂ ಅನುಭವಿಸುತ್ತಿರುವುದೇ ನಮ್ಮ ಸೌಭಾಗ್ಯ. ಫೇಸ್ ಬುಕ್‌ನ ಲೈಕ್‌ಗಳಲ್ಲಿ ಸಂತಸವನ್ನು ಹುಡುಕುವ ಇಂದಿನ ಪೀಳಿಗೆ, ನಿಜಕ್ಕೂ ಸಂಸತದ ಒಂದು ಅಮೂಲ್ಯ ಸೆಲೆಯನ್ನು ಕಳೆದುಕೊಂಡಿದೆ ಅನಿಸುತ್ತದೆ ನನಗೆ.

**- ಶಿವಕುಮಾರ್**

---


**ಅಪರಂಜಿ ಚಂದಾದಾರರ ಸಂಖ್ಯೆಯನ್ನು ಇಮ್ಮಡಿಗೊಳಿಸಿ!**

**ಅದು ಸುಲಭ, ನೀವೇ ಮಾಡಬಹುದು!**

ಹೇಗೆ?

ಇನ್ನೊಬ್ಬ ಚಂದಾದಾರರನ್ನು ಹುಡುಕಿಕೊಡಿ

ನಿಮ್ಮ ಸ್ನೇಹಿತರನ್ನು ಅಪರಂಜಿ ಓದುಗರನ್ನಾಗಿ ಮಾಡಿ

**ಅಷ್ಟು ಸುಲಭ!**

ವಾರ್ಷಿಕ ಚಂದಾ: ರೂ. 100/-

ಆಜೀವ ಸದಸ್ಯತ್ವ: ರೂ. 750/-

**ಇಂದೇ ಈ ಕೆಲಸ ಪ್ರಾರಂಭಿಸಿ**

# ಮೊಬೈಲ್ ಅನ್ನೋ ಮರ್ಕಟ.....

**- ಗುಂಡುರಾವ್ ದೇಸಾಯಿ**

ಅಕಟಕಟಾ ಇಟು ದಿನ, ಖೊಡಿ ತಂದು ಟಿ.ವಿ.ನ್ನ ದೊಡ್ಡ ದರಿದ್ರ ಅಂತ ಬಯ್ಯುಕೋತಿದ್ವಿ ಆದರ ಅದಕ್ಕಿಂತಲೂ ಅಷ್ಟ ದರಿದ್ರ ಬಂದು ಒಕ್ಕರಸ್ತಾದ ಅಂತ ಯಾರು ಕೂಡಾ ಭಾವಿಸಿರಲಿಲ್ಲ. ಹುಟ್ಟಿದ ಕೂಸಿನಿಂದ ಹಿಡಿದು ಇಂದು ನಾಳೆ ಸಾಯೋ ಮುದಕರಲ್ಲೂ ಲಾಲಾರಸ ಬಿಡೋ ಹಾಂಗ ಮಾಡಿರುವಂತಹ ಈ ಮೊಬೈಲ್ ಅನ್ನ ಏನಂತ ಕರಿಯೋಣ.

ಎರಡು ದಶಕಗಳ ಹಿಂದೆ ಕುಕ್ಕರು ಕೂತಿರೋ ದೂರವಾಣಿಗೆ ಶೆಡ್ ಹೊಡದು ಬಂದ ದೊಡ್ಡ ದಪ್ಪ ಗಾತ್ರದ ಮೊಬೈಲ್ ಈ ಪರಿ ಧೂಳ ಎಬ್ಬಸ್ತಾದ ಅಂತ ಅದನ್ನು ಕಂಡು ಹಿಡಿದಾತನೂ ಎಣಿಸಿರಲಿಲ್ಲವೇನೋ. ಅನ್ವೇಷಣ ಹಸಿವು ಒಂದು ಕಾಲಕ್ಕೆ ದೈತ್ಯನಾಗಿ ಮೆರೆದ ನೋಕಿಯಾ ಕಂಪನಿನೆ ಬಲಿತೆಗೆದುಕೊಂಡು ಬಿಟ್ಟಿದೆ. ಇದು ಖಂಡಿತ ಬುದ್ಧಿ ಇರುವವರ ಬದಲಾಗುತ್ತಿರುವವರ ಕಾಲ ಎಂದು ಮೊಬೈಲ್ ಜಗಜ್ಜಾಹೀರು ಮಾಡಿ ತೋರಿಸಿದೆ. ಮೂರು ನಾಲ್ಕು ದಶಕಗಳ ಹಿಂದೆ ಟಿವಿ ಇದ್ದೋರು ಠೀವಿಯಿಂದ, ಲ್ಯಾಂಡ್ ಫೋನ್ ಇದ್ದೋರು ಲಾರ್ಡ್ ಆಗಿ ಮೆರಿತಿದ್ರು. ಟಿವಿ ನೋಡಾಕ ಅವರ ಮನಿಗೆ ಭಯ ಭಕ್ತಿಯಿಂದ ಹೋಗುವಾಂಗ, ದೂರವಾಣಿ ಬಂದಾಗ ಕೇಳಾಕೂ ಅದೆ ಭಾವದಿಂದ ಹೋಗಬೇಕಾಗಿತ್ತು. ಲ್ಯಾಂಡ್ ಫೋನ್ ಇದ್ದೋರು ದೊಡ್ಡ ಕಾಲರ್ ಟೋನ್ ಇಟ್ಟು ಓಣಿಮಂದಿ ಕಿವಿಯನ್ನೆಲ್ಲ ತಮ್ಮ ಮನಿ ಕಡೆ ಇರಿಸುವಂತೆ ನೋಡಿಕೊಳ್ಳೋರು. ಒಂದು ಕಾಲ್ ರಿಂಗಾತು ಅಂದ್ರ ಸುತ್ತಮುತ್ತಲಿನ ಮನೆಯವರೆಲ್ಲ ಆ ರಿಂಗಿಗೆ ಕಿವಿಯಾಗೋರು. ಆದರ ಒಂದು ಮಾತ್ರ ಸತ್ಯ ಫೋನ್ ಇದ್ದವರು ಧೀಮಾಕು ಬಡಿತಿದ್ರಾದರೂ ಕಾಲ್ ಬಂದಾಗ ಶಾಂತಮ್ಮ, ಮಾಲಮ್ಮ, ಸುನೀತಾ ನಿಮ್ಮದು ಅಂತ ಕರೆಯೋದನ್ನ ಮರಿತಿರಲಿಲ್ಲ. ಅವರ ಮನಿಗೆ ದೇವಸ್ಥಾನಕ್ಕೆ ಹೋದಂತೆ ಭಯಭಕ್ತಿಯಿಂದ ಹೋಗಿ ಫೋನ್ ಹ್ಯಾಂಡಲ್ ಎತ್ತಿ ಒಂದು ಹಿತಮಿತದಲ್ಲಿ ಮಾತಾಡಿ ಬರಬೇಕಾಗಿತ್ತು. ಕಾಲ ಬದಲಾಗಿ ದೂರವಾಣಿ ಸಂಖ್ಯೆ ಹೆಚ್ಚಿತು. ಆನಂತರ ಎಸ್.ಟಿ.ಡಿ., ಐ.ಎಸ್.ಟಿ.ಡಿ.ಗಳ ಭರಾಟೆ ಸುರುವಾತು. ಆ ಫೋನ್ ಮಾಡಕ ಕ್ಯೂ ಎಷ್ಟು ಅಂದಿರಿ? ಅದೇನೋ ಎಸ್.ಟಿ.ಡಿ./ಐ.ಎಸ್.ಟಿ.ಡಿ. ಒಂದು ಕಾಲಕ್ಕೆ ಸುಂದರ ಮಾಯಾ ಪ್ರಪಂಚವನ್ನ ಸೃಷ್ಟಿಸಿತ್ತು. ಎಸ್.ಟಿ.ಡಿ.ಗಳಲ್ಲಿ ದುಡ್ಡುಕೊಟ್ಟು ದೂರದಲ್ಲಿರುವವರಿಗೆ, ಆಪ್ತರ ಜೊತೆ ಯಾರ ಹಂಗಿಲ್ಲದೆ ಫೋನ್ ಮಾಡುವ ಸೊಗಸಾದ್ರು ಎಂತಹದು. ಮಾತಾಡುವುದಕ್ಕೆ ಎಷ್ಟು ಖುಷಿ. ಅಂಗಡಿ ತಗದಾವ ಗಳಿಸಿದ್ದ ಮಾತ್ರ ಸಿಕ್ಕಾಪಟ್ಟೆ, ಮೊದಲ ಕಾಲ್ ಸೆಕೆಂಡಗೆ ಮೂರುವರೆ ರೂಪಾಯಿಂದ ಸ್ಟಾರ್ಟ್ ಆಗೋದು, ಸೆಕೆಂಡು ಸೆಕೆಂಡಿಗೂ ಕಾಲ್ ರೇಟ್ ಜಾಸ್ತಿ ಆಗತಾ ನಡಿಯೋದು. ಹಗಲಲ್ಲಿ ಮಾಡಿದ್ರ ಬೇರೆ ರೇಟು ರಾತ್ರಿ ಮಾಡಿದ್ರ ಬೇರೆ ರೇಟು. ಹೆಚ್ಚಾಗಿ ರಾತ್ರಿನೇ ಎಲ್ಲರೂ ಪ್ರಯತ್ನಿಸೋರು. ಐದು ನಿಮಿಷ ಆ ಫೋನ್ ಬೂತ್ ಒಳಗ ಹೊಕ್ಕು ಹೊರಬರುವಷ್ಟರಲ್ಲಿ ಮೂವತ್ತು ನಲವತ್ತು ರೂಪಾಯಿ ಆಗಿರೋದು. ರೊಕ್ಕ ಹೋದ್ರು ಚಿಂತೆ ಇಲ್ಲ ಆ ವಿಸ್ಮಯವನ್ನು ಅನುಭವಿಸಿದೆಯಲ್ಲ ಅದು ಸ್ಮರಣೀಯ.

ಆಮೇಲೆ ಕ್ವಾಯನ್ ಬೂತ್ ಬಂದ್ವು. ಅದು ಬದಲಾಗಿ ಮೊಬೈಲ್ ಅವತಾರ ಶುರುವಾಯಿತು. ಅದು ಹೊಸದಾಗಿ ಬಂದಾಗ ದಿಗಿಲು ಪಟ್ಟವರ ಬಾಳ. ವೈರ್ ಕನೆಕ್ಷನ್

ಇಲ್ಲ, ಮಣಭಾರದ ಆ ಪುಟ್ಟ ಆಕೃತಿಯಲ್ಲಿ ಕಾಲ್ ಮಾಡಿದಾಕ್ಷಣ ಧ್ವನಿ ಬರುವುದೆಂದರೇನು? ನಮ್ಮ ರೇಡಿಯೋ ನನಗೆ ಅಚ್ಚರಿ ಹುಟ್ಟಿಸದಿದ್ದರೂ ಮೊಬೈಲ್ ಹುಟ್ಟಿಸುತ್ತಿತ್ತು. ಆದರ ಬೆಲೆ ಗಗನ ಕುಸುಮ. ಸಿಮ್ ಕಾರ್ಡ ಬೆಲೆ ಆಕಾಶದಷ್ಟು, ರೊಕ್ಕ ಕೊಟ್ಟರೂ ಸಿಗದ ಪರಿಸ್ಥಿತಿ. ಎರಡು ಮೂರು ಸಾವಿರ ರೂಪಾಯಿಗೆ ಕಾಳ ಸಂತೆಯಲ್ಲಿ ಮಾರಾಟ. ಒಂದು ಸಿಮ್ ಪಡೆಯಲು ಎಂ.ಎಲ್.ಎ., ಎಂ.ಪಿ.ಗಳ ಶಿಫಾರಸ್ಸು ಪತ್ರಗಳು ಬೇರೆ. ಈಗ.........? ಬೆಲೆ ಇಲ್ಲದ ಕಾಸಿಗೆ ಸಿಮ್ ಸಿಗತಾವ ಅದು ಐವತ್ತೋ ನೂರು ರೂಪಾಯಿಯ ಎಕ್ಸ್ಟ್ರಾ ಟಾಕ್ ಟೈಮ್ ನೀಡಿ. ಈಗ ಅದ್ಯಾವುದೋ ಜಿಯೋ ಸಿಮ್ ಬಂದಿದೆ. ಎಲ್ಲಾನೂ ಫ್ರೀ ಅಂತೆ. ಆರ್ಡನರಿ ಸೆಟ್ ಆದ ಮೇಲೆ ಕಲರ್ ಫೋನ್ಗಳು ಬಂದುವು, ಹಾಡು ಕೇಳುವಂತವು ಬಂದ್ವು, ಚಿತ್ರ ಮೆಸೇಜ್ ಕಳಸಾವು ಬಂದ್ವು, ಕಡ್ಡಿ ತೊಂಡು ಚುಚ್ಚವು ಬಂದ್ವು, ಟಚ್ ಸ್ಕ್ರೀನ್ ಬಂದವು. ಯಾವಾಗ ಆಂಡ್ರಾಯಿಡ್ ಪ್ರಪಂಚಾ ಬಂತೋ ಸ್ಮಾರ್ಟ್ ಫೋನ್‌ಗಳ ಹಾರಾಟದಲ್ಲಿ ಎಲ್ಲಾ ಫೋನ್‌ಗಳು ಟ್ರಾಕಟರ್ನಾಗ ಸಿಕ್ಕ ಕುರಿಗಳಂತೆ ನುಜ್ಜುನುಜ್ಜಾಗಿ ಹೋಯ್ತು. ಅನಭಿಷಕ್ತ ದೊರೆಯಾಗಿ ಮೊಬೈಲ್ ಪ್ರಪಂಚ ಆಳಿದ ಕಂಪನಿಗಳು ಖೋಗಯಾ ಅನ್ನೊ ಹಾಗಾಯಿತು.

ಐವತ್ತು ವರ್ಷಗಳಲ್ಲಿ ತಂತ್ರಜ್ಞಾನದ ಯಾವ ಉಪಕರಣವೂ ಮಾನವನ ಮೇಲೆ ಇಷ್ಟು ಸವಾರಿ ಮಾಡಿದ್ದಿಲ್ಲ ಆದರೆ ಮೊಬೈಲು ಮಾಡುತ್ತಿದೆ. ಫ್ರೆಂಡ್ ಈಜ್ ಸೆಕೆಂಡ್ ವೈಫ್ ಅಂತಿದ್ರು, ವೈಫ್/ಹಸ್‌ಬಂಡ್ ಸೆಕೆಂಡ್ ಆಗ್ಯಾಳ/ನ ಫಸ್ಟ್ ಪ್ಲೇಸನ್ಯಾಗ ಮೊಬೈಲ್ ಕೂತಾದ. ಹೆಂಡ್ತಿ/ಗಂಡನ ಮುಖಾನ ದಿನದಾಗ ಎಷ್ಟು ನೋಡೊತಿವೋ ಅದರ ಹತ್ತುಪಟ್ಟು ಮೊಬೈಲ್‌ನ ಮುಖ ನೋಡ್ತೀವಿ. ನನ್ನ ಮಾತು ವೈಸ ವರ್ಸಾ ಅನ್ನಕೊಬೇಕು. ಅದು ಹೆಣ್ಣುಮಕ್ಕಳಿಗೂ ಅನ್ವಯ. ಮೊಬೈಲ್‌ನ ಪಯಣದ ಮೊದಲಲ್ಲಿ ಇಷ್ಟು ಅಡಿಕ್ಷನ್ ಇರಲಿಲ್ಲ, ಯಾವಾಗ ಅಂತರ್ಜಾಲದ ಕರಿನೆರಳು ಮೊಬೈಲ್‌ನತ್ತ ಬಿತ್ತು ಆಂಡ್ರೈಡ್, ಐ.ಓ.ಎಸ್., ಪ್ರಪಂಚ ಬಂತೋ ಜಗತ್ತೇ ಅಂಗೈಯಲ್ಲಿ ಆತು. ಎಂತಹ ಜಗತ್ತನ್ನು ಈ ಪುಟ್ಟ ಕೈಗನ್ನಡಿಯಲ್ಲಿ ಕಾಣುವಂತಾಯಿತು. ಗೂಗಲೇ ವಿಶ್ವಗುರು ಆಯ್ತು. ಕಂಡು ಹಿಡಿದ ಪುಣ್ಯಾತ್ಮನ ಎಷ್ಟು ಹೊಗಳಿದರೂ ಸಾಲದು. ಈ ಪುಟ್ಟ ವಿಸ್ಮಯವನ್ನು ದೇವರೆನ್ನುವರು ನೋಡಿದರೆ ದಂಗಾಗದೆ ಇರಲಾರ. ಅಂತಹ ಮಾಯಾಸೃಷ್ಟಿಯನ್ನು ನಿರ್ಮಿಸಿದೆ.

ಮೊಬೈಲ್ ಅನ್ನುವ ವಿಸ್ಮಯ ಸೃಷ್ಟಿ ಹಲವು ಉದ್ಯಮಗಳನ್ನು ಕೊಚ್ಚಿ ಹಾಕಿದೆ. ಹಲವು ದಶಕಗಳ ಕಾಲ ಪಾರುಪತ್ಯ ಮೆರೆದ ಹೆಚ್.ಎಂ.ಟಿ. ಕಂಪನಿ ಬೀಗ ಮುದ್ರೆ ಜಡಿಸಿಕೊಂಡಿದ್ದು ಯಾರ ದೆಸೆಯಿಂದ. ''ನನಗ ಮದುವಿಗೆ ಹೆಚ್.ಎಂ.ಟಿ. ವಾಚ್ ಬೇಕು?'' ಎಂದು ಡಿಮ್ಯಾಂಡ ಇಟ್ಟು, ಕೊಡುವುದನ್ನು ಮರೆತಿದ್ದಾಗ ಅದನ್ನು ಕೊಡಸಾತನ ತಾಳಿನ ಕಟ್ತೊಲ್ಲ ಅಂತ ಹಠಹಿಡಿದು ಕುಳಿತಿದ್ದ ಗಂಡುಗಳೆಷ್ಟೊ? ಹಠಹಿಡಿಯುವಷ್ಟು ಮನೆಮಾತಾಗಿದ್ದ ವಾಚ್ ಹೇಳಹೆಸರಿಲ್ಲದಂತಾಗಿದ್ದು ಯಾರ ಕಾರಣದಿಂದ. ಅದು ಹೋಗಲಿ ಕ್ಯಾಲುಕಲೇಟರ್ - ನಮ್ಮ ಮೆದುಳಿನ ಶತ್ರು ಅದನ್ನು ನಾಮಾವಶೇಷ ಮಾಡಲು ಹೊರಟಿರುವವರು ಯಾರು? ನಾವು ಪಿ.ಯು.ಸಿ. ಓದೋ ಕಾಲಕ್ಕ ನಮ್ಮ ಸೀನಿಯರು ಎಲ್ಲಾ ಆಪರೇಷನ್ ಇರೋ ಸೈಂಟಿಫಿಕ್ ಕ್ಯಾಲುಕಿಲೇಟರ್ ಬಳಸತಿದ್ರು. ಅದಕ್ಕ ಎಷ್ಟು ಡಿಮ್ಯಾಂಡು. ಅದು ಬಿಡಿ ಎಂತೆಂತಾ ತರಾವರಿ ಬ್ಯಾಟರಿಗಳಿದ್ದುವು, ಚಾರ್ಜಬಲ್ ಬ್ಯಾಟರಿ ಬಂದ ಮೇಲೆ ಡಿಮ್ಯಾಂಡ್ ಕಡಿಮೆ ಆಯಿತು, ಮೊಬೈಲ್ ಬಂದ ಮ್ಯಾಲೆ ನೆಲಕಚ್ಚಿಕೊಂಡ ಹೋತು. ಪಾಪ ಶೆಲ್ಲುಗ್ಗಳು! ರೇಡಿಯೋ, ಟೇಪರಿಕಾರ್ಡರ್, ಕ್ಯಾಮರಾ, ಬ್ಯಾಟರಿಗಳಿಗೆ

ಆಧಾರವಾಗಿದ್ದ ಅವುಗಳ ಅಸ್ತಿತ್ವ ಏನಾಗಿದೆ. ಅವುನು ಒಂದು ಕಾಲಕ್ಕ ಶೆಲ್ಲುಗಳು ಉರದದ್ದು ಸಣ್ಣಾಗಿಲ್ಲ. ಅವುಗಳಲ್ಲಿ ಹಾಕಿಟ್ರ ಪವರ್ ಕಳಕಳವು, ತಗದು ಭೂಸಂಪರ್ಕಕ್ಕೆ ಇಟ್ರ ಡೌನಾಗಿ ಬಿಡೋವು. ಜಾಸ್ತಿ ಬಳಸಿದ್ರೆ ವೀಕ್ ಆಗಿ ಬಿಡೋವು. ತಿಂಗಳೊಳಗ ಮತ್ತೆ ಮತ್ತೆ ಹೊಸ ಶೆಲ್ ತರಬೇಕಂದ್ರ ಎಷ್ಟು ಧಾವತಿ, ಎವರಿ ಡೇ, ನವಿನೋ, ನಿಪ್ಪೋ ಯಾವ್ಯಾವೋ ಶೆಲ್‌ಗಳಿಗೆ ಎಷ್ಟು ಡಿಮ್ಯಾಂಡು? ಅಂತವುಗಳನ್ನು ದಿವಾಳಿ ಎಬ್ಬಿಸಿದ್ದು ಯಾರು? ಅದೂ ಬಿಡಿ ಒಂದು ಕಾಲದ ಜನಸಂಪರ್ಕದ ಸೇತುವೆ ರೇಡಿಯೋವನ್ನು, ಮನೋರಂಜಿಸುತ್ತಿದ್ದ ಟೇಪ್ ರೆಕಾರ್ಡರನ್ನು, ಕ್ಯಾಸೆಟ್ಗಳನ್ನು ಧೂಳುತಿನ್ನುವಂತೆ ಅವುಗಳ ಅಸ್ತಿತ್ವವೇ ಇಲ್ಲವಂತೆ ಕಷ್ಟದ ಪರಿಸ್ಥಿತಿ ನಿರ್ಮಾಣ ಮಾಡಿದವರಾರು? ಇತ್ತೀಚಿಗೆ ಮೈಕ್ರೋ ಚಿಪ್ ಬಂದು ಸಿ.ಡಿ. ಡಿ.ವಿ.ಡಿ.ಗಳ ಪ್ರಪಂಚಕ್ಕ ಆಗಾಥ ತಂದೊಡ್ಡುತ್ತಿರುವುದು ಯಾವುದು? ಸ್ಟಾಪ್ ವಾಚು, ಅಲರಾಮ್ ಟೈಂಪೀಸು ಮೂಕಬತ್ತಿ ಮಾಡಿದವರಾರು? ಗೇಮು-ಗೀಮು, ಚಿತ್ರ-ಪತ್ರ, ಸಾಂಗು-ಗೀಂಗು ಒಂದ ಎರಡ. ಅದು ಹೋಗಲಿ ಕೊಡೆಕಾ, ಕ್ಯಾನನ್ ಅದ್ಯಾವ್ಯಾವೋ ಕ್ಯಾಮರಗಳನ್ನ ಕೊಂಡು ಅದಕ್ಕ ರೀಲ್ ತುಂಬಿಸಿ ಜಿಪುಣತನದಿಂದ ಫೋಟೋ ತೆಗೆಯೋದು, ತೆಗೆಸಿಕೊಳ್ಳೋದು ನಡೀತಿತ್ತು. ರೀಲ್ ಎಲ್ಲಾ ಮುಗಿದ ಮೇಲೆ ಡೆವಲಪ್ಪಿಂಗ್ ಮಾಡಿಸಿ ಅದರಲ್ಲಿ ಚೆನ್ನಾಗಿ ಬಂದ ಫೋಟೋ ತೊಳೊಸೋದು, ಅದರ ರೀಲಿನಲ್ಲಿ ನಮ್ಮ ವಿಚಿತ್ರ ಆಕೃತಿಯನ್ನು ನೋಡಿ ಸಂಭ್ರಮಿಸೋದು ಇದನ್ನೆಲ್ಲ ಡಿಜಿಟಲ್ ಕ್ಯಾಮರ್ ಬಂದು ಕಸಗಂಡ್ವು. ನಂತರ ಫೋಟೊ, ವೀಡಿಯೋಗಳಿಗೆ, ಫೋಟೊ, ವೀಡಿಯೋ ತೆಗೆಯುವವರಿಗೆ ಕಿಮ್ಮತ್ತೆ ಇಲ್ಲದಾಂಗ ಮಾಡಿದವರಾರು? ಮುಖ ನೋಡಿಕೊಳ್ಳಾಕ ಕನ್ನಡಿ ಬೇಕು ಆದರ ಈಗ ಮೊಬೈಲ್ ಅದಲ್ಲ, ಮೊನ್ನೆ ಯಾವುದೋ ಪ್ರವಾಸಕ್ಕ ಹೋಗಿದ್ವಿ. ಶೇವಿಂಗ್ ಮಾಡಿಕೊಳ್ಳಬೇಕಾಗಿತ್ತು ಕನ್ನಡಿಗಾಗಿ ತಡಕಾಡಿದೆ. ಗೆಳೆಯ 'ಹುಚ್ಚಾ, ಯಾಕ ಕಾಲದಾಗಿದ್ದಿ ಅಂಗೈಯಾಗ ಬೆಣ್ಣಿ ಇಟ್ಟುಕ್ಕೊಂಡು ತುಪ್ಪಕ್ಕ ಹುಡಕಾಡದಂಗಾತು' ಅಂತ ನನ್ನ ಮೊಬೈಲನಾಗ ಕ್ಯಾಮರ ಆನ್ ಮಾಡಿ ಮುಖ ನೋಡಿಕೊ ಅಂತ ಕೊಟ್ಟ, ನನಗೂ ಶಾಕ್ ಆತು ಇಷ್ಟು ಸಣ್ಣ ವಿಷಯಕ್ಕ ತಲಿ ಓಡಲಿಲ್ಲ ಅಂತ. ಇನ್ನೂ ಯಾವುದೋ ಸಮಾರಂಭದ ಭಾಷಣಕ್ಕ ಅಥವಾ ವಿಷಯಕ್ಕ ಸಾಕಷ್ಟು ಪುಸ್ತಕಗಳನ್ನು ಓದಬೇಕಿತ್ತು, ಪತ್ರಿಕೆಗಳನ್ನ ತಿರುಗಿಸಬೇಕಿತ್ತು. ಆದರ ಈಗ ಏನು ವಿಷಯ ಬೇಕೊ ಟೈಪ್ ಹೊಡದ್ರ ಸಾಕು ಎಲ್ಲಾ ಮಾಹಿತಿ ಕ್ಷಣಾರ್ಧದಾಗ ಕಾಣ ಸಿಗತಾದ. ನೋಡ ಸಿಗತಾದ. ಒಂದೇ ಎರಡೆ ಮೊಬೈಲು ಎಷ್ಟೆಲ್ಲಾ ಉದ್ಯಮಗಳನ್ನ ಕಂಗಾಲು ಮಾಡ್ಯಾದ ಯೋಚಿಸ್ರಿ. ಇಷ್ಟೆಲ್ಲವನ್ನು ಆಪೋಷನ್ ತೆಗೆದುಕೊಂಡ ಈ ಆಧುನಿಕ ಮೊಬೈಲ್ ಇನ್ನೂ ಕೆಲವೇ ದಿನಗಳಲ್ಲಿ ಟಿ.ವಿ.ಯನ್ನ, ಗಣಕ ಯಂತ್ರವನ್ನ ಬಲಿತೆಗೆದುಕೊಳ್ಳದೆ ಇರುತ್ತೇನ್ರಿ? ವಿಶೇಷ ಅಪ್ಲಿಕೇಷನ್ ಇರೋ ಮೊಬೈಲ್‌ನಿಂದ ಅವಕ್ಕೂ ಗಂಡಾಂತರ ಬರತಾ ಇದೆ ಅಂದ್ರೇನು?

ಎಂತಾ ಶಕ್ತಿ ಈ ಮೊಬೈಲ್‌ಗೆ ಇದೆ ಅಂತೀನಿ. ಐದಾರು ವರ್ಷಗಳಲ್ಲೆ ಭಾರಿ ಕ್ರಾಂತಿ ಮಾಡಿದ. 2011ರ ಜನಗಣತ್ಯಾಗ ತಿಳಕೊಂಡಾಂಗ ಶೇ.75ರಷ್ಟು ಮೊಬೈಲ್ಗಳು ದೇಶದಾಗ ಆಗ ಇದ್ವು. ಆದರ ನನಗನಿಸಿದ ಮಟ್ಟಿಗೆ ನಮ್ಮ ಜನಸಂಖ್ಯೆನ ಸೆಂಟ್ ಪರ್ಸೆಂಟಾಗಿ ಸ್ಪೈಡ್ ಹೊಡದೆ ಹೊಡಿದಿರಲೇಬೇಕು ಅನ್ನೋದು ನನ್ನ ಬಲವಾದ ನಂಬಿಕೆ. ಅಲ್ಲರಿ ಹೆಣದಂತಾ ಫೋನಿದ್ದಾಗ ಒಂದಕ್ಕ ಸಾಕ ಸಾಕೆನಿಸುತ್ತಿತ್ತು. ಈಗ ಸ್ಮಾರ್ಟ್ ಫೋನ್ ಬಂದಮ್ಯಾಲೆ ಹಳೇ ಫೋನ್ ಜೊತಿಗೆ ಬ್ಯಾರೆ ಸ್ಟೆಪ್ನಿ ಇದ್ದಾಂಗ. ಏಕಪತ್ನಿ ಹೊಂದಿದಂತಹ ಶ್ರೀರಾಮಚಂದ್ರನಂತವರು ಬೇಕಾದಷ್ಟು ಜನ ಸಿಕ್ಕಾರು ಏಕ ಮೊಬೈಲ್ ಫೋನ್ ಹೊಂದಿದ ಮೊಬೈಲಾಮಚಂದ್ರರು ಸಿಕ್ಕಾರೆ? ನೋಚಾನ್ಸ್.

ಕಳೆದ ಹಲವಾರು ದಶಕಗಳಿಂದ ನಾಡಿನ ಅನಕ್ಷರಸ್ಥರನ್ನು ಅಕ್ಷರಸ್ಥರನ್ನಾಗಿಸಲು ಪ್ರಯತ್ನಿಸುತ್ತಿರುವ ಇಲಾಖೆ ನಿಜವಾಗಿ ಗುರಿಸಾಧಿಸಿದೆಯೋ ಇಲ್ಲೋ ಮೊಬೈಲ್ ಖಂಡಿತ ಆ ಸಾಧನೆ ಮಾಡಿದೆ. ನಿರಕ್ಷರ ಕುಕ್ಷಿಗೂ ಬಾರದ ಭಾಷೆ ಕಲಿಸಿದೆ, ಆಪರೆಟಿಂಗ್ ತಂತ್ರಜ್ಞಾನ್ನ ತಿಳಿಸಿಕೊಟ್ಟಿದೆ. ಕನ್ನಡಕ್ಕಿಂತಲೂ ಇಂಗ್ಲೀಷ್ ಅಕ್ಷರವನ್ನ ಗುರುತಿಸುವ ಸಾಮರ್ಥ್ಯವನ್ನು ತಂದುಕೊಟ್ಟಿದೆ. ಅನಿವಾರ್ಯತೆ ಏನನ್ನೆಲ್ಲ ಕಲಸ್ತಾದೆ ಅಂದಮ್ಯಾಲೆ ಶಾಲೆಗೆ ಮಕ್ಕಳನ್ನ ಕಳಸದೆ ಇದ್ರೆ ನಿಮಗೆ ಎಲ್ಲಾ ಸೌಲಭ್ಯ ಕಟ್ ಅಂದ್ರೆ ನಮ್ಮಲ್ಲಿ ಅನಕ್ಷರತೆ ಯಾಕಿರುತ್ತೆ ಹೇಳಿ? ಅಂತಹ ಇಚ್ಛಾಶಕ್ತಿ ಇದೆಯೇ? ಮೊದಲೆಲ್ಲ ಕಾರ್ಯಕ್ರಮದಾಗ ಇಂತಹವರ ಭಾಷಣ ಆರಂಭ ಆಗುತ್ತಿದೆ ದಯವಿಟ್ಟು ಶಾಂತಚಿತ್ತರಾಗಿ ಕುಳಿತುಕೊಳ್ಳಿ ಅಂತಿದ್ರು ಮೊಬೈಲ್ ಬಂದ ದಿನಗಳಲ್ಲಿ ತಮ್ಮ ಹತ್ತಿರ ಮೊಬೈಲ್ ಅದ ಅಂತ ಸಭಾದಾಗ ತೋರಸಾಕರ ಯಾರಕೂಡಾರ ರಿಂಗ್ ಮಾಡಸ್ತಿದ್ರು. ಕಾರ್ಯಕ್ರಮದ ಆರಂಭಕ್ಕ ನಿಮ್ಮ ಮೊಬೈಲ್ಗಳನ್ನು ಸ್ವಿಚ್ ಆಫ್ ಮಾಡಿ ಇಲ್ಲ ಸೈಲೆಂಟ್ ಮೋಡ್‌ನಲ್ಲಿಡಿ ಎನ್ನುತ್ತಿದ್ದರು ಕೇಳುತ್ತಿರಲಿಲ್ಲ. ಈಗ ಹಾಂಗ ರಿಂಗ್ ಆತು ಅಂದ್ರ ಅವ ಮೊಬೈಲ್ ಬಳಸಿಕೊಳ್ಳಾಕ ಬಾರದ ಗಮಾರ ಅಂತ ಕೆಕ್ಕರಿಸಿ ನೋಡತಿರತಾರ. ಈಗ ಅದು ಹೇಳೊದು ಬೇಕಿಲ್ಲ. ಕಾರ್ಯಕ್ರಮ ಬೇಸರ ಆದ್ರ ಫೇಸಬುಕ್ ವ್ಯಾಟ್ಸಪ್ಪ ಅವರನ್ನ ಕಂಟ್ರೋಲ್ ಮಾಡತಾವ.

ಮೊಬೈಲ್‌ನಲ್ಲಿ ಫೇಸಬುಕ್, ವ್ಯಾಟ್ಸಪ್ ಆಪ್‌ಷನ್ ಬಂದ ಮೇಲೆ ಜನರಿಗೆ ಹಗಲಿರಳು ಬಿಡುವೆ ಇಲ್ಲ, ಅನ್ನ ಕುದ್ದದದ ಇಲ್ಲ, ಹಾಲು ಉಕ್ಕಿತೇನೊ ಎಂದು ಅಡುಗೆಮನೆಗೆ ಧಾವಿಸಿ ಬರುವ ಹಾಗೆ ಇಟ್ಟಿಟ್ಟಕ ಫೇಸಬುಕ್, ವ್ಯಾಟ್ಸಪ್‌ಗೆ ಅಪಲೋಡ ಮಾಡಿದ ಫೋಟೋಗೆ ಏನ್ ಕಾಮಿಂಟ್ ಬಂದು, ಎಷ್ಟು ಮಂದಿ ಲೈಕ್ ಮಾಡಿದ್ರು, ಯಾರದು ಹೊಸ ಪೋಸ್ಟ್ ಬಂದ್ವು ಅಂತ ತಾಸಿಗೊಮ್ಮೆ ಘಳಿಗೊಮ್ಮೆ ನೆಟ್ ಆನ್ ಮಾಡಿದ್ದಾ ಮಾಡಿದ್ದು, ನೋಡಿದ್ದಾ ನೋಡಿದ್ದು. ಯಾರ್‍ಯಾರಿಗೆ ಫ್ರೆಂಡ್ಸ್ ರಿಕ್ವೆಸ್ಟ್ ಕಳಸ್ತೀವಿ ಎದುರಿಗೆ ಬಂದರ ಮಾತಾಡಿಸದೆ ಹೋಗ್ತೀವಿ. ಓಪನ್ ಮಾಡಿ ನೋಡಾಕ ತತ್ತರಸ್ತಾ ಇರ್ತೀವಿ. ಅದು ಇಲ್ಲದ ಬದುಕ ಇಲ್ಲ ಅನ್ನುವಂತಹ ವಾತಾವರಣ ಯುವಪೀಳಿಗೆ ಬಿಡಿ ಮುದುಕರಿಗೂ ಕಾಡಕತಾದ. ವ್ಯಾಟ್ಸಪ್ ಹಾಗೂ ಫೇಸ್ಬುಕ್ ಸಂಸ್ಥೆಯ ಅಭಿವೃದ್ಧಿಗಾಗಿ ಸಂಬಳ ಪಡೆಯದೆ ತಾವೇ ಹಣಕೊಟ್ಟು ನಿದ್ದೆಗೆಟ್ಟು ಹಗಲಿರುಳು ದುಡಿಯುತ್ತಿರುವ ನನ್ನ ಮಿತ್ರರಿಗೆ ಕಾರ್ಮಿಕ ದಿನಾಚರಣೆಯ ಶುಭಾಶಯಗಳು ಅಂತ ಮೊನ್ನೆ ಮೇ 1 ರಂದು ಯಾರೋ ಅನಾಮಿಕ ಸ್ಟೇಟಸ್ ಹಾಕಿದ್ರು. ಎಷ್ಟು ಸತ್ಯ ಅಲ್ಲ. ಅದೇನೆ ಇರಲಿ ಯುವಕರನ್ನು ಅವು ಹಾದಿ ತಪ್ಪಿಸುತ್ತಿದ್ದರೂ ಅದರ ಸದ್ಬಳಕೆ ಮೂಲಕ ಭವಿಷ್ಯ ರೂಪಿಸಲು ಪ್ರಯತ್ನಿಸಬೇಕಾಗಿದೆ. ನಾನಂತೂ ಈ ಮಾಧ್ಯಮದ ಮೂಲಕ ಅನೇಕ ಮಿತ್ರರ ಸ್ನೇಹ ಸಂಪಾದಿಸಿದ್ದೇನೆ. ಕಾರ್ಯಕ್ರಮಗಳನ್ನೂ ಸಂಘಟಿಸಿದ್ದೇನೆ. ಹಲವಾರು ಒಳ್ಳೆಯ ಸ್ನೇಹಿತರನ್ನ ಅವಕಾಶಗಳನ್ನ ಕಲ್ಪಿಸಿದೆ. ನನ್ನ ಕೃತಿಯೊಂದು ಫೇಸ್ ಬುಕ್ ಪರಿಚಯದ ಮೂಲಕವೇ ಪ್ರಕಟಗೊಂಡಿದೆ. ಮತ್ತಿನ್ನೇನು ಬೇಕು ಹೇಳಿ.

ಮೊನ್ನೆ ವ್ಯಾಟ್ಸಪ್‌ನಲ್ಲಿ ಬಂದ ಸಂದೇಶವೊಂದು ಹೀಗಿತ್ತು.

ತಲೆತಗ್ಗಿಸಿ ನೋಡು ಮತ್ತ್ಯಾವತ್ತು ನಿನ್ನನ್ನು ತಲೆಯೆತ್ತದಂತೆ ಮಾಡುತ್ತೇನೆ

– ಮೊಬೈಲ್

ತಲೆತಗ್ಗಿಸಿ ನನ್ನನ್ನು ನೋಡು ನಾನು ನಿನ್ನನ್ನು ಸದಾ ತಲೆ ಎತ್ತುವಂತೆ ಮಾಡುತ್ತೇನೆ

– ಪುಸ್ತಕ

ಎರಡನೆಯದಂತೂ ಸತ್ಯ ಒಂದನೆಯದನ್ನು ಸತ್ಯ ಆಗಕ ಬಿಡತಿರಾ? ✷

# ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

**- ದಂನಳ**

- 'ನನ್ನ ಹಾಗೆ ಆಗು' ಎಂದು ಯಾವ ತಂದೆ/ತಾಯಿ ತಮ್ಮ ಮಕ್ಕಳಿಗೆ ಹೇಳಬಲ್ಲರು?
- ನಗುವುದು ನಮಗೆ ಒಳ್ಳೆಯದು. ನಗಿಸಿದರೆ ಬೇರೆಯವರಿಗೂ ಒಳ್ಳೆಯದು.
- ಕಾಡನ್ನು ಯಾರಾದರು ನೀರು ಹಾಕಿ ಬೆಳೆಸೋದಿಕ್ಕೆ ಆಗುತ್ತಾ? ನಾವು ನೀವು ಆ ಕಡೆ ಹೋಗದಿದ್ದರೆ ಕಾಡು ತಾನೇ ಬೆಳೆಯುತ್ತದೆ.
- ನೆವರ್ ಮಿಸ್ಟೇಕ್ ಆಕ್ಟಿವಿಟಿ ಫಾರ್ ಅಚೀವ್‌ಮೆಂಟ್.
- ನಮಗೆ ಖರೀದಿಸುವ ಸಾಮರ್ಥ್ಯ ಇದೆ ಎಂದು ಖರೀದಿಸುತ್ತಾ ಹೋದರೆ ಕಣ್ಣಿಗೆ ಕಾಣುವುದೆಲ್ಲವೂ ಅಗತ್ಯ ಎಂದೇ ಭಾಸವಾಗುತ್ತಿರುತ್ತದೆ.
- ನನಗೆ ಸ್ವೆಟರ್ ಖರೀದಿಸುವ ಶಕ್ತಿ ಇಲ್ಲ. ಆದ್ದರಿಂದ ನನಗೆ ಚಳಿಯೂ ಆಗುತ್ತಿಲ್ಲ.
- ಇಟ್ ಈಸ್ ನಾಟ್ ವಾಟ್ ಯು ಲರ್ನ್ ಬಟ್ ವಾಟ್ ಯು ಕೆನ್ ಡು ವಿತ್ ವಾಟ್ ಯು ಲರ್ನ್.

**ಮೆಲುಕು ಹಾಕುವಂತಹ ಮಾತುಗಳ ಗುಚ್ಛ**

- ರಿಸ್ಕ್ ತೆಗೆದುಕೊಳ್ಳದಿರುವುದೇ ಒಂದು ದೊಡ್ಡ ರಿಸ್ಕ್.
- ಒಂದು ಸರಿ ಕೆಲಸ ಮಾಡಲು ಕಾರಣ ಒಂದೇ ಇರುತ್ತದೆ: ಆದರೆ ತಪ್ಪು ಮಾಡಲು 101 ಕಾರಣಗಳಿರಲು ಸಾಧ್ಯ.
- ಮೈ ಎಬಿಲಿಟಿ ಈಸ್ ಗ್ರೇಟರ್ ದ್ಯಾನ್ ಮೈ ಡಿಸ್‌ಎಬಿಲಿಟಿ.
- ತಿನ್ನಬೇಕೆಂದಿದ್ದರೆ ಅಡಿಗೆ ಮಾಡಲೇಬೇಕು.
- ನಾನು ನಿನ್ನನ್ನು ಸ್ಟುಪಿಡ್ ಎಂದು ಕರೆದಿದ್ದಕ್ಕೆ ನಿನಗೆ ನೋವಾಯಿತು ಕ್ಷಮಿಸು, ಆದರೆ ನಿನಗೆ ಆ ವಿಷಯ ಈಗಾಗಲೇ ಗೊತ್ತಿದೆ ಎಂದುಕೊಂಡಿದ್ದೆ.
- ಸ್ಪೈಸಸ್ ಶುಡ್ ನಾಟ್ ಓವರ್ ಟೇಕ್ ಮೀಲ್ಸ್.
- 'ಸಾರಿ' ಎಂದ ಮಾತ್ರಕ್ಕೆ ನಿಮ್ಮನ್ನು ಕ್ಷಮಿಸಲಾಗಿದೆ ಎಂದರ್ಥವಲ್ಲ. ಅದು ಮುಂದೆ ಸಾಗಲು ಒಂದು ಮಾರ್ಗ ಮಾತ್ರ.
- ಹೆಳವನ ಮೇಲೆ ಕುರುಡ ಕೂತಿದ್ದಾನೆ. ಅವರಿಬ್ಬರೂ ಪರಸ್ಪರ ಸ್ಥಳಪಲ್ಲಟ ಮಾಡಿಕೊಂಡರೆ ಮುನ್ನಡೆ ಸಾಧ್ಯ.
- ಲಾಫಿಂಗ್ ಆಟ್ ಯುವರ್ ಸೆಲ್ಫ್ ಈಸ್ ನಾಟ್ ಸಂಥಿಂಗ್ ನ್ಯು; ಅದರ್ಸ್ ಆರ್ ಡುಯಿಂಗ್ ಇಟ್ ಆಲ್‌ರೆಡಿ.
- ನಮಗೆ ರಕ್ತಗತವಾಗಿ ಬರುವುದು ಅಸ್ತಮ. ಕಲೆ ಅಲ್ಲ.
- ನಿನ್ನ ಸೆಲ್ಫಿಗಳಲ್ಲಿ ಬೇರೆಯವರಿಗೆ ಏನೂ ಆಸಕ್ತಿ ಇರುವುದಿಲ್ಲ.

# ಹೀಗೂ ಉಂಟೇ?

**- ಗೌತಮ**

ಇನ್ನೇನು ನಿದ್ದೆ ಬಂತು ಅನ್ನುವಷ್ಟರಲ್ಲಿ ಕರೆಂಟ್ ಹೋಯಿತು. 'ಥತ್, ಅದೇನು ಬಂದಿದೆಯೋ ರೋಗ ಇವರಿಗೆ, ದಿವಸಕ್ಕೆ ಇಪ್ಪತ್ತೆಂಟು ಸಲ ಕರೆಂಟ್ ಕಟ್ ಮಾಡ್ತಾರೆ' ಅಂತ ಹಿಡಿ ಶಾಪ ಹಾಕಿದೆ. ಕಿಟಕಿಯ ಬಾಗಿಲುಗಳನ್ನು ತೆರೆದೆ. ಮೈಯೆಲ್ಲಾ ಶೆಕೆ. ಹಾಳಾದ್ದು ಗಾಳಿಯೂ ಬೀಸಲ್ಲ, ಹಣೆ ಮೇಲೆ ಬೆವರೂ ಜಿನುಗೋಕೆ ಷುರುವಾಯಿತು. ಗಾಳಿಯಿಲ್ಲದೆ ಉಸಿರಾಡೋದು ಕಷ್ಟವಾಯಿತು. ಬೀಸಣಿಗೆಯನ್ನಾದರೂ ತಗೊಂಡು ಬೀಸಿಕೊಳ್ಳೋಣ ಅನ್ನಿಸಿ, ಏಳಲು ಹೋದೆ. ಕಿಟಕಿಯಾಚೆ ಚಂದಿರ, ಅದೂ ಪೂರ್ಣ ಚಂದಿರ ಕಾಣಿಸಿದ. 'ಓಹ್! ಲವ್ಲಿ' ಎಂದುದ್ಗರಿಸಿದೆ. ಟೆರೇಸ್ ಮೇಲೆ ನಿಂತು ಯಾಕೆ ಸುತ್ತಲೂ ನೋಡಬಾರದು. ಬೆಳದಿಂಗಳು ಸೊಗಸಾಗಿರತ್ತೆ ಅಂತ ಎದ್ದು ಕೂತೆ. ಇವರ ಕಡೆ ನೋಡಿದೆ. ಇವರು ಆಗಲೇ ಗೊರಕೆ ಹೊಡೆಯುತ್ತಿದ್ದರು. ಎಬ್ಬಿಸೋದು ಬೇಡ ಅನ್ನಿಸಿ ನಾನೊಬ್ಬಳೇ ಬಾಗಿಲು ತೆಗೆದು ಆಚೆ ಹೊಸಿಲು ದಾಟಿ, ಮೆಟ್ಟಿಲುಗಳನ್ನು ಹತ್ತಿ ಟೆರೇಸಿನ ಮೇಲೆ ಹೋಗಿ ನಿಂತೆ. ತಂಪಾದ ಹಾಲು ಬೆಳದಿಂಗಳು ತುಂಬ ಹಿತವಾಗಿತ್ತು. ಚಂದ್ರನನ್ನೇ ನೋಡುತ್ತ ನಿಂತೆ. ಆಹ್ಲಾದಕರವಾದ ವಾತಾವರಣ. ಗಾಳಿಯೂ ಬೀಸಿತು. ಮುಂಗುರುಳು ಹಣೆಯ ಮೇಲೆ ಹರಿದು ಕಚಗುಳಿಯಿಟ್ಟಿತು. ಯಾರೋ ಹಿಂದೆ ಬಂದು ನಿಂತಂತಾಯಿತು. ಹಿಂತಿರುಗಿ ನೋಡಿದೆ. ಅರೆ! ಇವರೇ!

'ನಿದ್ದೆ ಮಾಡಿತಿದ್ರೀ, ಸದ್ದಿಲ್ಲದೇ ಎದ್ದು ಬಂದರೂ ನಿಮಗೆ ಗೊತ್ತಾಗಿಬಿಡ್ತಾ? ಕಿಲಾಡಿ ಇದ್ದೀರಾರೀ ನೀವೂ' ಎನ್ನುತ್ತಿದ್ದಂತೆ ಹಿಂದಿನಿಂದ ನನ್ನ ಸೊಂಟವನ್ನು ಮೃದುವಾಗಿ ಬಳಸಿ ಅವರತ್ತ ತಿರುಗಿಸಿಕೊಂಡರು. ನನ್ನ ಮುಖವನ್ನು ತಮ್ಮ ಅಂಗೈಗಳಲ್ಲಿ ಹಿಡಿದು, ಮೆಲ್ಲನೆ ಮೇಲೆತ್ತಿದರು. ನಾಚಿಕೆಯಿಂದ ಕಣ್ಣು ಮುಚ್ಚಿದೆ.

'ಉಮಾ ಅಂದರು.'

ತಕ್ಷಣ ಬೆಚ್ಚಿಬಿದ್ದೆ. ಕಣ್ಣು ಬಿಟ್ಟೆ.

'ರೀ, ಇದೇನಿದೂ, ನಾನು ರಮಾ. ಉಮಾ ಅಲ್ಲ' ಅಂದೆ.

'ಇಲ್ಲ ಉಮಾ. ನೀನು ರಮಾ ಅಲ್ಲ, ನೀನು ಉಮಾನೇ'

'ಯಾಕ್ರೀ ಇವತ್ತು ವಿಚಿತ್ರವಾಗಿ ಆಡ್ತಿದ್ದೀರಾ?ಉಮಾ ನಮ್ಮಕ್ಕ. ಅವಳು ಸತ್ತು ಒಂದು ವರ್ಷ ಆಯ್ತಲ್ಲ' ಅನ್ನುತ್ತಿದ್ದಂತೆ ನನ್ನ ಮೈ ಮೆಲ್ಲನೆ ಕಂಪಿಸಿತು. ಅವರ ಎಡಕಿವಿಯ ಕೆಳಗೆ ಕೆನ್ನೆಯನ್ನು ಗಮನಿಸಿದೆ. ಮೈಮೇಲೆ ಹಾವು ಬಿದ್ದಂತಾಯಿತು. ಅದು ಇವರಲ್ಲ, ಇವರ ಅಣ್ಣ, ನನ್ನನ್ನು ಬಳಸಿದ್ದ ಅವರ ಕೈಗಳನ್ನು ಕಿತ್ತು ಅವರ ಬಂಧನದಿಂದ ಬಿಡಿಸಿಕೊಂಡು ನಾಲ್ಕು ಹೆಜ್ಜೆ ಹಿಂದೆ ಸರಿದೆ. ಕೈಕಾಲುಗಳಲ್ಲಿ ಶಕ್ತಿ ಉಡುಗಿಹೋಯಿತು. ಅವರ ಮುಖವನ್ನು ಹೆದರಿಕೆಯಿಂದಲೇ ನೋಡುತ್ತಿದ್ದಂತೆ, ಅವರ ಮುಖ ಕ್ರಮೇಣ ಕಪ್ಪಾಯಿತು, ಬಿಳಿಯ ಕೋರೆ ಹಲ್ಲುಗಳು ಬಾಯಿಯಿಂದ ಆಚೆ ಬಂದವು. ಕಣ್ಣುಗಳ ಜೊತೆ ಕಣ್ಣುಗುಡ್ಡೆಗಳೂ

ದೊಡ್ಡದಾದವು, ನನ್ನನ್ನು ಬಗೆದುಬಿಡುವಂತೆ ಮೇಲೆತ್ತಿದ ಅವರ ಕೈಗಳಲ್ಲಿ ಚೋಟುದ್ದದ ಉಗುರುಗಳು ಅಡ್ಡಾದಿಡ್ಡಿಯಾಗಿ ಬೆಳೆದು ನಿಂತವು. ವಿಕಾರವಾಗಿ ನಗುತ್ತಾ, ನನ್ನನ್ನು ತಿಂದುಹಾಕಿಬಿಡುವಂತೆ ನೋಡುತ್ತಾ 'ನೀನು ಉಮಾನೇ. ನನಗೆ ನೀನು ಬೇಕು. ನೀನಿಲ್ಲದೇ ನಾನಿರಲ್ಲ, ಬಾ ಉಮಾ ಬಾ. ಹತ್ತಿರ ಬಾ' ಅಂತ ವಿಕಾರವಾದ ಧ್ವನಿಯಲ್ಲಿ ಕಿರುಚಿದರು. ಇಡೀ ಮುಖವನ್ನು ಎರಡೂ ಕೈಗಳಿಂದ ಮುಚ್ಚಿಕೊಂಡು ಕಿಟಾರನೆ ಕಿರುಚಿದೆ.

ಎಚ್ಚರವಾಯಿತು. ಪಕ್ಕದಲ್ಲಿ ಇವರು. ಇವರನ್ನು ನೋಡಿ ಮತ್ತೆ ಕಿರುಚಿದೆ. ಇವರೂ ಮೇಲೆದ್ದು ನನ್ನನ್ನು ಬಳಸಿ ಹಿಡಿದು,

'ಏನಾಯ್ತು ರಮಾ? ಕೆಟ್ಟ ಕನಸು ಬಿತ್ತಾ?' ಅಂತ ಸಮಾಧಾನ ಮಾಡುತ್ತ ಬೆನ್ನು ನೀವಿದರು. ಮತ್ತೆ ಇವರ ಕಡೆ ನೋಡಿದೆ. ಇವರ ಕಿವಿಯ ಕೆಳಗಿನ ಭಾಗವನ್ನೂ ನೋಡಿದೆ. ಅಲ್ಲಿ ಮಚ್ಚೆ ಇರಲಿಲ್ಲ, ಇವರು ಅವರಲ್ಲ, ಇವರು ಇವರೇ ಅನ್ನೋದು ಖಚಿತವಾಯಿತು. ಸಮಾಧಾನವಾಯಿತು. ಇವರ ಎದೆಗೊರಗಿದೆ. ಮತ್ತಷ್ಟು ಸಾಂತ್ವನಗೊಳಿಸುವಂತೆ ನನ್ನ ಬೆನ್ನಿನ ಮೇಲೆ ಕೈ ಆಡಿಸುತ್ತಾ ಕುಳಿತರು. ಎಷ್ಟೋ ಹೊತ್ತಾದ ಮೇಲೆ, ಅವರಿಂದ ಬಿಡಿಸಿಕೊಂಡೆ.

'ಸರಿ ಹೋಯ್ತಾ ರಮಾ?'

'ಹೂಂ' ಅಂದೆ ನಾಚಿಕೆಯಿಂದ.

'ಕೆಟ್ಟ ಕನಸಾ?'

'ಹೂಂ' ಅನ್ನುತ್ತಾ ಎಲ್ಲವನ್ನೂ ಹೇಳಿದೆ. ಅಷ್ಟೂ ಹೊತ್ತು ಸಂಕೋಚದ ಮುದ್ದೆಯಾಗಿದ್ದು, ಇವರನ್ನು ನೋಡುವ ಮನಸ್ಸಾಗಿರಲಿಲ್ಲ. ಮೆಲ್ಲನೆ ತಲೆ ಎತ್ತಿ ಇವರನ್ನು ನೋಡಿದೆ. ನೋಡಿ ಹೆದರಿಕೆಯಾಯಿತು. ಇವರ ಎದೆಯ ಮೇಲೆ ಕೈ ಇಟ್ಟೆ. ಡವ ಡವ ಕೈಗೆ ಕೇಳಿಸಿತು. 'ನೀವ್ಯಾಕ್ರೀ ಹೀಗೆ ಬಿಳಿಚಿಕೊಂಡಿದ್ದೀರಾ? ಬೆವರ್ತಾ ಇದೀರಾ ಬೇರೇ?' ಅಂದೆ. ಗಲಿಬಿಲಿಗೊಂಡವರಂತೆ 'ಅ ಉ' ಅನ್ನುತ್ತ ಪಕ್ಕದಲ್ಲಿದ್ದ ಟವೆಲನ್ನು ತೆಗೆದುಕೊಂಡು ಮುಖವನ್ನು ಒರೆಸಿಕೊಂಡರು.

'ಹೇಳ್ರೀ ಏನಾಯ್ತೂ?'

'ಏನಿಲ್ಲವಲ್ಲಾ'

'ಮತ್ಯಾಕೆ ಹೀಗೆ ಬೆವರಿದ್ದೀರೀ?'

'ಮತ್ತೆ? ಇಂಥ ಹಾರಿಬಲ್ ಹಾರರ್ ಸ್ಟೋರಿ ಹೇಳಿದರೆ ಹೆದರಿಕೆ ಆಗದೇ ಇರುತ್ತಾ? ನೀನು ತಾನೇ ಅದು ಹ್ಯಾಗೆ ಅಷ್ಟು ಹೊತ್ತು ಅವನ ಮುಖ ನೋಡಿದೆ? ಪಾಪ' ಎನ್ನುತ್ತ ನನ್ನನ್ನು ಮತ್ತೆ ತಬ್ಬಿ ಹಿಡಿದು ಸಮಾಧಾನ ಮಾಡಿದರು. ಏನೂ ಆಗಿಲ್ಲವೆಂಬಂತೆ ಅವರಿದ್ದರೂ ನನಗೆ ಏನೋ ಅನುಮಾನ 'ಏನನ್ನೋ ಮುಚ್ಚಿಡ್ತಾ ಇದಾರೆ' ಅಂತ. ಹಾಗಂತ ಕೇಳಿಯೂ ಬಿಟ್ಟೆ.

'ಹೌದು ರಮಾ. ನಿನಗೆ ಒಂದು ವಿಷಯ ಹೇಳೋದಿದೆ. ಈಗ ಬೇಡ. ನೀನೂ ಸುಸ್ತಾಗಿದ್ದೀಯ. ನಾನೂ ಸುಸ್ತಾಗಿದ್ದೀನಿ. ಸ್ವಲ್ಪ ಹೊತ್ತು ರಿಲಾಕ್ಸ್ ಮಾಡಿಕೋ. ನಾನೂ ಸ್ವಲ್ಪ ನಿದ್ದೆ ಮಾಡಿತೀನಿ. ನಾಳೆ ಹೇಳಿತೀನಿ ಅಂದರು.

ನಿಜವಾಗಿಯೂ ನನಗೆ ಆತಂಕವಾಯಿತು. ಮಲಗಿದ ಅವರ ತೋಳನ್ನು ತಟ್ಟುತ್ತಾ ಮಲಗಿದೆ. ನಿದ್ದೆ ಬರಲಿಲ್ಲ.

'ರೀ, ನಾನೊಂದು ಮಾತು ಹೇಳ್ಲಾ?' ಅಂದೆ.

'ಹೇಳು ರಮಾ'

"'ಈ ಮನೆ ಸರಿ ಇಲ್ಲ, ಇಲ್ಲಿ ಯಾರೋ ಆತ್ಮಹತ್ಯೆ ಮಾಡಿಕೊಂಡಿದ್ದರು' ಅಂತ ಆ ಪಕ್ಕದ ಮನೆಯವರು ಹೇಳಿದರೂ ನೀವು ಕೇಳಲಿಲ್ಲ. ಬಾಡಿಗೆ ಕಮ್ಮಿ ಅಂತ ಬಂದಿರಿ. ನೋಡಿ ಈಗ''

'ನೋಡು ರಮಾ, ಅದಕ್ಕೂ ಇದಕ್ಕೂ ಸಂಬಂಧ ಕಲ್ಪಿಸಬೇಡ. ಈಗ ಏನಾಗಿ ಹೋಯ್ತೂಂತಾ? ಏನೂ ಆಗಿಲ್ಲ. ಒಂದು ಕೆಟ್ಟ ಕನಸು ಬಿತ್ತು ಅಂತ ಇಷ್ಟೊಂದು ಹೆದರಿಬಿಟ್ಟರೆ ಬದುಕೋಕೇ ಆಗೋಲ್ಲ. ಈಗ ಮಾತು ಬೇಡ. ಮಲಕ್ಕೊ. ರಾತ್ರಿ ತುಂಬಾ ಹೊತ್ತಾಗಿದೆ' ಅಂದರು. ಕಣ್ಣು ಮುಚ್ಚಿದರೂ ನನಗೆ ನಿದ್ರೆ ಬರಲಿಲ್ಲ. ಅದೇ ಮುಖ, ಅದೇ ಕೋರೆ ಹಲ್ಲುಗಳು, ಕಣ್ಣ ಮುಂದೆ ಬಂದವು. ಇದ್ದಕ್ಕಿದ್ದಂತೆ ಬಾಗಿಲು ಕಿರುಗುಟ್ಟಿದ ಶಬ್ದ. ಬೆಚ್ಚಿಬಿದ್ದೆ. ನೋಡಿದರೆ ಇವರ ಗೊರಕೆ. ನಾಚಿ, ಇವರಿಗೆ ಒತ್ತಿಕೊಂಡು ಮಲಗಿದೆ.

★★★

'ನಿನಗೆ ಆಶ್ಚರ್ಯ ಆಗಬಹುದು ರಮಾ ಅಥವಾ ನೀನು ನಂಬದೇನೂ ಇರಬಹುದು'

'ಹೌದಾ? ಅದೇನ್ರೀ ಅಂಥಾ ವಿಷಯಾ?'

'ನಿನ್ನೆ ನಿನಗೆ ಒಂದು ಕನಸು ಬಿತ್ತಲ್ಲಾ...'

'ಹೂಂ?'

'ಅದನ್ನ ನೀನು ಹೇಳಿದಾಗ ನಾನು ಬೆವರಿದ್ದೆನಲ್ಲಾ...'

'ಊಂ?'

'ಅದಕ್ಕೆ ಕಾರಣ ಏನು ಗೊತ್ತಾ?'

'ನೀವೇ ಹೇಳಿದಿರಲ್ಲ ಹಾರಿಬಲ್ ಹಾರರ್ ಸ್ಟೋರಿ ಅಂತಾ'

'ಅಲ್ಲ'

'ಮತ್ತೆ?'

'ನನಗೂ ಅದೇ ಸಮಯಕ್ಕೆ ಒಂದು ಕನಸು ಬಿದ್ದಿದ್ದು'

ನಿಜವಾಗಿಯೂ ನನಗೆ ಆಶ್ಚರ್ಯವಾಯಿತು. ಕೂತಲ್ಲೇ ಇನ್ನೂ ಅವರತ್ತ ಸರಿಯುತ್ತ ಸರಿಯಾಗಿ ಕೂತೆ.

'ಎಂಥ ಕನಸೂ?'

'ನಿನ್ನ ಕನಸಿಗಿಂತ ಭಯಂಕರವಾದ ಕನಸು'

'ಹೇಳಿ ಮತ್ತೇ'

‘ಆಫೀಸಿನಿಂದ ಮುಂಬೈಗೆ ಯಾವುದೋ ವರ್ಕ್‌ಷಾಪು ಅಂತ ಕಳಿಸಿರ್ತಾರೆ. ಮೊದಲ ದಿನ ವರ್ಕ್‌ಷಾಪು ಮುಗಿದ ಮೇಲೆ ಹಾಗೇ ಜುಹು ಬೀಚಿಗೆ ಹೋಗಿರ್ತೀನಿ. ಸಾಯಂಕಾಲ ಸೂರ್ಯ ಮುಳುಗೋ ಹೊತ್ತು. ಗಂಡು ಹೆಣ್ಣುಗಳ ಹಗ್ಗುಗಳು, ಕಿಸ್ಸುಗಳು. ನನಗೂ ನೀನು ಹತ್ತಿರ ಇದ್ದಿದ್ದರೆ ಚೆನ್ನಾಗಿರ್ತಿತ್ತು ಅನ್ನಿಸತ್ತೆ. ಬೆಳಕು ಸರಿಯುತ್ತಿದ್ದಂತೆ ಬೀಚಿನಲ್ಲಿನ ಜನಗಳು ಮಂಜುಮಂಜಾಗಿ ಕಾಣಿಸ್ತಿದ್ದರು. ನಿನ್ನ ನೆನಪು ಹೆಚ್ಚಾಗ್ತಾ ಹೋಗತ್ತೆ. ಅಷ್ಟರಲ್ಲಿ ಯಾರೋ ನನ್ನ ಪಕ್ಕ ಬಂದು ನಿಂತ ಹಾಗಾಗತ್ತೆ. ನೋಡ್ತೀನಿ, ನನ್ನ ಕಣ್ಣನ್ನ ನಾನೇ ನಂಬೋಕಾಗಲಿಲ್ಲ, ಕಣ್ಣುಜ್ಜಿಕೊಂಡು ನೋಡಿತೀನಿ. ನೀನೇ ನನ್ನ ಮುಂದೆ ಇರ್ತೀಯ. ಆಶ್ಚರ್ಯ, ಖುಷಿ, ಉದ್ವೇಗ, ಏನೇನೋ ಆಗತ್ತೆ. ‘ರಮಾ! ಅಂತೀನಿ’ ಭಾವಾವೇಶದಿಂದ. ಇದೇನು ನೀನಿಲ್ಲಿ? ಯಾವಾಗ ಬಂದೆ? ಹೇಗೆ ಬಂದೆ?’ ಅಂತೆಲ್ಲ ಒಂದೇ ಸಮನೆ ಪ್ರಶ್ನೆಗಳನ್ನ ಕೇಳ್ತೀನಿ. ನೀನು ಅದೊಂಥರಾ ಮಾದಕವಾಗಿ ನೋಡ್ತೀಯ. ಆ ನೋಟಕ್ಕೆ ನಾನು ಕಳೆದೇ ಹೋಗ್ತೀನಿ. ನೋಡನೋಡುತ್ತಿದ್ದ ಹಾಗೇ ಅಲ್ಲಿದ್ದ ಜನಗಳೆಲ್ಲ ಖಾಲಿಯಾಗಿ ಹೋಗ್ತಾರೆ. ಜುಹು ಬೀಚಿನಲ್ಲಿ ನಾನು, ನೀನು, ನೀನು, ನಾನು ಇಬ್ಬರೇ. ‘ಪಾವ್ ಬಾಜಿ ತಿನ್ನೋಣವಾ?’ ಅಂತ ನೀನು ಕೇಳಿತೀಯ. ‘ಹುಂ’ ಅಂತಂದು ಎರಡು ಪಾವ್ ಬಾಜಿ ತೊಗೊಳ್ಳೋಕೆ ಹೋದರೆ, ‘ಬೇಡ ಬೇಡ ಒಂದೇ ಸಾಕು’ ಅಂತೀಯ. ಹೊಸದಾಗಿ ಮದುವೆ ಆದ ಪ್ರೇಮಿಗಳ ಹಾಗೆ ಕೈಯಲ್ಲಿ ಮುಟ್ಟದೆ ಬಾಯಲ್ಲೇ ಅದನ್ನ ಕಚ್ಚಿ ಕಚ್ಚಿ ತಿಂತೀವಿ. ನೀನು, ಆಗ ಯಾವತ್ತಿಗಿಂತಲೂ ಹೆಚ್ಚು ಸುಂದರಿಯಾಗಿ ಕಾಣ್ತೀಯ. ನಿನ್ನ ಸೌಂದರ್ಯವನ್ನೇ ಕಣ್ಣಲ್ಲಿ ಹೀರುತ್ತ ನಿಂತುಕೋತೀನಿ. ನೀನೂ ಅಷ್ಟೆ ನನ್ನ ಕಣ್ಣಲ್ಲಿ ಕಣ್ಣಿಟ್ಟು ‘ಉಮೇಶ್ ಯಾಕೆ ಹಾಗೆ ಸುಮ್ಮನೆ ನಿಂತಿದ್ದೀಯಾ? ನಾನು ಬಂದಿದ್ದು ನಿನಗೆ ಇಷ್ಟವಾಗಲಿಲ್ಲವಾ?’ ಅಂತ ಕೇಳ್ತೀಯ. ‘ಉಮೇಶ್’ ಅನ್ನೋದನ್ನ ಕೇಳಿ ನಾನೂನೂ ನಿನ್ನ ಹಾಗೇನೇ ಬೆಚ್ಚಿಬೀಳ್ತೀನಿ. ‘ರಮಾ, ನಾನು ಉಮೇಶ್ ಅಲ್ಲ, ನಾನು ರಮೇಶ್’ ಅಂತೀನಿ. ನೀನು ಮೋಹಕವಾಗಿ ನಗ್ತೀಯ. ನನ್ನ ಎದೆಯ ಸುತ್ತ ಕೈಗಳನ್ನು ಹಾಕಿ ನನ್ನನ್ನು ತಬ್ಬಿಕೋತೀಯ. ನಾನೂ ಎರಡೂ ಕೈಗಳಿಂದ ನಿನ್ನನ್ನು ಬಳಸಿ ನಿನ್ನ ಹೆಗಲ ಮೇಲೆ ಮುಖ ಇಟ್ಟು, ಬೆನ್ನ ಮೇಲೆ ಮುತ್ತಿಡೋಣ ಅನ್ನೋಷ್ಟರಲ್ಲಿ ನಿನ್ನ ಎಡ ಭುಜದ ಮೇಲಿದ್ದ ಸಣ್ಣ ಮಚ್ಚೆ ಕಾಣಿಸತ್ತೆ. ನಮ್ಮಣ್ಣನ ಕೆನ್ನೆಯ ಮೇಲಿನ ಮಚ್ಚೆಯನ್ನು ನೋಡಿ ನಿನ್ನ ಮೈ ಮೇಲೆ ಹಾವು ಬಿದ್ದ ಹಾಗಾದರೆ, ನನಗೆ ನಿನ್ನ ಭುಜದ ಮೇಲಿನ ಮಚ್ಚೆ ನೋಡಿ ಹಾವಿನ ಮೇಲೆ ಹೆಜ್ಜೆ ಇಟ್ಟಹಾಗಾಗತ್ತೆ. ಅದು ನೀನಾಗಿರಲ್ಲ, ನಿಮ್ಮಕ್ಕ ಉಮಾ ಆಗಿರ್ತಾಳೆ. ಬೆಚ್ಚಿಬಿದ್ದು ಅವಳನ್ನು ಬಿಟ್ಟು ಎರಡು ಹೆಜ್ಜೆ ಹಿಂದೆ ಸರೀತೀನಿ. ‘ನೀನೂ... ನೀನೂ...’ ಅಂತ ತೊದಲ್ತೀನಿ. ಅಷ್ಟರಲ್ಲಿ ಅವಳ ಮುಖವೂ ಕಪ್ಪಾಗತ್ತೆ, ಕೋರೆ ಹಲ್ಲುಗಳು ಆಚೆಗೆ ಬರ್ತವೆ, ಮೇಲೆತ್ತಿದ ಕೈಗಳಲ್ಲಿನ ಉಗುರುಗಳು ಬೆಳೆದುಬಿಡುತ್ವೆ, ನನ್ನನ್ನ ಬಗೆದುಬಿಡೋ ಹಾಗೆ. ಕಣ್ಣುಗಳು, ಕಣ್ಣುಗುಡ್ಡೆಗಳು ಭಯಂಕರವಾಗಿ ಅಗಲವಾಗ್ತವೆ. ವಿಕಾರವಾಗಿ ಬಾಯಿ ತೆಗೆದು, ‘ಉಮೇಶಾ, ನೀನು ನನಗೆ ಬೇಕು. ನೀನಿಲ್ಲದೆ ನಾನಿರಲ್ಲ, ಬಾ ಉಮೇಶಾ ಬಾ. ಇನ್ನೂ ಹತ್ತಿರ ಬಾ. ನನ್ನನ್ನು ತಬ್ಬಿಕೋಬಾ’ ಅಂತ ಕರೀತಾಳೆ. ನಾನು ಜೋರಾಗಿ ಕಿರುಚೀನಿ. ನನಗೆ ಎಚ್ಚರ ಆಗತ್ತೆ. ಅದು ನೀನು ಕಿರುಚಿದ್ದಕ್ಕೋ ಇಲ್ಲಾ, ನಾನು ಕಿರುಚಿದ್ದಕ್ಕೋ ಗೊತ್ತಿಲ್ಲ ಅಂತ ಹೇಳಿ ಅಷ್ಟಕ್ಕೆ ನಿಲ್ಲಿಸಿ, ಸುಸ್ತಾದವರಂತೆ ಸುಮ್ಮನೆ ಕೂತರು. ನಾನೂ ಬೆವೆತು ಹೋಗಿದ್ದೆ. ಅವರ ಕೈಗಳನ್ನು ಭದ್ರವಾಗಿ ಹಿಡಿದು ಕೂತುಬಿಟ್ಟೆ, ಸ್ವಲ್ಪ ಹೊತ್ತಿನ ನಂತರ,

'ರಮಾ, ಸ್ವಲ್ಪ ನೀರು ತಗೊಂಡುಬಾ' ಅಂದರು.

'ಉಹುಂ. ನಂಗೆ ಭಯ ಅಡುಗೆ ಮನೆಗೆ ಹೋಗೋಕೆ. ನೀವೂ ಬನ್ನಿ' ಅಂದೆ.

'ಹೌದಾ? ಹಾಗಾದರೆ ನೀನಿಲ್ಲೇ ಕೂತಿರು. ನಾನು ಹೋಗಿ ತರ್ತೀನಿ' ಅಂದರು.

'ಬೇಡ ಬೇಡ. ಒಬ್ಬಳೇ ಇರೋಕೂ ನಂಗೆ ಭಯ. ನಾನೂ ಬರ್ತೀನಿ' ಅಂದವಳೇ ಅವರ ಕೈ ಹಿಡಿದು ಅಡುಗೆ ಮನೆಗೆ ಹೋಗಿ ನೀರು ತಂದು ಇಬ್ಬರೂ ಕುಡಿದ ಮೇಲೆ ಸ್ವಲ್ಪ ಸಮಾಧಾನವಾದಂತಾಯಿತು.

ಲೋಟವನ್ನು ಕೆಳಗಿಡುತ್ತ ಇವರು, 'ಅವಳಿ ಜವಳಿ ಅಕ್ಕ-ತಂಗಿಯರು ನೀವು. ಇಬ್ಬರದೂ ಒಂದೇ ರೂಪ. 'ಅಕ್ಕನ ಎಡ ಭುಜದ ಮೇಲೆ ಸಣ್ಣ ಮಚ್ಚೆ ಇದೆ, ನನಗಿಲ್ಲ, ಅಷ್ಟೇ ವ್ಯತ್ಯಾಸ' ಅಂತ ನೀನೇ ಹೇಳಿದ್ದೆ. ನಾವೂ ಅಷ್ಟೆ ಅವಳಿ ಜವಳಿ ಅಣ್ಣ-ತಮ್ಮಂದಿರು. ಒಂದೇ ರೂಪು. 'ನನ್ನ ಎಡಗೆನ್ನೆ ಮೇಲೆ, ಕಿವಿಯ ಕೆಳಗೆ ಒಂದು ಸಣ್ಣ ಮಚ್ಚೆ ಇದೆ, ರಮೇಶನಿಗಿಲ್ಲ. ಅಷ್ಟೇ ನಮ್ಮಿಬ್ಬರಿಗೂ ಇರೋ ವ್ಯತ್ಯಾಸ' ಅಂತ ನಮ್ಮಣ್ಣಾನೂ ಹೇಳಿದ್ದ. ಆ ಮಚ್ಚೆಗಳನ್ನು ಸ್ಪಷ್ಟವಾಗಿ ತೋರಿಸಿದ್ದೆವು. ಆ ವ್ಯತ್ಯಾಸಗಳನ್ನು ಹೇಳದಿದ್ದಿದ್ದರೆ ಅನಾಹುತಗಳೇ ಆಗಿಬಿಡ್ತಿದ್ದವಲ್ಲ. ಅವಳಿ-ಜವಳಿ ಅಕ್ಕ-ತಂಗಿಯರನ್ನು ಅವಳಿ ಜವಳಿ ಅಣ್ಣ-ತಮ್ಮಂದಿರು ಮದುವೆ ಆದಿವಿ. ಊರಿಗೆಲ್ಲಾ ನಾವೊಂದು ದೊಡ್ಡ ಸುದ್ದಿಯಾದೆವು. ಬಹಳ ಖುಷಿಯಾಗಿದ್ದೆವು. ಆದರೆ, ಪಾಪ, ನಮ್ಮಣ್ಣ, ನಿಮ್ಮಕ್ಕ ಇಬ್ಬರೂ ಕಾರ್ ಆಕ್ಸಿಡೆಂಟ್‌ನಲ್ಲಿ ತೀರಿಕೊಂಡುಬಿಟ್ಟರು. ಹೀಗಾಗಬಾರದಿತ್ತು. ಆದರೆ ನಾವೇನು ಮಾಡೋಕಾಗತ್ತೆ, ಎಲ್ಲಾ ಅವನಿಚ್ಛೆ ಅಂದರು. ಅಕ್ಕನ ನೆನಪು ಬಂದು ಕಣ್ಣೀರಿಟ್ಟೆ

'ಆದರೆ, ಇದೇನ್ರೀ ಯಾಕೆ ಹೀಗಾಗಿತಿದೆ?'

'ನೋಡು ರಮಾ. ಇವತ್ತು ಅಮಾವಾಸ್ಯೆ. ಇಂಥ ಕನಸುಗಳು ಬೀಳೋದರಲ್ಲಿ ಅಂಥ ವಿಶೇಷ ಏನಿಲ್ಲ. ಅದಕ್ಕೆಲ್ಲ ವರಿ ಮಾಡಿಕೋಬೇಡ. ಎಲ್ಲಾ ಸರಿ ಹೋಗತ್ತೆ. ಡೋಂಟ್ ವರಿ' ಅಂತ ಸಂತೈಸಿದರು. ಆದರೆ, ನನ್ನ ಭಯ ಮಾತ್ರ ಕಡಿಮೆ ಆಗಲಿಲ್ಲ.

★★★

ಮಾರನೆಯ ದಿನ ರಾತ್ರಿಯೂ ಅದೇ ತರಹ ಕನಸು. ಇಬ್ಬರೂ ಹೆಚ್ಚು ಕಡಿಮೆ ಒಂದೇ ಹೊತ್ತಿಗೆ ಕಿರುಚುತ್ತ ಎದ್ದೆವು. ಅವರಿಗೆ ಉಮಾ, ನನಗೆ ಉಮೇಶ್ ಕಾಣಿಸಿಕೊಂಡರು. ಕಾಡಿದರು. ನಿದ್ದೆ ಹೋಯಿತು. ಮಾರನೆ ದಿನವೆಲ್ಲ ಮೈಕೈ ನೋವು, ಯಾವುದರಲ್ಲೂ ಆಸಕ್ತಿಯಿಲ್ಲವಾಯಿತು. ಇವರಂತೂ ಆಫೀಸಿಗೆ ಹೋಗೋಕೇ ಇಷ್ಟ ಪಡಲಿಲ್ಲ. ನನಗಂತೂ ಒಬ್ಬಳಿಗೇ ಮನೇಲಿ ಕಾಲ ಕಳೆಯೋದು ತುಂಬಾನೇ ಕಷ್ಟವಾಯಿತು. ಇವರು ಆಫೀಸಿನಿಂದ ಸುಸ್ತಾಗಿ ಬಂದರು. ಊಟ ಮಾಡಿ ಮಲಗುವ ಸಮಯ. ಯಾಕಾದರೂ ರಾತ್ರಿ ಬರುತ್ತೋ ಅಂತನ್ನಿಸಿತು ಇಬ್ಬರಿಗೂ. 'ಇವತ್ತಾದದರೂ ಅವರು ಕನಸಿನಲ್ಲಿ ಬರದೆ ಇರೋ ಹಾಗೆ ಮಾಡಪ್ಪ' ಅಂತ ದೇವರಲ್ಲಿ ಪ್ರಾರ್ಥನೆ ಮಾಡಿಕೊಂಡೆವು. ಉಹುಂ. ನಮ್ಮ ಪ್ರಾರ್ಥನೆ ಆ ದೇವರ ಕಿವಿಗೆ ಬೀಳಲಿಲ್ಲವೇನೋ. ಪ್ರತಿದಿನ ಅದೇ ಕನಸು. ಒಂದೊಂದು ದಿನ ಒಂದೊಂದು ಸ್ಥಳ, ಒಂದೊಂದು ಡ್ರೆಸ್ಸು. ಆದರೆ ಮಾತು ಮಾತ್ರ ಅದೇ. ಪ್ರತಿ ದಿನವೂ ಅದೇ ರೀತಿ.

ರಮಾ, ರಮೇಶ್ ಅಂತ ತಿಳಿದು ಹತ್ತಿರ ಹೋಗಿ, ಇನ್ನೇನು... ಮಚ್ಚೆಗಳು ಕಾಣಿಸಿ ಅವರು ಉಮಾ, ಉಮೇಶ್ ಅಂತ ತಿಳಿದು, ಹಿಂದೆ ಸರಿಯೋದು, ಅವರ ಕರಾಳ ಮುಖಗಳ ದರ್ಶನ. ಕಿರುಚಿಕೊಂಡು ಏಳುವುದು. ನಮಗೆ ದಿಕ್ಕೇ ತೋಚಲಿಲ್ಲ. ಯಾರಲ್ಲಿಯಾದರೂ ಹೇಳಿಕೊಳ್ಳೋಣವೆಂದರೆ, ನಾಚಿಕೆ. ಈ ಮನೆ ಬಿಟ್ಟು ಬೇರೆ ಮನೆಗೆ ಹೋಗೋ ಯೋಚನೆಯನ್ನು ಇವರ ಮುಂದಿಟ್ಟೆ. 'ಅಲ್ಲೂ ಇದೇ ಕನಸು ಬಿದ್ದರೆ ಏನು ಮಾಡಿತೀಯಾ?' ಅಂದಾಗ ನನಗೂ 'ಹೌದಲ್ಲ' ಅನ್ನಿಸಿತು. ಇನ್ನು ಮಾಟ ಮಂತ್ರ ಮಾಡಿಸೋಣ ಅಂದರೆ, ನಮ್ಮಿಬ್ಬರಿಗೂ ಅದರಲ್ಲೆಲ್ಲ ಸುತರಾಂ ನಂಬಿಕೆ ಇಲ್ಲ. ಮನೋವೈದ್ಯರತ್ತ ಹೋಗೋ ಯೋಚನೆ ಬಂತು. ಅದೇ ಸರಿ, ಒಂದು ದಿನ ಗೊತ್ತು ಮಾಡಿಕೊಂಡು ಒಬ್ಬ ಒಳ್ಳೆ ಮನೋವೈದ್ಯರ ಹತಿತಿರ ಸಮಾಲೋಚಿಸೋ ನಿರ್ಧಾರ ಮಾಡಿದೆವು.

★★★

ಹೀಗಿರುವಾಗಲೇ, ಒಂದು ದಿನ ಮಧ್ಯಾಹ್ನ ಇವರು ಧಿಡೀರನೆ ಮನೆಗೆ ಬಂದುಬಿಟ್ಟರು. 'ಇದೇನ್ರೀ ಇದ್ದಕ್ಕಿದ್ದ ಹಾಗೇ?' ಅಂದೆ.

'ರಮಾ, ನನಗೊಂದು ಹೊಸ ಐಡಿಯಾ ಬಂದಿದೆ'

'ಯಾತರ ಬಗ್ಗೇರೀ?'

'ಅದೇ ಕಣೇ ನಿಮ್ಮಕ್ಕನ್ನ ನಮ್ಮಣ್ಣನ್ನ ಹೇಗೆ ಒಟ್ಟಿಗೆ ಸೇರಿಸೋದು ಅನ್ನೋದರ ಬಗ್ಗೆ'

'ಹೌದಾ?'

'ಕೇಳಿಲ್ಲಿ. ನಿನ್ನನ್ನ ಉಮಾ ಅಂತ ತಿಳಿದಿರೋ ನಮ್ಮಣ್ಣ, ನನ್ನನ್ನ ಉಮೇಶ ಅಂತ ತಿಳಿದಿರೋ ನಿಮ್ಮಕ್ಕ ಇಬ್ಬರೂ ಪಾಪ, ಒಬ್ಬರನ್ನೊಬ್ಬರು ತುಂಬಾ ಪ್ರೀತಿಸ್ತಾ ಇದ್ದರು ಅಲ್ವಾ? ಆದರೆ ಅವರಿಬ್ಬರೂ ಈಗ ಬೇರೆಬೇರೆಯಾಗಿ ಬಿಟ್ಟಿದ್ದಾರೆ. ಇಬ್ಬರಿಗೂ ಒಬ್ಬರನ್ನೊಬ್ಬರು ಅಗಲಿರೋದು ಕಷ್ಟ ಆಗ್ಬಿಟ್ಟಿದೆ. ಒಟ್ಟಿಗೆ ಮತ್ತೆ ಸೇರೋದು ಹೇಗೆ ಅನ್ನೋದು ಅವರಿಗೆ ಗೊತ್ತಾಗ್ತಾ ಇಲ್ಲ. ನಮ್ಮನ್ನೇ ಉಮಾ ಉಮೇಶ್ ಅಂತ ಯಾಕೆ ತಿಳಿದಿದ್ದಾರೋ ನನಗೆ ಅರ್ಥ ಆಗಿಲ್ಲ. ಅಥವಾ ಇಂಡೈರೆಕ್ಟ್ ಆಗಿ ನಮ್ಮ ಸಹಾಯ ಕೇಳ್ತಿದ್ದಾರೋ ಏನೋ, ಅದೂ ಗೊತ್ತಿಲ್ಲ. ಅವರಿಬ್ಬರನ್ನೂ ಒಂದು ಮಾಡಿಬಿಟ್ಟರೆ ನಮ್ಮ ಕೆಲಸ ಮುಗಿದ ಹಾಗೆ. ಅದಕ್ಕೊಂದು ಉಪಾಯವನ್ನೂ ಮಾಡಿದ್ದೀನಿ. ಆ ಉಪಾಯ ಫಲಿಸಿದರೆ ಅವರೂ ಅವರ ಪಾಡಿಗೆ ಸುಖವಾಗಿರ್ತಾರೆ. ನಮ್ಮ ತಂಟೆಗೆ ಬರಲ್ಲ. ನಮ್ಮ ಪಾಡಿಗೆ ನಾವೂ ಸುಖವಾಗಿರಬಹುದು'

'ಅವರಿಬ್ಬರನ್ನ ಅದು ಹ್ಯಾಗೆ ಹತ್ತಿರ ಸೇರಿಸಿತೀರ್ರೀ?'

'ತುಂಬಾ ಸಿಂಪಲ್ಲು ರಮಾ. ನೋಡು ಹೀಗೆ ಮಾಡೋಣ. ಪ್ರತಿ ದಿನ ಕನಸಲ್ಲಿ ಬರೋದು ಗ್ಯಾರಂಟಿ. ಹೌದಾ?'

'ಹೌದೂ. ಆದರೆ, ಅದಕ್ಕೇನು ಮಾಡಬೇಕೂಂತ?'

'ಇವತ್ತು ನೀನು ನಿಮ್ಮ ಭಾವನಿಗೆ ಹೇಳು, 'ನಾಳೆ ಭಾನುವಾರ ಇಂಥ ಜಾಗಕ್ಕೆ ಬನ್ನಿ, ಅಲ್ಲಿ ಮಾತಾಡೋಣ' ಅಂತ. ನಾನೂ ಅಷ್ಟೇನೇ ನಿಮ್ಮಕ್ಕನಿಗೆ ಹೇಳ್ತೀನಿ 'ನಾಳೆ ಭಾನುವಾರ ಇಂಥ ಜಾಗಕ್ಕೆ ಬನ್ನಿ, ಅಲ್ಲಿ ಮಾತಾಡೋಣ' ಅಂತ. ಇಬ್ಬರೂ ಅಲ್ಲಿಗೆ ಬರ್ತಾರೆ. ಅವರಿಬ್ಬರನ್ನೂ ಅಲ್ಲಿ ಸೇರಿಸಿ, ಸಿನಿಮಾದಲ್ಲಿ ತೋರಿಸ್ತಾರಲ್ಲಾ, ಹಾಗೆ ಒಬ್ಬರ ಕೈಲ್ಲಿ ಇನ್ನೊಬ್ಬರ ಕೈಯ್ಯನ್ನಿಟ್ಟು ಕೈ ಮುಗಿದುಬಿಡೋಣ'

ಬಿದ್ದು ಬಿದ್ದು ನಗತೊಡಗಿದೆ ಇವರ ಜೋಕಿಗೆ.

'ಯಾಕೇ ರಮಾ? ಯಾಕೇ ಹಾಗೆ ನಗ್ತಾ ಇದ್ದೀಯಾ?'

'ಇನ್ನೇನ್ರೀ ಮತ್ತೇ? ಕನಸಿನಲ್ಲಿ ನಾನು ನಾನಾಗಿರ್ತೀನಾ? ನನಸಿನಲ್ಲಿ ಅಂದುಕೊಂಡದ್ದನ್ನ ಕನಸಿನಲ್ಲಿ ಮಾತಾಡೋಕಾಗುತ್ತಾ? ಕನಸಿನಲ್ಲಿ ಈಗಿರುವ ಬುದ್ಧಿ ಇರುತ್ತಾ? ಕನಸೇ ಬೇರೆ, ನನಸೇ ಬೇರೆ. ಇಲ್ಲಿ ಅಂದುಕೊಂಡದ್ದನ್ನ ಅಲ್ಲಿ ಮಾಡೋಕಾಗುತ್ತೇನ್ರೀ?'

'ಆಗತ್ತೆ. ಖಂಡಿತ ಆಗತ್ತೆ. ನಾನು ಇದರ ಬಗ್ಗೆ ಸ್ವಲ್ಪ ಸ್ಟಡಿ ಮಾಡಿದ್ದೀನಿ ರಮಾ. ನನಸಿನಲ್ಲಿ ಅಂದುಕೊಂಡದ್ದನ್ನ ಕನಸಿನಲ್ಲಿ ಮಾಡೋಕೆ ಒಂದು ಮೆಥಡ್ ಇದೆ. ಆದರೆ ನಾವು ಸ್ವಲ್ಪ ಕಷ್ಟ ಪಡಬೇಕು ಅಷ್ಟೆ'

ಇವರು ಇಷ್ಟೊಂದು ಗಂಭೀರವಾಗಿ ಹೇಳಿದ ಮೇಲೆ ನಾನೂ ಸ್ವಲ್ಪ ಗಂಭೀರವಾಗೇ ತೊಗೊಂಡೆ. ಅವರ ಮಾತಿಗೆ ಕಿವಿ ಕೊಟ್ಟೆ

'ಗಮನ ಇಟ್ಟು ಕೇಳು. ಸಾಯಂಕಾಲ ನಾನು ಆಫೀಸಿನಿಂದ ಬಂದ ಮೇಲೆ, ಕಾಫಿ ಗೀಫಿ ಕುಡಿದು, ಸ್ವಲ್ಪ ವಿಶ್ರಾಂತಿ ತೊಗೊಂಡು . .'

'ರೀ, ತಮಾಷೆ ಸಾಕು ಅದೇನು ಹೇಳ್ರೀ ಬೇಗಾ'

'ತಮಾಷೆ ಏನಿಲ್ಲ ರಮಾ. ಒಂದ್ಹೈದು ನಿಮಿಷ ಶಾಂತವಾಗಿ ಕೂತುಕೊಳ್ಳೋದು. ಧ್ಯಾನ ಮಾಡೋದು ನಿನಗೆ ಗೊತ್ತಿದೆಯಲ್ಲಾ, ಹಾಗೆ. ನಿಧಾನಕ್ಕೆ ನಿದ್ದೆ ಮಾಡ್ತಿದ್ದೀವೇನೋ ಅನ್ನೋ ತರಹ ಕಣ್ಣುಗಳನ್ನು ಮುಚ್ಚಿಕೊಳ್ಳೋದು. ಪ್ರತಿದಿನದ ಕನಸನ್ನು ಆಗಲೂ ಕಾಣುವಂತೆ ಕಲ್ಪಿಸಿಕೊಳ್ಳೋದು. ಆಗ ನಿನಗೆ ನಿಮ್ಮ ಭಾವ ಕಾಣಿಸ್ತಾರೆ, ನನಗೆ ನಿಮ್ಮಕ್ಕ ಕಾಣಿಸ್ತಾರೆ. ಅವರ ಜೊತೆ ಸ್ವಲ್ಪ ಹತ್ತಿರವಾದಂತೆ ನಟಿಸ್ತಾ ನಟಿಸ್ತಾ, ನಮ್ಮ ಮನೆ ಹಿಂದೆ ಇದೆಯಲ್ಲಾ 'ಮಂದಾರ ಪಾರ್ಕು,' ಅಲ್ಲಿಗೆ ಮಾರನೆ ದಿನ ಬರೋಕೆ ಹೇಳೋದು. ಮಾರನೆ ದಿನದ ಕನಸಿನಲ್ಲಿ ಇಬ್ಬರೂ ಮಂದಾರ ಪಾರ್ಕಿಗೆ ಬರ್ತಾರೆ. ಇಬ್ಬರನ್ನೂ ಭೇಟಿ ಮಾಡಿಸಿ, ಒಬ್ಬರ ಕೈಯಲ್ಲಿ ಇನ್ನೊಬ್ಬರ ಕೈಯಿರಿಸಿ 'ಆಲ್ ದ ಬೆಸ್ಟ್, ಬೈ ಬೈ' ಅಂತ ಹೇಳಿಬಿಡೋದು. ಆಗ, ಅವರೂ 'ಥ್ಯಾಂಕ್ಯೂ. ಬೈ...ಬೈ' ಅಂತ ಹೇಳ್ತಾ ಶಾಂತವಾಗಿ ಅದೃಶ್ಯರಾಗಿಬಿಡ್ತಾರೆ. ನಾವು ಮಂಗಳ ಹಾಡಿಬಿಡೋದು ಅಷ್ಟೇ' ಅಂದರು.

'ಏನ್ರೀ, ನೀವು ತಮಾಷೆ ಮಾಡಿತಿಲ್ಲ ತಾನೇ? ಇದೆಲ್ಲ ನಿಜವಾಗಲೂ ಸಾಧ್ಯವೇನ್ರೀ?'

'ನಮ್ಮ ಪ್ರಯತ್ನ ನಾವು ಮಾಡೋಣ. ಅದರಲ್ಲಿ ತೊಂದರೆ ಏನಿಲ್ಲವಲ್ಲಾ, ಆದರೆ ಒಂದು ಹತ್ತು-ಹದಿನೈದು ದಿನ ನಾವು ಸೀರಿಯಸ್ಸಾಗಿ ಏಕಾಗ್ರತೆಯಿಂದ ಅಭ್ಯಾಸ

ಮಾಡಬೇಕು. ಏಕಾಗ್ರತೆಯಿಂದ ಎಂಥೆಂಥದನ್ನೋ ಸಾಧಿಸಿರುವಾಗ ಇದು ಯಾವ ಮಹಾ. ಯಶಸ್ವಿಯಾಗಿ ಮಾಡ್ತೀವಿ' ಅನ್ನೋ ಆತ್ಮವಿಶ್ವಾಸ ಇಬ್ಬರಿಗೂ ಬಂದ ದಿನ, ಇಬ್ಬರನ್ನೂ ಒಂದುಗೂಡಿಸಿ ಬಿಡೋಣ. ಏನಂತೀಯಾ?'

'ಏನೋಪ್ಪ, ನನಗೆ ನಂಬಿಕೆ ಬರ್ತಾ ಇಲ್ಲ'

'ನೋಡು ನೋಡು, ಇದೇ ನೀನು ಮಾಡ್ತಾ ಇರೋ ದೊಡ್ಡ ತಪ್ಪು. ಮೊದಲಿಗೆ 'ಇದು ಖಂಡಿತ ಸಾಧ್ಯ' ಅಂತ ದೃಢವಾಗಿ ನಂಬು. ಖಂಡಿತವಾಗಿ ಸಾಧ್ಯವಾಗತ್ತೆ'

'ಆಯ್ತುರೀ. ಇದೂ ಒಂದು ನೋಡೇಬಿಡೋಣ'

'ಗುಡ್' ಅಂದೆ.

★★★

ಮೊದಮೊದಲು ಹಾಗೆ ಕಲ್ಪಿಸಿಕೊಳ್ಳೋದು ಕಷ್ಟವೇ ಆಯ್ತು. ಕ್ರಮೇಣ ಹಾಗೆ ಕಲ್ಪಿಸಿಕೊಳ್ಳೋದು ಸಾಧ್ಯವಾಗ್ತಾ ಹೋಯಿತು. ಆಗ ಇವರ ಮಾತಿನ ಮೇಲೆ ನಂಬಿಕೆಯೂ ಬರೋಕೆ ಷುರು ಆಯ್ತು. ಇನ್ನೂ ಸೀರಿಯಸ್ಸಾಗಿ ಅಭ್ಯಾಸ ಮಾಡಿದೆ. ಸುಮಾರು ಇಪ್ಪತ್ತು ದಿನಾನೇ ಬೇಕಾಯಿತು, ಏಕಾಗ್ರತೆಯನ್ನು ಸಾಧಿಸಲು. ಸರಿ, ಒಂದು ಒಳ್ಳೆಯ ದಿನವನ್ನು ನಿಶ್ಚಯಿಸಿದೆವು. ಮೊದಲ ದಿನ ಮಂದಾರ ಪಾರ್ಕಿಗೆ ಉಮಾ-ಉಮೇಶರನ್ನು ಆಹ್ವಾನಿಸಿದ್ದೂ ಆಯ್ತು. ಮಾರನೆ ದಿನ ಅವರುಗಳು ಮಂದಾರ ಪಾರ್ಕಿಗೆ ಬಂದದ್ದೂ ಆಯ್ತು. ಪರಸ್ಪರ ಭೇಟಿ ಮಾಡಿಸಿದ್ದೂ ಆಯ್ತು. ಒಬ್ಬರ ಕೈಯಲ್ಲಿ ಒಬ್ಬರ ಕೈಯನ್ನು ಇರಿಸಿದ್ದೂ ಆಯ್ತು. ನಾವಂದುಕೊಂಡಂತೆ ಅವರಿಬ್ಬರೂ ಕೈ ಕೈ ಹಿಡಿದೇ ಅಷ್ಟು ದೂರ ಹೋಗಿ, ಒಟ್ಟಿಗೆ ಇಬ್ಬರೂ ಹಿಂದೆ ತಿರುಗಿ ದೀರ್ಘವಾದ ಬೈ ಹೇಳಿದ್ದೂ ಆಯಿತು. ಮಾರನೆ ದಿನ ನಾವು ಬೆಳಿಗ್ಗೆ ಎದ್ದಾಗ ಎಂಟು ಗಂಟೆ!

ಈ ಸತ್ಯ ಘಟನೆಯನ್ನ ಯಾರಿಗೆ ಹೇಳಿದರೂ ನಂಬೋದಿಲ್ಲ. ಅವರೆಲ್ಲ ದಡ್ಡರು. ಅದಕ್ಕೇ, ನಿಮಗೆ ಮಾತ್ರ ಹೇಳಿದ್ದು.

✳

---

## ಒಳ್ಳೆಯ ಸ್ನೇಹ

**ಸುಂದರ ಬದುಕಿಗೆ ಸರಿಯಾಧ ಹೃದಯದ ಬಡಿತ ಇರಬೇಕು**

**ಹೃದಯದ ಬಡಿತ ಇರಬೇಕೆಂದರೆ ಹೃದಯ ಇರಬೇಕು**

**ಹೃದಯ ಸರಿಯಾಗಿರಬೇಕು ಎಂದರೆ ಮನೋಲ್ಲಾಸ ಇರಬೇಕು**

**ಮನೋಲ್ಲಾಸ ಇರಬೇಕೆಂದರೆ ಸರಿಯಾದ ಸ್ನೇಹಿತ ಇರಬೇಕು**

**ಆ ಸ್ನೇಹಿತ ನೀನೇ – ಸದಾ ಕಾಲ ನನ್ನ ಜೊತೆಗಿರಬೇಕು**

**ಆನಂದ ವಿಹಾರ ಕ್ಲಬ್**

# ಡ್ರೀಮ್ ಕ್ವೀನೋ, ಕೆಟ್ಟ ಕನಸ ಕ್ವೀನೋ

**- ಎಚ್.ಆರ್. ಹನುಮಂತ ರಾವ್**

ಆಶ್ವೀಜ ಮಾಸದ ಎರಡನೆಯ ಶನಿವಾರ. ತಂಪಾದ ಸಂಧ್ಯಾ ಸಮಯ ಗೂಡು ಸೇರುವ ಹಕ್ಕಿಗಳ ಇಂಪಾದ ಕಲವರದ ರಾಗಮಾಲೆ. ರೂಢಿಯಂತೆ ಆನಂದ ವಿಹಾರ ಕ್ಲಬ್ನ ಚಿಟಿಕೆ ಸಂಘ ಸದಸ್ಯರಾಗಮನದ ವೇಳೆ. ಒಬ್ಬೊಬ್ಬರೇ ಹಾಜರಿಯಾಗಿ ಆಸೀನರಾಗುತ್ತಿದ್ದ, ಉಭಯ ಕುಶಲೋಪರಿ ನಂತರ ತಮ್ಮ ತಮ್ಮ ಪ್ರಿಯ ಖಾದ್ಯಗಳ ಮತ್ತು ಪಾನೀಯ ಸೇವನೆಯ ರಂಜನೆಯ ಜೊತೆಗೆ, ಪರಸ್ಪರ ಕಿಚಾಯಿಸಿ ಅಲೆಅಲೆಯಾಗಿ ನಗೆ ತರಿಸಿ ಮತ್ತು ಮುದ ಕೊಡುವ ಮಾತಿನ ವರಸೆಯ ಮನರಂಜನೆ, ಠಾಕೋಠಿಕು ಏಳು ಗಂಟೆಯಾಗುತ್ತಿದ್ದ ಮುಖ್ಯ ಭೂಮಿಕೆಯನ್ನಲಂಕರಿಸುವ ಗಣ್ಯರ ರೀತಿ ಶಂಕರ ಸಿದ್ಧಾಂತಿಗಳ ಆಗಮನ. ಅವರ ಬರವನ್ನೇ ಎದುರು ನೋಡುತ್ತಾ, ಕಂಡ ಕೂಡಲೇ ಬೇರರ್ ವಾಸು ಅವನ ಗೈರಲ್ಲಿ ಸುಬ್ಬು ತಡಮಾಡದೆ ಅವರ ಪ್ರಿಯವಾದ ಪಾನೀಯ ಹಾಗೂ ಖಾರದ ಗೋಡಂಬಿ ತಟ್ಟೆಯನ್ನ ಮೇಜಿನ ಮೇಲಿಟ್ಟು ದೂರದಲ್ಲಿ ಕೈ ಕಟ್ಟಿನಿಲ್ಲುವವರು. ಸಿದ್ಧಾಂತಿಗಳ ಮಾತೆಂದರೆ ಎಲ್ಲರಿಗೂ ತಡೆಯಲಾಗದ ಆಕರ್ಷಣೆ! ಈ ಆನಂದ ವಿಹಾರ ಕ್ಲಬ್ಬಿನ ಪರಿಚಯವಿಲ್ಲದವರು ನಮ್ಮೂರಿನ ರಾಮ ಮಂದಿರ ರಸ್ತೆಯನ್ನು ದಾಟಿ ಸ್ವಲ್ಪ ಎಡಕ್ಕೆ ನಡೆದು ಮತ್ತೆ ಬಲಕ್ಕೆ ತಿರುಗಿ ಒಂದೆರಡು ಹೆಜ್ಜೆ ಹಾಕಿದರೆ ಎದುರಿಗೇ ಕಾಣುವ ಏಕೈಕ ಬಹುಮಹಡಿ ಕಟ್ಟಡವೆ ನಮ್ಮ ಕ್ಲಬ್ಬಿನ ವಿಳಾಸ. ಮೊದಲ ಉಪ್ಪರಿಗೆಯ ಈಶಾನ್ಯ ದಿಕ್ಕಿನ ಕೋಣೆಯೇ ನಮ್ಮ ಚಿಟಿಕೆ ಸಂಘದ ಆಶ್ರಯ ಧಾಮ. ಸಿದ್ಧಾಂತಿಗಳ ಮೇಜು ಕುರ್ಚಿಯೇ ಅಲ್ಲಿಯ ಕೇಂದ್ರ ಸ್ಥಾನ. ಅವರ ಮಾತೇ–ವೃತ್ತಾಂತವೋ, ಅನುಭವವೋ, ಕಟ್ಟುಕಥೆಯೊ ಏನಾದರಾಗಲಿ – ಒಟ್ಟಿನಲ್ಲಿ ಎಲ್ಲರ ಕುತೂಹಲ, ಆಸಕ್ತಿ ಕೆರಳಿಸಿ ಆಕರ್ಷಿಸಿ ಕೆದಕುವ ಆಯಸ್ಕಾಂತ.

ಸಿದ್ಧಾಂತಿ ಕೂಡುತ್ತಾ ತಮ್ಮ ಸುಲೋಚನವನ್ನ ಮೇಜಿನ ಮೇಲಿಟ್ಟು ಎಲ್ಲರತ್ತ ದೇಶಾವರಿ ನಗೆ ಬೀರಿ ''ಏ ಬಸವರಾಜಪ್ಪ, ನಿಮ್ಮ ರೇಸ್ ಕೋರ್ಸ್ನ ಈಗಿನ ಲೇಟೆಸ್ಟ್ ವೃತ್ತಾಂತವೇ, ಹೇಗೆ ಎನ್ನುತ್ತ ತಮ್ಮ ಗ್ಲಾಸನ್ನು ಕೈಗೆತ್ತಿ ಕೊಂಡ, ಹಾಗೆ ಕೇಳಲು ಕಾರಣವೂ ಇತ್ತು. ನೀಲಗಿರಿ ಪ್ಲೇಟ್ ರೇಸಲ್ಲಿ ಮಹಾರಾಜ ಕಪ್‌ಗಾಗಿ ಗೊತ್ತಾ ಅಮೃತವರ್ಷಿಣಿ ಕುದುರೆ ಹಠಾತ್ತಾ, ಏನಾಯಿತೋ ಹೇಗೋ ಅರ್ಧ ದಾರಿಯಲ್ಲೇ ನಿಂತು, ಜಾಕಿ ಏನೇ ಪ್ರಯತ್ನಿಸಿದರೂ ಹಿಂದೆ ಹಿಂದೆ ಸರಿದಿತ್ತು. ಪಂಟರುಗಳು ಭಾರಿ ಕೋಲಾಹಲವನ್ನೇ ಎಬ್ಬಿಸಿದರು. ಎಲ್ಲರೂ ಸಾಕಷ್ಟು ಗದ್ದಲ ಎಬ್ಬಿಸಿದ ಮೇಲೆ ಅದರ ಮೇಲಿನ ಬಾಜಿ ಹಣ ಮುಂದಿನ ರೇಸ್ಗೆ ಹಾಕಲು ಒಪ್ಪಿದ್ದರು. ಅಂದರೆ ಕುದುರೆ ಬಾಲಕ್ಕೆ ಕಟ್ಟಿದ್ದು. ಸರ್ಕಾರಕ್ಕೆ ಹೋಗಿದ್ದು...ಳೆ ಗೆ ಕೊಟ್ಟಿದ್ದು ಕತ್ತೆ ಬಾಲಕ್ಕಷ್ಟೇ ಸಮ, ಹಣ ಹೋದ ವೇಶಿಯಂತಕ್ಕು ಸರ್ವಜ್ಞ, ಏನಂತೀರಾ? ನಮ್ಮ ಆಶು ಕವಿ ಶೇಖರ್ ರಾಗವಾಗಿ ಉಸುರಿದರು. ಕನ್ನಡದ ಓಳು ಭಜನೆ ಚಂದ್ರು 'ಹಾಗಲ್ಲರೀ, ಆ ದುಡ್ಡೆ ಕಳೆದಾಗ ವಿಷ ಕುಡಿದು, ನೀರಿಲ್ಲದಾ ಬಾವಿಗೆ ಜಿಗಿದು, ಕಲ್ಲಿಗೆ ಶಿರ ಚಚ್ಚಿ ಪ್ರಾಣ ಬಿಟ್ಟಂತೆ ಸರ್ವಜ್ಞ ಅಂದರು. ಏ. ಏನ್ಕೆ (ಎಳೆನಿಂಬೆಕಾಯಿ) ಮುಖವೆಲ್ಲ ಕಿವಿಚಿ ''ಛಿ, ಅದಲ್ಲ ರೀ, ಅದೇಕೆ ನೀವೆಲ್ಲಾ ಆ ಸರ್ವಜ್ಞನಿಗೆ ಕೆಟ್ಟ ಹೆಸರು ತರ್ತೀರಾ? ಸರಿಯಾಗಿ ಗೊತ್ತಿದೆ ಅಂದ್ರೆ ಸುಮ್ನಿರಿ. ಹೀಗಾದರೂ ಹೇಳಿ ಆ ಒಂದು ದಿನಂ, ನವೆಂಬರೆಂಟರೆಂಟಪಿಎಂ, ಐನೂರ, ಸಾವಿರ ನೋಟುಂಗಳಂ ಖಡಕ್ ತಿಪ್ಪೆಗುಂಡಿಗೆ ಸಮಂ ಎಂದು ಮೋದಿಯಮ್

ಠೀ(ಟೀ)ವಿಯಲ್ಲಿ ಒದರಲ್ಕೆ, ಭೂಮಿ ಬಾಯ್ಬಿಟ್ಟಿತ್ತೋ, ನಭ ಮೇಲೆರೆಗಿತೋ, ಸಮುದ್ರ ಕೈ ಚಾಚಿ ಎಲ್ಲರ ನುಂಗಿತೋ ಎಂದೆನ್ನುತ ಕಪ್ಪುಹಣ ಒಡೆಯರುಂಗಳ್, ತಡಬಡಾಯಿಸಲ್ಕೆ, ರೇಜಿಗೆ ಬಂದು. ಎಗೆರಿಗೆರಿ ಬಿದ್ದರೆ, ಈ ದುಷ್ಟ ಚತುಷ್ಟಯರುಂಗಳೆಲ್ಲ (ಅರ್ಥ ರಾಜಕಾರಿಣಿ, ಕಾಳಸಂತೆ ಖದೀಮ, ಹಮಾಲೀ ಚೋರ ಹಾಗೂ ದೇಶದ್ರೋಹಿ ಡಾನ್ ಗುರು) ಬಿದ್ದು ಎದ್ದು ಒದ್ದಾ, ಗುದ್ದಾ ಗೋಳಾಡಿದರೋ ಅಕಟಕಟ, ಕೋಪದಿಂ ತಕದಿಂ ತಕದಿಂ ಕುಣಿದಾಡಿ ಅರ್ಧ ಹೆಣವಾದರೋ ಎಂದು ಹೇಳಿರಿಲ್ಲ, ಸರಿಕಾಣುತ್ತೆ'' ಎಂದರು ಎಲ್ಲರು ಸ್ಥಳ, ನಮ್ಮ 'ಏಎನ್ಕೆ' ಎಂದು ಇಷ್ಟು ಉದ್ದುದ್ದಾದ ಅಣಕು ಪದ್ಯದ ವಿಕಟಕವಿಯಾದರು. ಅಕಟ ಅಕಟ? ಎಂದು ಪ್ರೊಫ್ ಹಂಚಿಕಡ್ಡಿ ಆದಿಯಾಗಿ ಎಲ್ಲರು ಬೆಬ್ಬರಗಾದರು! ಅಶು ಕವಿ ಶೇಖರ್ ಚಂದ್ರು, ಪಿಲ್ಲು (ಅವರ ಪೂರ್ತಿ ಹೆಸರು ಪಿ.ಐ. ಲಕ್ಷ್ಮಣ ತೇಂಬೆ-ಕಂಪ್ಯೂಟರ್ ಇಂಜನೀರ್) ಒಟ್ಟಿಗೆ ಕೂಗಿಕೊಂಡರು 'ಸಾರ್ ಅದು ಅವರ ಪದ್ಯವಲ್ಲ, ಮೊಬೈಲ್ಫೋನ್ನಲ್ಲಿ ಯಾರೋ ವಾಟ್ಸಾಪ್ ಮೂಲಕ ಟ್ವೀಟ್ ಮಾಡಿರ್ತಾರೆ, ಅದನ್ನ ಈಗ ಇಲ್ಲಿ ಒದರ್ತಾರೆ, ಅಷ್ಟೇಯಾ ಎಂದು ಮೂದಲಿಸಿ ಮಾತಾಡಿದರು. ಅದಕ್ಕಲ್ಲವೇ ಈ ಸಲಫೋನುಗಳು ತಯಾರಾಗಿದ್ದು? ನೇರ ಟ್ವೀಟಿಸಿದರು ನಮ್ಮ ರೇವಣಪ್ಪ. 'ಅದು ನಿಜವು ಕೂಡ, ನಮ್ಮ ಅನೇಕ ಮೊಬೈಲ್ ಹುಳಗಳಿಗಷ್ಟೇ ಗೊತ್ತಿರುತ್ತದೆ. ಪೇಪರುಗಳನ್ನು ಓದದೇ ಇಲ್ಲೇ ಬೇಕಾದ್ದು ತಿಳಿಯುವಾಗ ಪೇಪರಾಗ್ಯಾಕೆ ದುಡ್ಡು ವೇಷ್ಟು? ಎಂದರು ಮುದ್ದೇಶ್ ಸಾರ್. ಅದರ ಮೇಲೆ ಹಾಕಿದ್ದ ನನ್ನ ಐದು ಸಾವಿರ ನೀರಿನಲ್ಲಿ ಮಾರಣ ಹೋಮವೇ ಆಗಿಹೋಯಿತು. ಎಂದು ನಮ್ಮ ಬಸವರಾಜಪ್ಪ ಆಲಿಯಾಸ್ ಬಿಜ್ಜು ಬಿಸುಸುಯ್ದ. ''ಹಣ ಹೋದರೆ ಚಿಂತಿಲ್ಲ ಸಾರ್, ಆದರೆ ಮತ್ತೊಂದು ಕುದುರೆಗೆ ಹಾಕಲೇಬೇಕಾಗಿ ಆ ಕಚಡಾ ಜ್ಯೋತಿ ಮಹಲ್ ಮೇಲೆ ಹಾಕಿದ್ದು ತಪ್ಪೇ? ನನ್ನ ಗ್ರಹಚಾರ, ಅದು ಚಿಕ್ಕಬಳ್ಳಾಪುರದ ರೈಲ್ ತರಾ ಓಡಿ ಬಾಲ ತೋರ್ಸಿ ಹೋಗಾದ ಸರಿನಾ ಸರ್?'' ಕೋಪದಿಂದ ಉರಿದುಬಿದ್ದ ಬಿಜ್ಜು. ಸಭೆಯಲ್ಲಿ ಎಲ್ಲರು ಕ್ಷಣ ಕಾಲ ಮೌನ. ಇದುವರೆಗೆ ಮಾತೆ ಆಡದಿದ್ದ ಸಂಜೀವ ಶೆಟ್ಟರು ನಾವಿಟ್ಟ ಮತ್ತೊಂದು ಹೆಸರು ಚಿನಿವಾರ ಶೆಟ್ಟಿ, ಆತ ಚಿನ್ನದ ವ್ಯಾಪಾರಿ ಅದೇನರಿ ಈ ಟ್ರೈನ್ ಸಮಾಚಾರಮು ಅಟ್ಲಾಂತ ಮಾ ಪೆಡ್ಲಾಂಮು ಊರಿನಿ ತಮಾಷಿ ಚೇಚೇದಿ ಸರಿನಾ ಬಿಜ್ಜು, ದಾಂಕು ತೆಲಸ್ತೆ ಮೀಕಿ, ನಾಕು ಔತುಂದಿ ಚಾಲ ಮರ್ಯಾದಾ? ಪ್ರಶ್ನಿಸಿದರು. ನಾವೂ ಹೇಳೋದು ಕೇಳ್ರಿ ಶೆಟ್ರೇ, ನಿಮಹೇಂಡ್ತಿ ಊರಂತ ಇರೋ ವಿಷ್ಯ ಚಪ್ಪಿತೇ, ಮೀ ಹುಷಾರಲೋ ಮೀರು ಉಂಡಾಲ, ಅಂತೆ ಮನಕೇಮಿ, ಗೊತ್ತಾಯಿಚಿನಿವಾರಲು? ಎನ್ನುತ್ತಾ ರೇವಣಪ್ಪ ಕನ್ನಡ, ತೆಲುಗುಗೂ ಮದುವೆ ಮಾಡಿಸಿ 'ಸ್ವಾತಂತ್ರ್ಯ ಬಂದ ದಶಕದಲ್ಲಿ ಮುಂಚೆ ಅನಂತರವೂ ಬೆಂಗಳೂರಿನಿಂದ ಚಿಕಬಳ್ಳಾಪುರ 35 ಮೈಲಿಗಳಷ್ಟೇ ಅಂತರ ಒಂದೇ ಟ್ರೈನ್ ಬೆಳಿಗ್ಗೆ ಇಲ್ಲಿಂದ ಸಂಜೆ ಅಲ್ಲಿಂದ ಇಲ್ಲಿಗೆ ನ್ಯಾರೋಗೇಜ್ ಬಂಡಿ ಓಡಿಸುತ್ತಿದ್ದ ವ್ಯಾಪಾರಿಗಳಿಗಾಗಿ. ಅದು ಕನಿಷ್ಟ ನಾಲ್ಕು ಘಂಟೆಯಾದರೂ ತೆಗೆದುಕೊಳ್ಳುತ್ತಿತ್ತು. ಹೆಜ್ಜೆ ಹೆಜ್ಜೆಗಳ ಹಳ್ಳಿಗಳ ಸ್ಟೇಷನ್ನುಗಳಲ್ಲಿ ನಿಂತು ಮುಂದೆ ಹೋಗುವ ಕಾರಣ ಅದರ ವೇಗ ಗಂಟೆಗೆ ಹತ್ತು ಮೈಲಿಗಳಾದರೆ ಹೆಚ್ಚು!' ಎಂದು ಸಮಜಾಯಿಷಿ ನೀಡಿದರು.

ಸಿದ್ಧಾಂತಿಗಳು ನವಿರಾಗಿ ಕೆಮ್ಮಿ 'ನನ್ನ ಅನುಭವದಲ್ಲಿ ಈ ತೆರನ ಬಾಜಿ ಕಟ್ಟುವ ಸಮಸ್ಯೆ ನನ್ನ ದೂರದ ಬಂಧುಗಳೊಬ್ಬರ ಪೈಕಿ ಹೆಸರು ಮುರಳಿ - ಆತನಿಗೂ ಆಗಿತ್ತು. ಆದರೆ ಅದಕ್ಕೆ ಪರಿಹಾರವು ನಮ್ಮ ಜಿಮ್ಮಿಯಿಂದಾಗಿ ಸಿಕ್ಕಿ ಆತ ಸಾಕಷ್ಟು ಹಣ ಖ್ಯಾತಿ ಎರಡೂ

ಸಂಪಾದಿಸಿದ್ದ.' ಅದು ಹ್ಯಾಗೆ ಸಾರ್ ಜೆಮ್ಮಿ ಅಂದರೆ ಆ ನಿಮ್ಮ ಬಂಧು ಟಿವಿಎಸ್ ಮೂರ್ತಿಗೆ ಅದೇನೋ ಔಷಧ ಕೊಟ್ಟು ಆತ ಪ್ರೀತಿಸಿದ ಹುಡುಗಿಯನ್ನೇ ಮದುವೆಯಾಗಲು ಸಹಾಯ ಮಾಡಿದವರಾ? ಎಲ್ಲರೂ ಒಕ್ಕೊರಳಿನಿಂದ ಕೂಗಿದರು (ಹಿಂದಿನ 'ಪ್ರೇಮಾಯಣ' ವೃತ್ತಾಂತ ಓದಿ ನೋಡಿ) ಬಿಜ್ಜು ಗಂಗೆಲ್ಲುವ ಕುದುರೆ ಗುಟ್ಟು ಗೊತ್ತಾ. ಸ್ವರ್ಗವೇ ಭೂಮಿಗೆ ಬಂದ ಹಾಗೆ! ಎಲ್ಲರ ಆಸಕ್ತಿ ಕುತೂಹಲ ತಾರಕಕ್ಕೇರಿತ್ತು. ಸಿದ್ಧಾಂತಿಗಳ ವೃತ್ತಾಂತವೆಂದರೆ ಅದೇನೋ ಆಕರ್ಷಣೆ. ಎಲ್ಲರ ಗ್ಲಾಸುಗಳು ಮತ್ತೊಂದರಲ್ಲಿ ತುಂಬಿಸಲ್ಪಟ್ಟವು ಅವರ ಮಾತಿನ ಮೋಡಿಗೆ ಮರುಳಾಗುತ್ತಾ!

'ಈ ಮುರಳಿ ಮಿಲಿಟರಿಯಲ್ಲಿ ಸ್ವಲ್ಪ ಕಾಲ ಸೇವೆ ಸಲ್ಲಿಸಿ ಸ್ವಯಂ ನಿವೃತ್ತಿ ಪಡೆದವರು', ಸಿದ್ಧಾಂತಿಗಳ ಮಾತು ಮುಂದುವರಿಸಿದರು. 'ನಂತರ ನಮ್ಮ ಬಿಜ್ಜು ವಿನಂತ ತಮ್ಮದೇ ಕುದುರೆ ಫಾರ್ಮ್ ಹೊಂದಿದ್ದರಲ್ಲಿ ಒಂದು ರೇಸ್ ಕುದುರೆ' ಡ್ರೀಮ್ ಕ್ವೀನ್-ನ ಮಾಲೀಕರೂ ಆಗಿದ್ದವ. ಇದು ಸಾಮಾನ್ಯವಾಗಿ ಫಿಲ್ಲಿಗಳ ರೇಸ್ನ ಎಲ್ಲ ಪಂದ್ಯಗಳಲ್ಲಿ ಉತ್ತರ ಪ್ರದರ್ಶನ ಕೊಟ್ಟು ಯಾವಾಗಲೂ ಪಂಟರುಗಳ ಮೊದಲ ಆಯ್ಕೆಯಾಗುತ್ತಿತ್ತು. ಈ ಕಾರಣ ಹಲವರ ಹಗೆತನಕ್ಕೆ ಕಾರಣವಾಗಿ ಹೇಗಾದರೂ ಈ ಕುದುರೆಯನ್ನ ಅನುಪಯುಕ್ತ ಮಾಡಬೇಕೆಂದು ಒಳಗೊಳಗೇ ಪಿತೂರಿ ಮಾಡುತ್ತಿದ್ದ. ಮುಖ್ಯವಾಗಿ ಅತಿ ಹೆಚ್ಚು ಹಣ ಬಟವಾಡೆಯಾಗುವ ಮಹತ್ತ ಡರ್ಬಿ ರೇಸ್ನಲ್ಲಿ ಅದು ಸ್ಪರ್ಧಿಯಾಗದಂತೆ ಅನೇಕ ಪ್ರಯತ್ನಗಳಾಗಿದ್ದು ಗೆಲುವಾಗಿರಲಿಲ್ಲ. ಹೇಗಾದರೂ ಈ ಬಾರಿಯ ಒಡೆಯರ್ ಕಪ್ಗೆ ಅದು ಇರಲೇಬಾರದೆಂದು ಗುಟ್ಟಾಗಿ ನಡೆಯುತ್ತಿದ್ದ ಒಳ ವ್ಯವಹಾರ ಹೇಗೋ ನಮ್ಮ ಮುರಳಿಗೂ ಗೊತ್ತಾಗಿ ಸರ್ಪಕಾವಲಿಟ್ಟಿದ್ದ ಯೋಚನೆಯಲ್ಲಿದ್ದ ತಾವೊಂದು ದೊಡ್ಡ ಜಾಲವನ್ನೇ ಎದುರಿಸುತ್ತಿರುವ ಭಯದಿಂದ ನಮ್ಮ ಎಖನ್ಕೆ ಸುಮ್ಮನಿರದೆ ಪೊಲೀಸ್ಗೆ ಕರೆಸಿ ಅವರ ಅಧೀನಕ್ಕೆ ಬಿಡಬೇಕಾಗಿತ್ತು' ಅಂದರು. ಬಾಲಿಶ ಮಾತುಗಳಿಗೆ ಕಾಯುತ್ತಿದ್ದ ನಮ್ಮ ಗರಡಿ ಪೀರ್ ಸಾಹೇಬ 'ಹೌದಲ್ಲಾ, ಪುಲಿಸ್ಕಾ ಕ್ಯಾ ಮಾಲೂಮ್ ಐಸಾ ಹೋತಿ? ಅವ್ರು ಬರೋದೇನಿದ್ರೂ ಎಲ್ಲಾ ಖರಾಬ್ ಆದ್ಮೇಲೆ ಮಾಲೂಮ್ ಕ್ಯಾ ಸುಂಸುಮ್ಕೆ ಆನಾ ಜಾನಾ ಕೆ ಅವ್ರೆನ್ ನಿಮ್ಮ ಮನೆ ಆಳಾ? ಕ್ಯಾ ಆಪ್ ಕ್ಯಾಭಿ ಹಿಂದಿ ಸಿನೆಮಾ ನಹಿ ದೇಖಾ? ನಿಮ್ಮ ಅಮಿತಾಭ ವಿಲ್ಲನ್ ಹಿಡಿದ ಮೇಲೆ ತಾನೇ ಪೊಲೀಸ್ ಬಂದು ಅವನ್ನ ಹಿಡಿದಿದ್ದು? ಬಚ್ಚಾತರಹ್ ಮಾತೋಡ್ ಬಿಡ್ರಿ ಎಳೆ ನಿಂಬೆಕಾಯವ್ರೆ' ಎಂದು ಮೀಸೆಯಂಚಿನಿಂದ ಸಣ್ಣ ನಕ್ಕರು. ಏಎನ್ಕೆಗೂ ರೇಗಿತು. 'ಪೀರು ಭಾಯ್ ನೀವ್ ಸುಮ್ನಿರಿ, ಎಲ್ಲಾ ಗೊತ್ತು ಅನ್ನೊದಾದ್ರೆ ನೀವೇ ಕುದ್ರೆ ಕಾವಲು ಯಾಕೆ ಮಾಡಬಾರ್ದು, ಹೇಗೂ ನಮ್ಮ ಅರಬ್ಬೀ ಜನ ಕುದುರೆ ಸಾಕೋದ್ರಲ್ಲಿ, ಸವಾರಿಗಳಲ್ಲಿ ಅನುಭವಸ್ತರೇ?' ಮಾತು ಎಲ್ಲಿಂದಲೋ ಎಲ್ಲಿಗೋ ತಿರುಗಿದುದನ್ನ ನೋಡಿ ಸಿದ್ಧಾಂತಿಗಳು ಮುಂದುವರಿಸಿದರು. ಹಾಗಲ್ಲ, ಇಲ್ಲಿ ಕುದುರೆ ಕಾವಲಿನ ಮಾತಲ್ಲ, ಕಾವಲುಗಾರರ ಕಣ್ತಪ್ಪಿ ಹಲವಾರು ಹಮಾಲಿಗಳು ಸ್ಪರ್ಧೆಯ ದಿನ ಹತ್ತಿರವಾಗುತ್ತ ಫೋನ್ ಹಾಗೂ ಪತ್ರಗಳ ಮೂಲಕ ಸಾಕಷ್ಟು ಹೆದರಿಸುವುದು ಶುರುವಾಯಿತು. ಪಂದ್ಯಾವಳಿ ಮೂರೇ ದಿನಗಳಿರುವಾಗ ಮುರಳಿ ಆ ಯೋಚನೆಯಲ್ಲೇ ಕುದುರೆ ಲಾಯದ ಪಕ್ಕದಲ್ಲೇ ಜ್ಞಾನ ತಪ್ಪಿ ಬಿದ್ದು ಹೋಗಿ ಅವರನ್ನು ಆಸ್ಪತ್ರೆಗೆ ಸೇರಿಸುವ ಪ್ರಮೇಯ ಬಂತು. ಪತ್ರಿಕೆಗಳಲ್ಲೂ ಈ ವಿಷಯ ಹರಡಿತು. 'ಹಾಗಾದರೆ ಅವರ ಕುದುರೆಗೆ ಈ ವಿಷಯ ತಿಳಿದರೆ ಅದೂ ಕೂಡ ರೇಸಿನಲ್ಲಿ ಭಾಗವಹಿಸಿ...? ಡಾ. ಜ್ಞಾನೇಶ್ವರಯ್ಯಕೊಸ್ಚಶ್ನಿಸಿದರು. ಇವರು ಮನಃಶಾಸ್ತ್ರ ವೈದ್ಯರು. ಇವರ ಜೊತೆ ಯಾರು

ಜಾಸ್ತಿ ಸಲುಗೆ ಹಚ್ಚಿಕೊಳ್ಳುತ್ತಿದ್ದ ಕಾರಣ ಯಾರೇ ಸಿಕ್ಕರೂ ಮೊದಲಿಗೆ ಅವರ ತಲೆಯನ್ನು ಮನಸ್ಸಿನಲ್ಲೇ ಅಳೆದು, ತೂಗಿ ಇವನಿಷ್ಟೆ ಎಂದು ಲೆಕ್ಕ ಹಾಕಿ ಅವನ ಕೂಡ ಮಾತಾಡುವುದೇ ವಿಚಿತ್ರವಾಗಿರುತ್ತಿತ್ತು. ಇವರ ದೃಷ್ಟಿಯಲ್ಲಿ ಪೀರು ಸಾಹೇಬರೊಬ್ಬರೇ ಅತ್ಯಂತ ನಾರ್ಮಲ್ ವ್ಯಕ್ತಿ. ಚಂದ್ರು, ಎಎನ್ಕೆ, ಬಿಜ್ಜು ಇತ್ಯಾದಿ ಎಲ್ಲ ಸಬ್ನಾರ್ಮಲ್ ವ್ಯಕ್ತಿ ತ್ವದವ! ನಮ್ಮ ಶೀನು ತಲೆ ಸ್ವಲ್ಪ ಓರೆಕೋರೆಯಾಗಿದ್ದು ಅರ್ಧಕ್ಕರ್ಧ ಬೋಳಾಗಿತ್ತು, ಅವರನ್ನು ಹೈಲಿ ಅನ್ಸ್ಟೇಬಲ್ ಮೈಂಡ್ ಇವರದು ಎಂದು ಟೀಕೆ ಮಾಡಿದ್ದ! ನಮ್ಮ ಸದಸ್ಯರೆಲ್ಲ ಅವ್ರನ್ನ ಹುಚ್ಚೇಶ್ವರಂ ಎಂತಲೇ ಕರೆಯುತ್ತಿದ್ದುದು. ಮತ್ತೆ ರೇಸ್ನಲ್ಲಿ ಕುದುರೆ ಓಡಿ ಗೆದ್ದಿತು? ಸಾರ್ 'ಚಂದ್ರು ಪ್ರಶ್ನಿಸಿದರು. 'ಈ ನಿಮ್ಮ ಪ್ರಶ್ನೆಗೆ ಉತ್ತರಿಸುವ ಮುಂಚೆ ಇದು ಕೇಳಿ ಸಿದ್ಧಾಂತಿಗಳು ಮುಂದುವರೆಸಿದರು. 'ಸ್ಪರ್ಧೆ ಇನ್ನೆರಡು ದಿನವಿರುವಾಗ ಒಂದೆಡೆ ಮುರಳಿ ಆಸ್ಪತ್ರೆಯಲ್ಲಿದ್ದ, ಇನ್ನೊಂದೆಡೆ ಆಘಾತವಾದ ಸುದ್ದಿ ಹೊಕ್ಕಿ ಎಲ್ಲರನ್ನು ದಂಗಾಗಿಸಿತು. ಕುದುರೆ ಆ ಎರಡು ದಿನಗಳ ರಾತ್ರಿಯೇ ಯಾರಿಗೂ ತಿಳಿಯದಂತೆ ಮಂಗಮಾಯವಾಗಿತ್ತು!

ಅದು ಹೇಗೆ ಸಾರ್? ಅದಕ್ಕೆ ಲಾಯದ ಎಲ್ಲ ಕಡೆ ಕಾವಲು ಇದ್ದರಲ್ಲ? ಅದರ ಬಾಗಿಲು ಬೇಧಿಸಲಾಗದ ಬೀಗಗಳು ಹಾಕಿದ್ದರಲ್ಲ. ಎಲ್ಲರು ಒಟ್ಟಿಗೆ ಕಿರುಚಿದರು. ಆ ಗಲಿಬಿಲಿಯ ಶಬ್ದ ಹೊರಗೆಲ್ಲ ಪ್ರತಿಧ್ವನಿಸಿತು. ಕ್ಲಬ್ಬಿನ ಇತರೆ ಮಂದಿ ಹೊಕ್ಕು ಏನಾಯಿತೆಂದು ವಿಚಾರಿಸಿದರು! ರೇವಣಪ್ಪನವರು ತುಸು ಕೋಪದಿಂದ ಇದು ನಂಬುವ ಮಾತೆ ಅಲ್ಲ ಸಾರ್, ಏನೋ ಮೋಡಿ ಮಾಡುತ್ತಿರುವಿ ಹೇಗೆ? ಸೂಕ್ಷ್ಮವಾಗಿ ಕಿರು ನಗೆ ನಕ್ಕರು ಸಿದ್ಧಾಂತಿಗಳು ಆ ನಗುವಿನಲ್ಲಿ ನೀವೆಲ್ಲ ಅಮಾಯಕರು, ಅಯ್ಯೋ ಎನ್ನುವಂತಿತ್ತು! ಹಾಗಲ್ಲ, ಸ್ವಲ್ಪ ತಾಳಿ, ಏನಾಯಿತೆಂದರೆ ಎಲ್ಲ ನಾಲ್ಕಾರು ಕಾವಲಿದ್ದ ಪೂರ ನಂಬಿಕಸ್ತ ನರಪಿಳ್ಳೆಯು ಅಲ್ಲಿಗೆ ಬರಲು ಅವಕಾಶ ವಿತ್ತಿ, ನಾವು ನಿದ್ದೆ ಬಾರದ ಹಾಗೆ ಪ್ರತಿಯೊಬ್ಬರೂ ವಿದೇಶಿ ಪ್ಲೇನುಗಳಲ್ಲಿ ಕೊಡುವ ಪೀನಟ್ ತಿನ್ನುತ್ತ ಇದ್ದದ್ದು ಎಂದು ಅಲವತ್ತುಕೊಂಡಿದ್ದು. ಹಾಗಾದರೆ ತಡಮಾಡದೇ ಸ್ಕಾಟಲೆಂಡ್ ಯಾರ್ಡ್‌ಗೆ ಫೋನ್ ಮಾಡಿ ಸಮಸ್ಯೆ ಪರಿಹಾರ ಮಾಡಿಕೋಬಹುದಿತ್ತಲ್ಲ? ಇದು ಮುದ್ದೇಶಯ್ಯ ಪ್ರಲಾಪ ಚಂದ್ರುಗೆ ಕೋಪ ಉಕ್ಕೇರಿ ಬಂತು, 'ಏನ್ರಿ, ಹಾಗೆ ಮಾತಾಡ್ತೀ? ನಮ್ಮ ಕನ್ನಡದ ಮೆರಿಟೆಡ್ ಪತ್ತೇದಾರರಿಲ್ಲ? ಕನ್ನಡ ಕುಲಕೋಟಿಗೆ ಅಪಮಾನ ಈ ಮಾತು. ವಿ.ಆರ್. ಬೆಟರ್ ಡಿಟೆಕ್ಟೀವ್ಸ್ ಆಂಮ್ಡ್ ಎನಿ ಡೇ ಎಂದು ತಮ್ಮ ಹುಗ್ರ ಕನ್ನಡಾಭಿಮಾನ ತೋರಿ ಅಚ್ಚ ಕನ್ನಡದಲ್ಲಿ ರೇಗಿದರು. 'ಏ ಐಸಾ ನಹಿ ಬಾತ್ ಕರೋ ಚಂದ್ರು ಭೈಯ್, ಮೈ ಸುನಾ ಥಾ, ಉದರ್ ಶೆರ್ಲಾಕ್ ಹೋಮ್ಸ್ ಬಹುತ್ ಬಹುತ್ ಪವರ್ಫುಲ್ ಆದ್ಮಿ ಹೈಯ್, ಹೋಲ್ ವರ್ಲ್ಡ್ ವಾಂಟ್ ಹಿಮ್! ಈ ಕಾರ್ಯಕ್ಕೆ, ಅವ್ರನ್ನ ಮಡಗಿ, ಅವ್ರು ಈಗ ಎಸ್ ಬೋಲೇ ತೋ, ಏಕ್ ಹಿ ದಿವಸ್ ಮೇ ಘೋಡಾ ಪತ್ತೆ ಮಾಡ್ತಾ, ಕನ್ನಡ ಕನ್ನಡಾಂತ ಮತ್ ಬೋಲೋ. ಈಗ ಆಜರೆಂಟ್. ಆಜರೆಂಟ್ ಆಗಿ ಡಿಟೆಕ್ಟ್ ಪಡೇಗಾ, ಆಪ್ ಕ್ಯಾ ಬೋಲ್ತೆ ಎಳೆನಿಂಬೆ ಅವ್ರೆ' ಎನ್ನುತ್ತಾ ನಮ್ಮಗರಡಿ ಸಾಬು ಫೈಜ್ ಮೊಹಮ್ಮದ್ ಪೀರ್ ಕನ್ನಡಾಂಗ್ಲೋಯರಬೀ ಮಿಶ್ರಣದಲ್ಲಿ ಏಎನ್ಕೆ ಕಡೆ ನೋಡುತ್ತಾ ತಮ್ಮ ಮೀಸೆ ತಿರುವಿದರು. ಏಎನ್ಕೆ ಏನು ಉತ್ತರಿಸುವ ಗೋಜಿಗೆ ಹೋಗಲಿಲ್ಲ. ಕೆಕ್ಕರಿಸಿ ನೋಡಿ ಮುಖ ಬೇರೆಡೆ ತಿರುವಿದರು. ಅವರಿಬ್ಬರ ಪರಸ್ಪರ ಪ್ರೀತಿ, ಸೌಹಾರ್ದ ಯಾವಾಗಲೂ ಹೀಗೆ ಅಚಲವಾದದ್ದು! ಪ್ರೊ. ಹಂಚಿಕಡ್ಡಿ ಎಂತಂಥ ಕೊಲೆಗಳನ್ನೆಲ್ಲ ಸರ್ಕಾರನ್ನ ಮೆಚ್ಚಿಸಲಿಕ್ಕೆ ಇದೆ ಪೊಲೀಸ್ನವರು ಸೂಯಿಸೈಡ್ ರಿಪೋರ್ಟ್ ಕೊಟ್ಟಿರೋದುಂಟಂತಾ ಪೇಪರ್ನಾಗೆ

ಬರೆದಿದ್ದುಂಟಲ, ಚಂದ್ರು ಅವ್ರೆ? ಎಂದು ನಿವಾಳಿಸಿದರು. 'ತಮ್ಮ ಮಾತಿಗೆ ಕವಡೆಯಷ್ಟು ಬೆಲೆ ಇಲ್ಲದ್ದು ಕಂಡು ಉಗ್ರ ಓರಾಟಗಾರ ಚಂದ್ರು ಮತ್ತೆ ಗ್ಲಾಸಿನತ್ತ ಮುಖ ಮಾಡಿದರು.' ಏನಾಯಿತೆಂದರೆ' – ಮಾತು ಮುಂದುವರೆಸಿದರು ಸಿದ್ಧಾಂತಿಗಳು 'ಮಾರ್ನೆ ದಿನ ಮಾಧ್ಯಮಗಳಲ್ಲಿ ಈ ವಿಷಯ ದೊಡ್ಡ ದೊಡ್ಡ ಅಕ್ಷರಗಳ ಶೀರ್ಷಿಕೆಯಡಿ ಜನರ ಮುಖಕ್ಕೆ ರಾಚಿ ಗುಲ್ಲೋ ಗುಲ್ಲು ಪ್ರಾರಂಭವಾಯಿತು. ಎಂದಿನಂತೆ ರೇಸ್ ಕ್ಲಬ್ಬಿನವರು ಇವು ಯಾವುದಕ್ಕೂ ತಲೆ ಕೆಡಿಸಿಕೊಳ್ಳಲಿಲ್ಲ. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಮುರಳಿ ಜ್ಞಾನವೇ ಇಲ್ಲದಂತೆ ಮಲಗೆ ಇದ್ದ! ಪೊಲೀಸ್ ಈಗ ಮಧ್ಯವರ್ತಿಗಳಾಗಿ ಪತ್ತೇದಾರ ಕೆಲಸ ಶುರು ಹಚ್ಚಿ ಮಾಮೂಲಾಗಿ ಎಲ್ಲರನ್ನು ಪ್ರಶ್ನಿಸಿ, ಹೆದರಿಸಿ ತಮ್ಮ ಕೆಲಸ ಮಾಡುತಲಿದ್ದ.

ಕೊನೆಗೂ ರೇಸಿನ ದಿನ ಬಂದೆ ಬಿಟ್ಟಿತು. ಮುಂಗಡವಾಗಿ ಪ್ರಕಟಿಸುವ ರೇಸ್ ಪುಸ್ತಕಗಳ ಏನು ಬದಲಾವಣೆ ಇರದೇ ಡ್ರೀಮ್ ಕ್ವೀನ್ ಒಡೆಯರ್ ಕಪ್‌ನ ಸ್ಪರ್ಧಿಯಾಗಿತ್ತು! ಪಂಟರುಗಳಿಗೆ ಮಾತ್ರ ಇದು ತಲೆನೋವಾಗಿದ್ದ ಯಾವುದೋ ಕ್ಷಣದಲ್ಲಿ ಅದು ಬರಬಹುದೆಂಬ ನಿರೀಕ್ಷಣೆಯಲ್ಲಿ ಅದರ ಮೇಲೆ ಬಾಜಿ ಕಟ್ಟುವವರಿದ್ದೆ ಇದ್ದ. ರೇಸು ನಡೆಯುವ ಹಿಂದಿನ ರಾತ್ರಿಯೂ ಪೋಲಿಸಿನವರು ಏನು ಸಿಗುವ, ಸಿಕ್ಕಿರುವ ಸೂಚನೆ ಕೊಡುವ ಗೋಜಿಗೆ ಹೋಗಲಿಲ್ಲ! ಪತ್ರಿಕೆಗಳು, ಇತರೆ ಮಾಧ್ಯಮಗಳು ತಮ್ಮ ಸ್ವಕಪೋಲಕಲ್ಪಿತ 'ಹಾಗೆ, ಹೀಗೆ' ಎಂದು ತೋಚಿದ್ದೆ ಪುಟಗಳನ್ನು ತುಂಬಿದರು. ಟೀವಿಗಳಲ್ಲಿ ಸಿಕ್ಕ ಸಿಕ್ಕವರನ್ನೆಲ್ಲ ಮಾತಾಡಿಸಿ, ಬಾಯಿಗೆ ಬಂದಂತೆ ಪ್ರಚಾರ ಅಪಪ್ರಚಾರ ಮಾಡಿ ಮೂರ್ಖ ಜನರನ್ನು ಮತ್ತು ಮೂರ್ಖರಾಗಿಸಲು ಪ್ರಯತ್ನಿಸಿದ್ದಂತೂ ನಿಜ! ಪಂಟರುಗಳಂತೂ ಸಿಕ್ಕಸಿಕ್ಕ ಪತ್ರಿಕೆ, ಟಿವಿ ಪ್ರಚಾರ, ಗುಸುಗುಸು ಮಾತುಗಳಿಗೆ ಕಿವಿಕೊಟ್ಟು ಬಳಲಿ ಬೆಂಡಾದರು ಎನ್ನುತ್ತಾ ಸಿದ್ಧಾಂತಿಗಳು ಸುಧಾರಿಸಿಕೊಳ್ಳಲು ಮಾತು ನಿಲ್ಲಿಸಿ, ಗ್ಲಾಸಿಗೆ ಕೈಚಾಚುತ್ತ, ಖಾಲಿಯಾಗಿದ್ದ ಗೋಡಂಬಿ ತಟ್ಟೆಯಕಡೆ ದೃಷ್ಟಿ ಬೀರಿದರು. ಮೈಯೆಲ್ಲ ಕಿವಿಯಾಗಿ ಮಾತು ಕೇಳುತ್ತಿ ಬೇರರ್ ವಾಸು ಓಡಿ ಬಂದು ಆ ತಟ್ಟೆಯನ್ನು ತೆಗೆದು ಮತ್ತೆ ಖಾರದ ಗೋಡಂಬಿಯನ್ನು ತುಂಬಿ ತನ್ನ ಸ್ಥಾನಕ್ಕೆ ಮರಳಿದ. ಇದೀಗ, 'ಮುಂದೇನು' ಎಂಬ ಕುತೂಹಲ ಎಲ್ಲೆಡೆ ಹರಡಿತ್ತು, ಮಾತು ಮುದುರಿತ್ತು! ಮೌನ ಆವರಿಸಿತ್ತು, ವಾತಾವರಣ ನಿಶ್ಯಬ್ಧವಾಗಿ ಶಂಕರ ಸಿದ್ಧಾಂತಿಗಳು ಮುಂದುವರೆಸಿದರು. 'ಆ ಪಂದ್ಯದ ದಿನ ಬಂದೆ ಬಿಟ್ಟಿತು, ಒಡೆಯರ್ ಕಪ್ ಸ್ಪರ್ಧೆ ಮಧ್ಯಾಹ್ನ ಒಂದು ಘಂಟೆಗೆ ಸೂಚಿಸಿದ್ದ ಅದಕ್ಕೆ ಪೂರ್ವ ಸಿದ್ಧತೆಯಾ ಬೆಳಿಗ್ಗೆ ಆರು ಗಂಟೆಗೆ ಸರಿಯಾಗಿ ರೇಸ್ ಮೈದಾನದಲ್ಲಿ ಕುದುರೆಗಳೆಲ್ಲ ಹಾಜರಾಗಬೇಕಿತ್ತು. ಎಲ್ಲ ಜಾಕಿ, ಟ್ರೈನರ್ಗಳು ಹಾಗೂ ಮಾಲೀಕರು ಮತ್ತು ರೇಸ್ ಕ್ಲಬ್ಬ್ನ ಅಧಿಕಾರಿಗಳು, ಪಶು ವೈದ್ಯರು ಹೀಗೆ ಎಲ್ಲ ಸಮುದಾಯಗಳ ಮುಂದೆ ಅಲ್ಲಿ ಇವನ್ನ ಪರೀಕ್ಷಿಸಿ ಪ್ರತಿಯೊಂದರ ಅರ್ಹತೆ ಸಮರ್ಥಿಸಿಕೊಳ್ಳಬೇಕಾಗಿದ್ದು ಅನಿವಾರ್ಯ ನಿಯಮ. ಹಿಂದಿನ ರಾತ್ರಿ ಮುರಳಿಯ ಮನೆಯಲ್ಲಿ ಯಾರಿಗೂ ನಿದ್ರೆ ಇಲ್ಲವಾಗಿತ್ತು. ಅಲ್ಲದೆ ಪೊಲೀಸ್ ಹೆಜ್ಜೆ ಹೆಜ್ಜೆ ಠಳಾಯಿಸುತ್ತಿದ್ದ. ಅತ್ತ ಸಮಯ ರಾತ್ರಿ, ಗಡಿಯಾರದ ಮುಳ್ಳು ಹನ್ನೆರಡನ್ನು ಸಮೀಪಿಸುತ್ತಿ, ಎಲ್ಲೆಡೆ ನಿಶ್ಯಬ್ಧ ಒಂದು ಸೂಜಿ ಕೆಳಗೆ ಬಿದ್ದರು ಕೇಳಿಸುವಷ್ಟು ಮೌನ ಇತ್ತ ಮನೆಯಲ್ಲಿ, ಅತ್ತ ರೇಸ್ ಕ್ಲಬ್ನ ಸಭಾಂಗಣದಲ್ಲಿ ಜೊತೆಗೆ ಅಮಾವಾಸ್ಯೆಯ ಹಿಂದಿನ ರಾತ್ರಿ ಕೂಡ' – ಒಂದು ಕ್ಷಣ ಮಾತಿಗೆ ಬ್ರೇಕ್ ಹಾಕಿ ಸಿದ್ಧಾಂತಿಗಳು ಎಲ್ಲೆರೆಡೆ ದೃಷ್ಟಿ ಹಾಯಿಸಿದರು. ಅವರುಗಳ ಕೈಯಲ್ಲಿದ್ದ ಗ್ಲಾಸುಗಳ ಸ್ಥಬ್ಧ ಹಾಗೆ ನಿಂತಲ್ಲೆ ನಿಂತು, ಎಲ್ಲರ ಮುಖದಲ್ಲೂ ಒಂದು ವಿಲಕ್ಷಣ ಕಾತರ, ತುಮುಲ ಹಾಗೂ ಕುತೂಹಲ ಮುದ್ರೆಯೊತ್ತಿ

ದಂತಿತ್ತು. ತೃಪ್ತಿಯಿಂದ ಸಿದ್ಧಾಂತಿಗಳು ಮಾತು ಮುಂದುವರೆಸಿದರು. 'ಇಂತಹ ಸಂದರ್ಭಗಳು ನಮ್ಮ ಜೀವನದಲ್ಲಿ ಅಪರೂಪವಾಗಿಯಾದರೂ ಆಗುವುದು ಅತಿಶಯವೇನಲ್ಲ. ಆದರೆ ಇಲ್ಲಿ ನೂರಾರು ಜನರ ಅದೃಷ್ಟ ಈ ಒಂದು ಕುದುರೆಯಿಂದ ಆಗುತ್ತಿದ್ದು ಭಾರಿ ಸತ್ಯವಲ್ಲವೇ?' ಇದೀಗ ಮೌನ ಬೇಧಿಸಿ, ರೇವಣಪ್ಪ ಉಲಿದರು 'ನವೆಂಬರ್ ಎಂಟರಂದು ಮೋದಿ ಮಾಡಿದ ಮೋಡಿಗೆ ಕಪ್ಪು ಹಣವಾಗಿ ಶೇಖರಿಸಿಟ್ಟಿದ್ದ ಕೋಟಿ ಕೋಟಿ ರೂಪಾಯಿಗಳ ಹಣವನ್ನ ಹೆಣವಾಗಿ ಸುಡಬೇಕಾಗಿ ಬಂದದ್ದು ಅದೆಂಥ ಟ್ರಾಜೆಡಿ ಅಲ್ಲದೆ ಮುಂದೆ ಏನು ಮಾಡಲಾಗದ ಪರಿಸ್ಥಿತಿ ಬೆಳಗಾಗೆದ್ದ ಮುಂದೇನೂ? ಅನ್ನುವ ಯೋಚನೆಗೆ ಗುರಿಯಾದರಲ್ಲವೇ? ಹಾಗೆ ಇದೆಯಲ್ಲವೇ ಈ ಕುದುರೆಯ ಸಮಸ್ಯೆ? ಈ ಮಾತು ಕೇಳುತ್ತ ಎಲ್ಲರು ಒಟ್ಟಿಗೇ ರೀ ರೇವಣಪ್ಪ ನಿಮ್ಮ ಶೆಂಗಾ, ಮೆಣಸಿನಕಾಯಿ ಹತ್ತಿ ವ್ಯಾಪಾರ ತರಹ ಅಲ್ಲ ಈ ಸಂದರ್ಭ. ನೀವು ಸುಮ್ಮನಿದ್ದು ಅವರು ಮುಂದೇನಾಯಿತೆಂದು ಹೇಳಲಿ, ಸಾರ್ ಮುಂದುವರೆಸಿ ಎಂದು ರೇಗುತ್ತಾ ಎಲ್ಲರು ಒಟ್ಟಿಗೆ ಅವರ ಮೇಲೆ ಬಿದ್ದರು. ರೇವಣಪ್ಪ ಉರಿ ಮುಖ ಮಾಡಿ ಸುಮ್ಮನಾದರು. 'ನೋಡಿ, ಅದೇನು ಆಶ್ಚರ್ಯ, ಆ ರಾತ್ರಿ ಹನ್ನೆರಡಕ್ಕೆ ಸರಿಯಾಗಿ 'ಡ್ರೀಮಕ್ವೀನ್' ರೇಸ್ ಕ್ಲಬ್ನ ಹೊರ ಆವರಣದಲ್ಲಿ ಹೆಲಿಕಾಪ್ಟರ್ ಮುಖೇನ ಇಳಿದು ಬಂದು, ಅದನ್ನ ಸರಸರನೆ ಕ್ಲಬ್ಬಿನ ಒಳಾಂಗಣಕ್ಕೆ ಕರೆದೊಯ್ದು ಅಲ್ಲಿ ನಿಗೂಢವಾದ ಜಾಗದಲ್ಲಿ ಅತ್ಯಂತ ಸುರಕ್ಷಿತವಾಗಿ ಸೇರಿಸಿದ್ರು. ಮುಂದೆ ನಡೆದದ್ದು ಮಾಮೂಲಿಯಂತೆ. ಕುದುರೆ ಸ್ಪರ್ಧೆಯಲ್ಲಿ ಅತ್ಯಂತ ವೇಗದಲ್ಲಿ ಓಡಿ ಎಲ್ಲ ಇತರ ಫಿಲ್ಲಿಗಳನ್ನು ಹಿಂದೆ ಸರಿಸಿ ಒಡೆಯರ್ ಸೇರಿಸಿದ್ರು. ಮುಂದೆ ನಡೆದದ್ದು ಮಾಮೂಲಿಯಂತೆ. ಕುದುರೆ ಸ್ಪರ್ಧೆಯಲ್ಲಿ ಅತ್ಯಂತ ವೇಗದಲ್ಲಿ ಓಡಿ ಎಲ್ಲ ಇತರ ಫಿಲ್ಲಿಗಳನ್ನು ಹಿಂದೆ ಸರಿಸಿ ಒಡೆಯರ್ ಕಪ್ ಗೆದ್ದಿತೆಂದು ಹೇಳಬೇಕಾಗಿಲ್ಲ'. ಎಂದು ಹೇಳುತ್ತಾ ಶಂಕರ ಸಿದ್ಧಾಂತಿಗಳು ತಮ್ಮ ಗ್ಲಾಸನ್ನು ತುಟಿಗೇರಿಸಿದರು.

'ಸಾರ್, ಇದು ಅನ್ಯಾಯ. ನೀವು ಏನೇನೋ ಇಲ್ಲದ, ಸಲ್ಲದ ಕಥೆ ಹೇಳಿ ನಮಗೆ ಮೋಸ ಮಾಡುತ್ತಿದ್ದೀರಿ, ನಿಜವಾಗಿ ಹೇಳಿ, ಏನಾಯಿತೆಂದು? ಅದೇನು ಮ್ಯಾಜಿಕ್ ಸಾಧ್ಯವಾ, ನಾವ್ ನಂಬುವುದಿಲ್ಲ ಚಂದ್ರು, ರೇವಂಣ್ಕರ್ ಶೇಖರ್ ವೊಟ್ಟಿಗೇ ಕಿರುಚಿದರು. ಅವರ ಜೊತೆಗೆ ಮತ್ತೆಲ್ಲರೂ ಧ್ವನಿಗೂಡಿಸಿದರು. ಶಂಕರ ಸಿದ್ಧಾಂತಿಗಳು ಮುಖದಲ್ಲಿ ತುಂಬು ನಗೆ ತರಿಸಿಕೊಂಡು ಎಲ್ಲರೆಡೆ ಕೈ ತೋರಿಸುತ್ತಾ ಎತ್ತರ ಧ್ವನಿಯಲ್ಲಿ ಹೇಳಿದರು ಸ್ವಲ್ಪ ತಾಳಿ. ಅದನ್ನೆ ನಾ ಹೇಳಲಿಕ್ಕೆ ಬಂದೆ. ಅಷ್ಟರಲ್ಲಿ ನಿವುಗಳೆಲ್ಲಾ...', ಪ್ರೊ. ಹಂಚಿಕಡ್ಡಿ ಎಲ್ಲರಿಗೂ ಮೌನವಾಗಿರುವಂತೆ ಕೂಗ ಹೇಳಿ ಮತ್ತೆ ಸಭೆಯನ್ನು ತಹಬಂದಿಗೆ ತಂದರು. 'ಏನಾಯಿತೆಂದರೆ, ನಮ್ಮ ಅಂಕಲ್ ಜಿಮ್ಮಿ ಮುರಳಿಗೆ ಬಾಲ್ಯದ ಚಡ್ಡಿ ಸ್ನೇಹಿತರು. ಈತ ಬರ್ಮಾಕ್ಕೆ ತಾರುಣ್ಯದಲ್ಲೇ ಮನೆ ಬಿಟ್ಟು ಹೋಗಿ, ಅಲ್ಲೇ ನೆಲಸಿ ಸ್ವಯಾರ್ಜಿತ ಮಾಡಿ ಜೀವಿಸಿಕೊಂಡಿದ್ದ ಅಲ್ಲಿಯ ದ್ವೀಪದ ಅನೇಕ ಕಾಡಿನ ಜಾಗಗಳಲ್ಲಿ ಅಮೂಲ್ಯವಾದ ಸಂಜೀವಿನಿ ಗಿಡಗಳು, ಅಪಾಯಕಾರಿ ವಿಷಗಿಡಗಳು. ಇನ್ನು ಚಿತ್ರ ವಿಚಿತ್ರ ತರಹದ ಮೂಲಿಕೆಗಳು ಬೆಳೆಯುತ್ತಿದ್ದು, ಅವುಗಳ ಬಗ್ಗೆ ಜೀವನಪೂರ ಅಭ್ಯಸಿಸಿ ಇವುಗಳ ಪರಿಣಾಮಗಳನ್ನು, ಉಪಯೋಗಿಸುವ ರೀತಿ, ಅಪಾಯ, ಪರಿಹಾರ ಎಲ್ಲವನ್ನು ಪರಿಪೂರ್ಣವಾಗಿ ತಿಳಿದಿದ್ದ ಒಬ್ಬ ಕಾಶ್ಮೀರಿ ಪಂಡಿತನ ಪರಿಚಯ ಮಾಡಿಕೊಂಡಿದ್ದರು. ಆತ ಇವರಿಗೆ ಸ್ನೇಹಿತನಾಗಿ ತಾನು ಸಾಯುವ ಮುಂಚೆ ಇವರಿಗೆ ಸಾಧ್ಯವಾದಷ್ಟು ಕಲಿಸಿದ್ದ. ಹಾಗಾಗಿ ಪರೋಪರಾರ್ಥಕ್ಕಾಗಿ ಸಂಸಾರ ಕಟ್ಟಿಕೊಳ್ಳದ ಇವರು ಭಾರತಕ್ಕೆ ಮರಳಿ ಬಂದ

ಮೇಲೆ ನಮ್ಮ ಕುಟುಂಬದಲ್ಲೇ ಇದ್ದ. ಸುಮಾರು ಒಂದು ವಾರದ ಹಿಂದೆ ಆತನನ್ನ ನಮ್ಮ ಮುರಳಿ ಬಳಿಗೆ ಕಳಿಸಿಕೊಟ್ಟಿದ್ದೆ. ಈ ಸಂದರ್ಭಕ್ಕೆ ಅದು ಅನುಕೂಲವಾಗಿದ್ದು ಕೇವಲ ಧರ್ಮ ಕರ್ಮ ಸಂಯೋಗವಷ್ಟೇ ಜಿಮ್ಮಿಗೆ ಸರ್ಕಾರದಲ್ಲು ಹಾಗೂ ಇತರ ಪ್ರಸಿದ್ಧ, ಶಕ್ತಿ ಪ್ರಭಾವಿ ವ್ಯಕ್ತಿ ಪರಿಚಯದಿಂಗಾಗಿ ಸಹಾಯ ಪಡೆದು ಯಾರಿಗೂ ಗೊತ್ತಾಗದ ಕುದುರೆಯೊಂದನ್ನ ಸ್ಪರ್ಧೆಯ ಹಿಂದಿನ ರಾತ್ರಿ ಹೆಲಿಕಾಪ್ಟರ ಮೂಲಕ ತಿಳಿಸಿ ಅದು ಅಪಹರಿಸಬೇಕೆಂಬುವವರನ್ನು ಗುರಿ ತಪ್ಪಿಸಿದ್ದು ಅವರು ಕದ್ದೊಯ್ದಿದ್ದರೆ ಅದು ಬೇರೆಯೇ ಅನುಪಯುಕ್ತ ಹುದುರೆಯಾಗುತ್ತಿತ್ತು. ನಿಜವಾಗಿ ಹೇಳಬೇಕೆಂದರೆ ಡ್ರೀಮ್ ಕ್ವೀನ್ ಮುರಳಿಯ ಲಾಯ ಬಿಟ್ಟೆಲ್ಲು ಹೋಗಿರಲೇ ಇಲ್ಲ! 'ಅದು ಹೇಗೆ ಸಾಧ್ಯ ಸಾರ್? ಎಲ್ಲರು, ಪೊಲೀಸರು ಕಳೆದುಹೋಗಿದೆಯೆಂದು ಹುಡುಕುತ್ತಿದ್ದರು ನಿಮ್ಮ ಮುರಳಿ ಆಸ್ಪತ್ರೆ ಸೇರಿದ್ದು ಸುಳ್ಳೇ? ಈ ತರಹ ನಮ್ಮನ್ನ ಮೋಸ ಮಾಡಿದ ಸಮಾಚಾರ ಹೇಳುತ್ತಿದ್ದೀರಿ? ಎಂದು ಹಲವರು ಬಾಯಿ ಹಾಕಿದರು. 'ಹಾಗಲ್ಲ, ಸ್ವಲ್ಪ ತಾಳಿ, ಕುದುರೆ ಕಳೆದು ಹೋಯಿತೆಂಬ ಆ ರಾತ್ರಿ ನಿಜವಾಗಿ ನಡೆದಿದ್ದೇನೆಂದು ಜಿಮ್ಮಿ ತಾನು ತಿಳಿದು ಕೊಂಡಿದ್ದ ವಿಚಿತ್ರ ಕಣ್ಕಟ್ಟಿನ ಔಷಧದಿಂದ ಮೂರು ದಿನಗಳ ಹಿಂದಿನ ರಾತ್ರಿ ಲಾಯದ ಬಳಿ ಹೋಗಿದ್ದ ಮುರಳಿಯ ಕೈಲೇ ಸಿಂಪಡಿಸಿದ ಕಾರಣ ಆ ಔಷಧ ಪರಿಣಾಮ ಮಾರನೆಯ ದಿನದಿಂದ ನಲ್ವತ್ತೆ ಘಂಟೆಗಳವರೆಗೆ ಲಾಯದಲ್ಲಿನ ಕುದುರೆ ಯಾರಿಗೂ ಕಾಣುಸುತ್ತಿರಲಿಲ್ಲ, ಅಂತಹ ಮಾಯಾಜಾಲದ ಆ ಔಷಧದ ಪರಿಣಾಮ ಪಂದ್ಯದ ಹಿಂದಿನ ರಾತ್ರಿಯವರಿಗಿತ್ತು. ಹಾಗಾಗಿ, ಯಾರು ಆ ಲಾಯದ ಸಮೀಪ ಬಂದರು ಮರಳಿ ಇಲ್ಲವೆಂದೇ ಹೋಗುತ್ತಿದ್ದ ನಮ್ಮ ಜಿಮ್ಮಿಯ ಪ್ರಭಾವದಿಂದಾಗಿ ಪಂದ್ಯದ ದಿನ ಮುಂಜಾನೆಗೇ ಮುಂಚೆಯೇ ಡ್ರೀಮ್ ಕ್ವೀನ್ ಕ್ಲಬ್ಬಿನಲ್ಲಿ ಹಾಜರಿಯಾಗುವಂತೆ ಎಲ್ಲ ಏರ್ಪಾಡು ಮಾಡಿಸಿದ್ದ. ಮುರಳಿ ಕೇವಲ ಜ್ಞಾನ ತಪ್ಪಿದಂತೆ ನಟಿಸಿದುದಷ್ಟೇ, ಆಸ್ಪತ್ರೆಯವರು, ಪೊಲೀಸರು, ಎಲ್ಲರೂ ಈ ನಾಟಕದಲ್ಲಿ ಅತ್ಯಂತ ಗುಪ್ತವಾಗಿ ಭಾಗವಹಿಸಿದವರೇ!

'ಆದರೆ, ಕುದುರೆ ಗೆದ್ದೆ ಗೆಲ್ಲುತ್ತದೆಂದು ಹೇಗೆತಾನೆ ನಂಬುವುದು ಸಾರ್?' ಪ್ರೊ. ಹಂಚಿಕಡ್ಡಿ ಕೇಳಿದರು. 'ಹೌದು, ನಾನು ಮರೆತಿದ್ದೆ, ನಮ್ಮ ಜಿಮ್ಮಿ ಕುದುರೆಗಳಿಗಾಗಿಯೇ ಅವರ ಗುರುವಿನಿಂದ 'ಗಜಾಶ್ವ ಮಹಾ ಲೇಹ್ಯ' ಎಂಬ ಔಷಧವನ್ನ ತಯಾರಿಸಿಕೊಂಡಿದ್ದ. ಅದನ್ನು ಯಾವುದೇ ಕುದುರೆಗೆ ಒಂದೇ ಒಂದು ಸಲ ಕೊಟ್ಟರೆ ಆರು ತಿಂಗಳವರೆಗೆ ಅದು ಆನೆಯ ಬಲ ಹೊಂದಿ ಓಡಬಲ್ಲದು, ಆಗ ಅದನ್ನು ಸ್ಪರ್ಧೆಯಲ್ಲಿ ಮೀರಿಸುವ ಯಾವುದೇ ಪ್ರಾಣಿಯು ಇರಲಾರದು.' ಎಂದು ಹೇಳಿ ತಮ್ಮ ಕೈ ಗಡಿಯಾರ ನೋಡಿಕೊಂಡರು. ಹತ್ತು ಘಂಟೆ ಸಮೀಪಿಸುತ್ತಿತ್ತು. ತಮ್ಮ ಸುಲೋಚನವನ್ನ ಹಣೆಗೆ ಸಿಕ್ಕಿಸಿ ಎದ್ದು ಹೊರಡುವ ಸೂಚನೆ ಕೊಟ್ಟರು.

ಎಲ್ಲರ ಮಾತು ನಿಂತು, ಸಭೆ ಭರ್ಖಾಸ್ತ್ ಆಗಿ ತಮ್ಮ ತಮ್ಮ ಮನೆಯ ದಾರಿ ಹಿಡಿದರು. ಅವರುಗಳ ತಲೆ ಸಾಕಷ್ಟು ಬಿಸಿಯಾಗಿ, ನಂತರ ತಮ್ಮ ತಮ್ಮ ತಮ್ಮಲ್ಲೇ ಚರ್ಚಿಸಿ ಕೊಳ್ಳುತ್ತಾ ಕ್ಲಬ್‌ನಿಂದ ಹೊರಬಿದ್ದ, ನೆರೆಹೊರೆಯ ವಾಸದ ಹಲವರು ಮಂಪರಿನಲ್ಲಿ ಡ್ರೀಮ್ ಕ್ವೀನ್, ಕುದುರೆ, ಮಾಯ, ಶೇಮ್, ಹೀಗೆಲ್ಲ ಕನವರಿಸುತ್ತಿದ್ದ ಅವರವರ ಹೆಂಡತಿಯರುಗಳು ಪರಸ್ಪರ ಮಾತಾಡಿಕೊಳ್ಳುತ್ತಿದ್ದ ಸುದ್ದಿ ನಿಜವೇ ಎಂಬುದಕ್ಕೆ ಸಮರ್ಥನೆ ಈ ವರದಿಗಾರನಿಗೆ ಸಿಕ್ಕಿರುವುದಿಲ್ಲ.

✳

# ಪಂಚ್ ಪದ್ಯಗಳು

**- ಎಚ್. ಡುಂಡಿರಾಜ್**

## ಯುಗಾದಿ

*-1-*

*ಇಷ್ಟು ಬೇಗ*
*ಯುಗಾದಿ ಬಂತೆ?*
*ಪರಮಾಶ್ಚರ್ಯ*
*ವಾಪಾಸು ಹೋಗಿಲ್ಲ ಇನ್ನೂ*
*ದೀಪಾವಳಿಯ*
*ಅಳಿಯ!*

*-2-*

*ನಮ್ಮ ಕಚೇರಿಯಲ್ಲಿ*
*ದಿನವೂ ಯುಗಾದಿ*
*ಆಚರಿಸುತ್ತೇವೆ ನಾವು*
*ಲೇಡಿ ಟೈಪಿಸ್ಟ್ ನಗೆ*
*ಬೆಲ್ಲದ ಹಾಗೆ*
*ಬಾಸ್ ಬೈಗುಳ ಬೇವು!*

*-3-*

*ಮತ ನೀಡುವ ಜನರೆಲ್ಲ*
*ರಾಜಕಾರಣಿಗೆ ಬೆಲ್ಲ*
*ಬೇವು ಯಾರು ಗೊತ್ತಾ?*
*ಚುನಾವಣಾ ಆಯುಕ್ತ!*

*-4-*

*ರಾಜಕಾರಣಿಗಳೇ ಹೀಗೆ*
*ಗೆಲ್ಲುವ ವರೆಗೆ*
*ಮೊಗದಲ್ಲಿ ನಗೆ*
*ಮಾತು ಸವಿ ಬೆಲ್ಲ*
*ಗೆದ್ದ ನಂತರ ಬೇವು*
*ಕೈಗೆ ಸಿಗುವುದೇ ಇಲ್ಲ!*

*-5-*

*ಬೇವು ತಿನ್ನಿರಿ ನೀವು*
*ನನಗೆ ಬೇಕು*
*ಬೆಲ್ಲದ ಸಿಹಿ ಮಾತ್ರ*
*ಅನ್ನುತ್ತಿದ್ದ ಆತನಿಗೆ*
*ಈಗ ಸಿಹಿ ಮೂತ್ರ!*

# ವ್ಯಂಗ್ಯ ಮೆಲುಕು

- ಪ್ರಕಾಶ್ ಶೆಟ್ಟಿ

[illegible]





[illegible]





[illegible]

# ಮನೆ ದೇವ್ರು

**- ಗಣೇಶ್ ಹೆಗ್ಗಡೆ**

**ಈ**ಚಿನ ದಿನಗಳಲ್ಲಿ ನನಗೊಂದು ವಿಚಿತ್ರ ಜಿಜ್ಞಾಸೆ ಕಾಡುತ್ತಿದೆ. ನಾವು ಎಂದರೆ ಹುಲುಮಾನವರು ದೇವರಿಗೆ ಕಾಟ ಕೊಡುತ್ತಿದ್ದೇವೆಯೆ? ಅಥವಾ ಆ ದೇವರೇ ನಮಗೆ ಕಾಟ ಕೊಡುತ್ತಿದ್ದಾನೆಯೇ?

**ತನ್ನನ್ನೇ ರಕ್ಷಿಸಿಕೊಳ್ಳಲಾಗದ ಭಗವಂತ ಗರ್ಭಗುಡಿಯಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾ ಯಾಕೆ ಅಳವಡಿಸಿಕೊಂಡ?**

ದೇವರೆಂದರೆ ಯಾರು? ಅವನಿಗೇಕೆ ನಾವು ಅಷ್ಟು ಭಯ ಬೀಳಬೇಕು? ಅವನು ಏತಕ್ಕೆ ಗುಡಿಸಲಲ್ಲಿರದೆ ಗುಡಿಯಲ್ಲಿರಬೇಕು? ಸರಳ ಬದುಕು ಅವನಿಗಿಷ್ಟವಿಲ್ಲವೇ? ಹೀಗೆ ಹತ್ತಾರು ಪ್ರಶ್ನೆಗಳು ನನ್ನನ್ನು ಹಾವಿನಂತೆ ಸುತ್ತಿಕೊಂಡು ಬಿಡುತ್ತದೆ.

ಭಗವಂತ ಸರ್ವಾಂತರ್ಯಾಮಿ. ಸಂಕಷ್ಟದಲ್ಲಿರುವವರನ್ನು ಕಾಪಾಡುತ್ತಾನೆ - ಎಂದು ಪಾಮರರು ನಂಬಿ ಬದುಕುತ್ತಿದ್ದಾರೆ. ಆದರೆ ನನ್ನ ತಲೆಯನ್ನು ತಿನ್ನುತ್ತಿರುವ ವಿಚಾರಧಾರೆಯೇ ಬೇರೆ. ತನ್ನನ್ನೇ ರಕ್ಷಿಸಿಕೊಳ್ಳಲಾಗದ ಭಗವಂತ ಗರ್ಭಗುಡಿಯಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾ ಯಾಕೆ ಅಳವಡಿಸಿಕೊಂಡ? ಮೊನ್ನೆ ಪ್ರಸಿದ್ಧ ನೇತ್ರ ತಜ್ಞರ ಬಳಿ ತಪಾಸಣೆಗೆಂದು ಹೋಗಿದ್ದೆ. ಕೂಲಂಕುಷವಾಗಿ ಪರೀಕ್ಷೆ ಮಾಡಿದ ನಂತರ, ಆ ವೈದ್ಯರು ''ಸ್ವಾಮಿ, ನಿಮ್ಮ ಕಣ್ಣುಗಳಲ್ಲಿ ಕ್ಯಾಟರ್ಯಾಕ್ಟ್ ಅಥವಾ ಪೊರೆ ಪ್ರಾರಂಭವಾಗುತ್ತಿದೆ. ಬಲಿತ ಮೇಲೆ ಆಪರೇಷನ್ ಮಾಡಬೇಕು'' ಅಂತಂದಾಗ ಕೊಂಚವು ವಿಚಲಿತನಾಗದ ನಾನು ''ಸರ್, ನನ್ಗೊಂದು ಅನುಮಾನ. ಈ 'ಪೊರೆ' ಖಾಯಿಲೆ ಕೇವಲ ಮಾನವರ ನೇತ್ರಗಳಿಗೆ ಸೀಮಿತವೋ ಅಥವಾ ದೇವರಿಗೂ ಕಾಡುವ ಸಮಸ್ಯೆಯೋ?''

''ಯಾಕೆ ತಮಗೆ ಈ ಅನುಮಾನ?'' ಎಂದರು ವೈದ್ಯರು ಕಕ್ಕಾಬಿಕ್ಕಿಯಾಗಿ.

''ದಯವಿಟ್ಟು ತಮ್ಮ ಮುಂದಿರುವ ವೃತ್ತಪತ್ರಿಕೆ ನೋಡಿ'' ಎಂದೆ. ನಮ್ಮೂರಿನ ಪ್ರಸಿದ್ಧ ದೇವಸ್ಥಾನವಾದ ಈಶ್ವರನ ಗುಡಿಯಲ್ಲಿ ದೇವರ ಮುಂದಿರಿಸಿದ ಹುಂಡಿಯನ್ನೇ ಕಳ್ಳರು ಕದ್ದೊಯ್ದಿದ್ದ ಸಮಾಚಾರ ಅಲ್ಲಿ ಪ್ರಕಟವಾಗಿತ್ತು. ಹೀಗೂ ಉಂಟೇ? ಎಂದು ಉದ್ಗರಿಸಿದ ನೇತ್ರ ವೈದ್ಯರು, ತಮ್ಮ ನೇತ್ರವನ್ನೇ ಭಯದಿಂದ ಮುಚ್ಚಿಕೊಂಡಾಗ ಇದೇ ಸೂಕ್ತ ಸಮಯವೆಂದು ಬಗೆದು ನಾನು ಜಾಗ ಖಾಲಿ ಮಾಡಿದ್ದೆ.

ಇಷ್ಟೆಲ್ಲಾ ವಿಚಾರಗಳು ನನ್ನ ಖಾಲಿ ಮಂಡೆಯಲ್ಲಿ ದಿಢೀರನೆ ಯಾಕೆ ತುಂಬಿಕೊಂಡ್ತು ಅಂತಂದರೆ, ನನ್ನ ಅರ್ಧಾಂಗಿ! ಯಾನೆ ನನ್ನ ಶ್ರೀಮತಿ, ಯಾನೆ ನನ್ನನ್ನು ಅರ್ಥಮಾಡಿಕೊಂಡಿರುವವಳು ನನ್ನ ಮುಂದೆ ಆ ವಿಚಿತ್ರ ಬೇಡಿಕೆ ಇಟ್ಟಾಗ. ದಂಪತಿಗಳ ನಮ್ಮ ಸಂಭಾಷಣೆ ನಿಮ್ಮನ್ನೂ ಭಯಭೀತಗೊಳಿಸೀತು.

''ರ್ರೀ.. ಮೂರು ದಿವಸ ನೀವು ಕಛೇರಿಗೆ ರಜಾ ಹಾಕಬೇಕು''

''ಯಾಕೆ?''

''ಮನೆದೇವ್ರಿಗೆ ಹರಸಿಕೊಂಡಿದ್ದೇನೆ. ದಂಪತಿಗಳ ಸಮೇತ ನಾವಿಬ್ಬರು ಕುಕ್ಕೆ ಸುಬ್ರಹ್ಮಣ್ಯಕ್ಕೆ ಹೋಗಬೇಕು''

‘‘ಎಲೆಕ್ಷನ್ ಟೈಮು ಕಣೆ. ಕಾರಣವಿಲ್ಲದೆ ರಜೆ ಹಾಕಿದರೆ ಸಸ್ಪೆಂಡ್ ಮಾಡ್ತಾರೆ. ಅಂದಹಾಗೆ ನೀನ್ಯಾಕೆ ನನ್ನನ್ನು ಕೇಳದೆ ಹರಸಿಕೊಳ್ಳುವುದಕ್ಕೆ ಹೋದೆ?’’

‘‘ನಿಮಗೆ ತಿಳಿಯದ ಹಾಗೆ ನಿಮ್ಮ ಜಾತಕವನ್ನು ತೆಗೆದಿರಿಸಿಕೊಂಡು, ಈಟಿ . . ಟೀವಿಯಲ್ಲಿ ಬರುವ ಪ್ಲಾನೆಟ್ ಗುರೂಜಿಯವರಲ್ಲಿ, ನಿಮಗಿನ್ನೂ ಪ್ರಮೋಷನ್ ಬರದಿದ್ದುದರ ಬಗ್ಗೆ, ನಾವು ಇನ್ನೂ ಸೈಟು, ಮನೆ ಮಾಡಿಕೊಂಡಿಲ್ಲದರ ಬಗ್ಗೆ ಪ್ರಶ್ನೆ ಕೇಳಿದೆ’’

‘‘ಅವರೇನೆಂದರು ?’’

‘‘ನಿಮ್ಮ ಯಜಮಾನರಿಗೆ ಸರ್ಪದೋಷವಿದೆ. ದೋಷ ನಿವಾರಣೆಗಾಗಿ, ನಿಮ್ಮ ಮನೆಯವರ ಜತೆ ಮನೆದೇವರ ದರ್ಶನ ಪಡೆದು ಬನ್ನಿ. ತಡ ಮಾಡಬ್ಯಾಡಿ ಎಂದು ಹೆದರಿಸಿದರು ಕಣ್ರೀ’’

‘‘ಅಯ್ಯೋ ರಾಮ, ಹಾಗಾದ್ರೆ ವರಿಬ್ಯಾಡ. ನಮ್ಮೂರಲ್ಲೇ ಲೋಕಲ್ ಸುಬ್ರಹ್ಮಣ್ಯನ ಗುಡಿಯಿದೆ. ಅಲ್ಲೇ ನಿನ್ನ ಮನಃ ಸಂತೋಷಕ್ಕೆ ಪೂಜೆ ಮಾಡಿಸಿದರಾಯ್ತು.’’

‘‘ಹಾಗಾಗುಲ್ವಂತೆ ಕಣ್ರಿ. ‘‘ಕುಕ್ಕೆ’’ಗೇ ಹೋಗ್ಬೇಕಂತೆ. ಇಲ್ಲಿ ಮಾಡ್ಸೋದು ಸಲ್ಲುಲ್ಲವಂತೆ’’

‘‘ಯಾವನೇ ಮು . . ಹಾಗೆ ಹೆದರಿಸಿದ್ದು ?’’

‘‘ಅದೇ . . ಗು . . ರೂ . . ಜೀ . .’’

ಒಂದು ಕುಕ್ಕೆ ತೆಗೆದುಕೊಂಡು ಇವಳ ತಲೆಯ ಮೇಲೆ ಮಟುಕಲೇ ಎನ್ನುವಷ್ಟು ಪಿತ್ಥ ನೆತ್ತಿಗೇರಿತ್ತು. ಆದರೆ ವಿಶ್ವ ಮಹಿಳಾ ದಿನಾಚರಣೆಯ ಸಂದರ್ಭ ದುಡುಕಬಾರದು ಎಂದು ಸುಪ್ತ ಮನಸ್ಸು ಎಚ್ಚರಿಕೆ ನೀಡಿತು.

‘‘ಹೋಗ್ಲಿ, ಈ ಭವಿಷ್ಯದ ಪ್ರೋಗ್ರಾಂ ಪುನಃ ಟಿ.ವಿ.ಯಲ್ಲಿ ಯಾವಾಗ ಪ್ರಸಾರ ?’’

‘‘ಈ ಸಂಜೆಯೆ . . ಆರರಿಂದ ಏಳರವರೆಗೆ’’

ಗಡಿಯಾರ ನೋಡಿಕೊಂಡೆ. ಅದೃಷ್ಟವಶಾತ್ ಐದು ನಿಮಿಷ ಬಾಕಿ ಇತ್ತು. ಅಷ್ಟರಲ್ಲೇ ‘‘ಇವಳು’’ ಓಡಿಹೋಗಿ ಆ ಕಾರ್ಯಕ್ರಮವನ್ನು ಸಂಪರ್ಕಿಸುವ ಫೋನ್ ನಂಬರ್ ಕೈಗಿತ್ತಳು. ಸರಿಯಾದ ಸಮಯಕ್ಕೆ ಪ್ಲಾನೆಟ್ ಗುರೂಜಿ ಮತ್ತು ಅವರ ಶಿಷ್ಯೆ ಕಾಣಿಸಿಕೊಂಡರು. ಮೊದಲನೇ ಕಾಲರ್ರೇ ನಾನು.

‘‘ಹೇಳಿ ಎಲ್ಲಿಂದ ಕಾಲ್ ಮಾಡುತ್ತಿದ್ದೀರಿ ? ದಯವಿಟ್ಟು ನಿಮ್ಮ ಟಿ.ವಿ ವಾಲ್ಯೂಮನ್ನು ಮ್ಯೂಟ್ ಮಾಡಿ’’ ಎಂದಿತು ಹೆಣ್ಣು ದನಿ.

‘‘ನಮಸ್ಕಾರ ಗುರೂಜಿ. ನಾನು ಅಪರಂಜೀಪುರದ ಗಣೇಶಯ್ಯ ಅಂತಾ. ನನ್ನೆಲ್ಲಾ ಪ್ರಶ್ನೆಗಳಿಗೆ ತಮ್ಮಲ್ಲಿ ಉತ್ತರವಿದೆಯೆ ಗುರೂಜಿ?’’

‘‘ಬೇಗ ಹೇಳಿ. ಮುಂದಿನ ಕಾಲರ್ರುಗಳು ಕಾಯ್ತಾ ಇರ್ತಾರೆ’’ ಎಂದರು ಗುರೂಜಿ ಅಸಹನೆಯಿಂದ.

‘‘ಸಾಮಾನ್ಯವಾಗಿ ಮನೆದೇವರುಗಳೆಲ್ಲ ಗಂಡುದೇವತೆಗಳೇ ಯಾಕಾಗಿರುತ್ವೆ? ಉದಾಹರಣೆಗೆ ಮಂಜುನಾಥ, ಸುಬ್ರಹ್ಮಣ್ಯ, ಈಶ್ವರ ಇತ್ಯಾದಿ. ಯಾಕೆ ಹೆಣ್ಣುದೇವತೆಗಳಿಗೆ ಈ ಸ್ಥಾನ ಕಲ್ಪಿಸಲಾಗಿಲ್ಲ? ಇದು ತಾರತಮ್ಯವೆಂದು ನಿಮಗನಿಸುವುದಿಲ್ಲವೇ? ಮನೆದೇವ್ರುಗಳು ಯಾಕೆ ದೂರದ ಊರುಗಳಲ್ಲೇ ನೆಲಸಿರುತ್ತಾರೆ? ಹಾಗೆಯೆ ನನ್ನದೊಂದು

ಕಡೆಯ ಪ್ರಶ್ನೆ. ಮನೆದೇವರುಗಳನ್ನು ನಾವು ನಮ್ಮ ಅನುಕೂಲಕ್ಕೆ ತಕ್ಕಂತೆ ಬದಲಿಸಿಕೊಳ್ಳಬಹುದೆ?''

ನನ್ನ ಕಾಲ್ ಕಟ್ಟಾಯಿತು. ಗುರೂಜಿಗಳೂ ಉತ್ತರ ಹೊಳೆಯದೆ ತಬ್ಬಿಬ್ಬಾಗಿರುವುದು ಸ್ಪಷ್ಟವಾಗಿ ಗೋಚರಿಸುತ್ತಿತ್ತು. ಜಾಣೆ ಶಿಷ್ಯೆ ಇದೇ ಸೂಕ್ತ ಸಮಯವೆಂದು ಬಗೆದು, ಒಂದು ಪುಟ್ಟ ಬ್ರೇಕ್ ತೆಗೆದುಕೊಂಡು ಗುರೂಜಿಗಳ ಮಾನ ಸಕಾಲಕ್ಕೆ ಕಾಪಾಡಿದ್ದಳು. ಒಂದು ಮಿನಿಟಿನ ಜಾಹಿರಾತುಗಳ ಬಳಿಕ ಟಿ.ವಿ. ಸ್ಕ್ರೀನನ್ನೇ ಎವೆಯಿಕ್ಕದೆ ನೋಡುತ್ತಿದ್ದ ನನ್ನ ಶ್ರೀಮತಿ ಇದ್ದಕ್ಕಿದ್ದಂತೆ ಕಿರುಚಿಕೊಂಡು,

''ಇದೇನ್ರೀ ಆಶ್ಚರ್ಯ! ಗುರೂಜಿಗಳ ಪ್ರಶ್ನೋತ್ತರ ಪ್ರೋಗ್ರಾಮೇ ಕ್ಯಾನ್ಸಲ್ ಆಗಿಹೋಗಿದೆ. ಈಗ ಸೀರೆ ಬೇಕಾ ಸೀರೆ ಬರುತ್ತಿದೆ'' ಎಂದಳು ಗಾಬರಿಯಿಂದ.

''ಲೇ ಚಿನ್ನ. ಇನ್ನೂ ನೀನು ಈ ಪ್ರಪಂಚವನ್ನೇ ಅರ್ಥಮಾಡಿಕೊಂಡಿಲ್ವಲ್ಲೇ? ನಿನ್ನ ಮನೆದೇವ್ರು ನಾನಲ್ಲವೇನೆ? ನನ್ನನ್ನು ನಂಬದೆ, ಬೇರೆ ಎಲ್ಲರನ್ನೂ, ಎಲ್ಲರೂ ಹೇಳಿದ್ದನ್ನು ಬೇಗ ನಂಬಿ ಬಿಡ್ತೀಯಲ್ಲೇ?'' ಎಂದು ಸಾಂತ್ವನ ಹೇಳಿದೆ.

ಜ್ಞಾನೋದಯವಾಗಿ ''ಸ್ಸಾರೀರಿ'' ಎಂದಳು ಕೃತಜ್ಞಾಭಾವದಿಂದ. ಇಬ್ಬರ ಮನಸ್ಸೂ ತಿಳಿಗೊಂಡು, ಗುರೂಜಿಗಳ ಮಂಡೆಯಲ್ಲಿ ಹುಳುಬಿಟ್ಟ ಕೆಟ್ಟ ಖುಷಿ ನನ್ನದಾಯಿತು.

✷

---

**ಕರ್ನಾಟಕ ವ್ಯಂಗ್ಯ ಚಿತ್ರಕಾರರ ಸಂಘ ಮತ್ತು ಸಾರಿಗೆ ಇಲಾಖೆ ಕರ್ನಾಟಕ ಸರ್ಕಾರ ರಸ್ತೆ ಸುರಕ್ಷತೆ ಬಗೆಗೆ ನಡೆಸಿದ ವ್ಯಂಗ್ಯ ಚಿತ್ರ ಸ್ಪರ್ಧೆಯಲ್ಲಿ ದ್ವಿತೀಯ ಬಹುಮಾನ ಪಡೆದ ವ್ಯಂಗ್ಯ ಚಿತ್ರ - ಶ್ರೀ ರಘುಪತಿ ಶೃಂಗೇರಿ ಅವರಿಗೆ ಅಪರಂಜಿಯ ಅಭಿನಂದನೆಗಳು**



# ಚುಟುಕು ಮೋಹ

- ಗಾಯತ್ರಿ ಮೂರ್ತಿ

**ಒಂ**ದು ವಿಷಯದ ಬಗ್ಗೆ ಸುದೀರ್ಘ ವಿವರಣೆ ನೀಡ ಹೊರಟರೆ ಅದನ್ನು ಕೇಳಿಸಿಕೊಳ್ಳುವ ಸಹನೆ ಯಾರಿಗಿದೆ? 'ಅದಕ್ಕೆ ಇಷ್ಟೊಂದು ಒಕ್ಕಣೆ ಯಾಕೆ? ಹೇಳೋದನ್ನು ಚುಟುಕಾಗಿ ಹೇಳಿ ಬೇಗ ಮುಗಿಸಬಾರದಾ?' ಎಂದು ಕಡ್ಡಿ ಮುರಿದಂತೆ ಹೇಳಿ ಉತ್ಸಾಹದಿಂದ ಮಾತಾಡುವವರ ಮುಖಭಂಗ ಮಾಡುವುದು ಹೊಸತೇನಲ್ಲ. ಆದ್ದರಿಂದಲೇ ಇರಬೇಕು, 'ಹತ್ತು ಕಟ್ಟೋ ಕಡೆ ಒಂದು ಮುತ್ತು ಕಟ್ಟು' ಅಂತ ಹಿರಿಯರು ನಿಖರವಾಗಿ, ಚುಟುಕಾಗಿ ಮಾತಾಡುವ ಮಹತ್ವದ ಬಗ್ಗೆ ಹೇಳಿದ್ದಾರೆ. ಅವರೇನೋ ಮಾತಾಡುವ ಬಗ್ಗೆ ಹೇಳಿದರು. ಆದರೆ ಚುಟುಕು ಎಂಬ ಗುಣವಾಚಕ ದಶಕಗಳು ಕಳೆದಂತೆ ಮಾತಿನ ವಿವರಣೆಗೆ ಮಾತ್ರ ಸೀಮಿತವಾಗದೆ ತನ್ನ ಪ್ರಭಾವವನ್ನು ಎಲ್ಲ ಕ್ಷೇತ್ರಗಳಿಗೂ ಪಸರಿಸಿ ವೈಭವೋಪೇತವಾಗಿ ಮೆರೆಯುತ್ತಿದೆ ಎಂಬುದಂತೂ ಸರ್ವವಿದಿತ.

ಅಂತೂ ಈ ವೇಗದ ಜಗತ್ತಿನಲ್ಲಿ ಎಲ್ಲವೂ ಚುಟುಕಾಗಿರಬೇಕು. ಏಕೆಂದರೆ ಜನರಿಗೆ ಗಂಟೆಗಟ್ಟಲೆ ಯಾವುದರ ಬಗ್ಗೆಯೂ ಸಮಯ ಕಳೆಯಲು ಪುರುಸೊತ್ತಿಲ್ಲ (ಸಿನಿಮಾ, ಟಿ.ವಿ ಧಾರಾವಾಹಿಗಳ ವೀಕ್ಷಣೆ, ವೀಡಿಯೋ ಗೇಮ್ಸ್, ಫೋನ್ ಚಾಟಿಂಗ್, ಫೇಸ್ ಬುಕ್‌ಗಳ ಜೊತೆಗೆ, ಈಗ ಟ್ರಾಫಿಕ್ ಜಾಮ್‌ನಲ್ಲಿ ಬಲವಂತವಾಗಿ ಕಳೆಯುವ ಕಾಲ, ಇತ್ಯಾದಿ ಹೊರತು ಪಡಿಸಿ,)! ಸಾಹಿತ್ಯ, ಉಡುಪುಗಳು (ವಿಶೇಷವಾಗಿ ಹೆಣ್ಮಕ್ಕಳದು) ಕ್ರಿಕೆಟ್ ಮ್ಯಾಚ್‌ಗಳು, ಹೀಗೆ ಒಂದೇ ಎರಡೇ ಚುಟುಕು ರೂಪದ ಪ್ರಭಾವಕ್ಕೆ ಸಿಕ್ಕಿರುವುದು!

ಹಿಂದಿನ ಕಾಲದಲ್ಲಿ ಮಹಿಳೆಯರು ಧರಿಸುತ್ತಿದ್ದುದು ದೊಡ್ಡದಾದ ಏಳು ಅಥವಾ ಎಂಟು ಗಜದ ಸೀರೆ. ಸೊಂಟವನ್ನು ಮುಟ್ಟುತ್ತಿದ್ದ ರವಿಕೆಯ ತೋಳು ಮೊಣಕೈ ದಾಟಿರುತ್ತಿತ್ತು.! ಕಾಲ ಕಳೆದಂತೆ ಎಂಟು ಗಜದ ಸೀರೆ ಆರು ಗಜಕ್ಕಿಳಿಯಿತು, ರವಿಕೆಯ ಉದ್ದ ಕಡಿಮೆಯಾಯಿತು, ತೋಳಿನ ಉದ್ದ ಕೂಡ. ಉದ್ದ ತೋಳು ಚುಟುಕು ರೂಪ ತಾಳಿತು. ತೋಳಿಲ್ಲದ ರವಿಕೆಯೂ ಬಂತು, ಗಿಡ್ಡ ತೋಳಿನ ರವಿಕೆ ಫ್ಯಾಶನ್ ಆಯಿತು. ಹಿಂದೆ ತೆಗೆಯುತ್ತಿದ್ದ ಉದ್ದನೆಯ ಸೆರಗು ಮಾಯವಾಗಿ ಚುಟುಕು ರೂಪ ತಾಳಿ, ಬೆನ್ನಿನಿಂದ ಸ್ವಲ್ಪ ಮಾತ್ರ ಕೆಳಗಿಳಿದು, ನೆಲದೆಡೆ ಇಣುಕಿ ನೋಡುತ್ತಿತ್ತು! ಏಕೋ ಏನೋ ತಿಳಿಯದು, ಸೆರಗಿನ ಚುಟುಕು ರೂಪ ಮಾಯವಾಗಿ, ಸೆರಗು ನೆಲ ಗುಡಿಸುವ ಮಟ್ಟಕ್ಕೆ ಉದ್ದವಾಗಿ ಬೆಳೆಯಿತು. ಆದರೆ, ಈಗ ಮತ್ತೆ ಉದ್ದನೆಯ ಸೆರಗು ಫ್ಯಾಶನ್ ಆಗಿರುವುದಂತೂ ನಿಜ. ಆದರೆ ನೆಲಕ್ಕೆ ಮುತ್ತಿಕ್ಕುತ್ತಾ, ಕಸ ತೆಗೆಯುವ ಮಟ್ಟಕ್ಕೆ ಇಲ್ಲ. ರವಿಕೆಯ ಉದ್ದ ಕನಿಷ್ಠವಾಗಿದ್ದು, ಅಂದರೆ ಚುಟುಕಾಗಿದ್ದು, ಬೆನ್ನಿನ ಭಾಗದದಲ್ಲಂತೂ ಬಟ್ಟೆ ತೀರ ಚುಟುಕಾಗಿ, ಅಂದ ಹಾಗೆ ಎಷ್ಟರ ಮಟ್ಟಿಗೆ ಎಂದರೆ ಬೆನ್ನುರಹಿತ ರವಿಕೆ ಕೂಡ ಲಲನೆಯರನ್ನು ಅಲಂಕರಿಸಿ ನೋಡುಗರ ಮನಸೆಳೆಯುವುದಂತೂ ನಿಜ.

ಇಂದಿನ ಪರಿಸ್ಥಿತಿಯಲ್ಲಿ, ಸೀರೆಯನ್ನು ಟೆಸ್ಟ್ ಕ್ರಿಕೆಟ್‌ಗೆ ಹೋಲಿಸಿದರೆ, ಚೂರಿದಾರ್‌ಅನ್ನು ಒನ್ ಡೇ ಕ್ರಿಕೆಟ್‌ಗೆ, ಇತ್ತೀಚೆಗೆ ಹೆಣ್ಮಕ್ಕಳು ಧರಿಸುವ ತುಂಡು ಲಂಗ, ತುಂಡು ಚಡ್ಡಿಗಳನ್ನು ಟಿ-ಟ್ವೆಂಟಿ ಕ್ರಿಕೆಟ್‌ಗೆ ಹೋಲಿಸಬಹುದಲ್ಲವೇ? ಹಿಂದಿನ ಕಾಲದಲ್ಲಿ

ಹೆಣ್ಮಕ್ಕಳು ಕಾಲೇಜಿಗೆ ಬರುವ ವೇಳೆಗೆ ಲಂಗ ದಾವಣಿ ಅಥವಾ ಸೀರೆಯೇ ಅವರ ದಿರಸು. ಬರಬರುತ್ತ 80-90ರ ದಶಕದಲ್ಲಿ ಅವರ ಡ್ರೆಸ್ ಚೂರಿದಾರ್‌ಗೆ ಬದಲಾಗುತ್ತ ಬಂದು ಒನ್ ಡೇ ಕ್ರಿಕೆಟ್‌ನಂತೆ ಆಕರ್ಷಕ ರೂಪ ತಾಳತೊಡಗಿತು. 90ರ ದಶಕದಲ್ಲಿ ಇನ್ನೂ ಹೆಚ್ಚಿನ ಮಾರ್ಪಾಡಾಗಿ ಜೀನ್ಸ್ ಪ್ಯಾಂಟ್, ಶರ್ಟ್ ಜನಪ್ರಿಯವಾಗತೊಡಗಿತು.

ಇದೀಗ ಅತ್ಯಾಧುನಿಕ ಹೆಣ್ಮಕ್ಕಳು ತುಂಡು ಚಡ್ಡಿ, ಶಾರ್ಟ್ ಟಾಪ್, ತುಂಡಾತಿತುಂಡು ಲಂಗ, ಶಾರ್ಟ್ ಟಾಪ್ ಧರಿಸಿ ಪಡ್ಡೆ ಹುಡುಗರೇನು, ಮುದುಕರ ರಕ್ತದೊತ್ತಡ ಹೆಚ್ಚಿಸುವುದರಲ್ಲೂ ಯಶಸ್ವಿಯಾಗಿದ್ದಾರೆ.

ನಾನು ಕಾಲೇಜಿನಲ್ಲಿ ಕೆಲಸ ಮಾಡುತ್ತಿದ್ದಾಗ ಡ್ರೆಸ್ ಕೋಡ್ ಕಟ್ಟುನಿಟ್ಟಾಗಿ ಪಾಲಿಸಬೇಕೆಂದು ನಮ್ಮ ಪ್ರಿನ್ಸಿಪಾಲರು ಆಜ್ಞೆ ಹೊರಡಿಸಿದರು. ಇದಕ್ಕೆ ಕಾರಣವೂ ಇತ್ತು. ಫ್ಯಾಶನ್ ಪ್ರಭಾವ ಹೆಣ್ಮಕ್ಕಳ ಮೇಲೆ ಚೆನ್ನಾಗಿ ಕೆಲಸ ಮಾಡಿತ್ತು. ಅವರೆಲ್ಲ ಬಿಗಿ ಜೀನ್ಸ್, ತುಂಡು ಟಾಪ್ ಧರಿಸಿ ಕಾಲೇಜಿಗೆ ಬರಲಾರಂಭಿಸಿದಾಗ ಪ್ರಿನ್ಸಿಪಾಲರು ಕಟ್ಟುನಿಟ್ಟಾಗಿ ಹಾಗೆ ಬರಬಾರದೆಂದು ತಾಕೀತು ಮಾಡಿದರು.

ಆದರೂ ವಿದ್ಯಾರ್ಥಿನಿಯರು ಡ್ರೆಸ್ ಕೋಡ್‌ಗೆ ಸೊಪ್ಪು ಹಾಕದೆ ತಮ್ಮದೇ ರೀತಿಯಲ್ಲಿ ಡ್ರೆಸ್ ಹಾಕಿಕೊಂಡು ಬಂದಾಗ ಅವರ ತಾಯಂದಿರನ್ನು ಕರೆಸಿ ಮಾತಾಡಿದ್ದೂ ಆಯಿತು. ಪ್ರಿನ್ಸಿಪಾಲರ ಅನುಭವ ಕೇಳಿ. ಮಗಳು ತುಂಡು ಬಟ್ಟೆ ಹಾಕಿಕೊಂಡು ಕಾಲೇಜಿಗೆ ಬರ್ತ್ತಾಳೇಂತ ದೂರು ಹೇಳಲು ತಾಯಿಯನ್ನು ಕರೆಸಿದರೆ, ತಾಯಿಯೂ ಅದೇ ರೀತಿ ಡ್ರೆಸ್ ಮಾಡಿಕೊಂಡು ಬರಬೇಕೇ? ಪ್ರಿನ್ಸಿಪಾಲರಿಗೆ ಏನು ಹೇಳಬೇಕೇಂದೇ ತೋಚಲಿಲ್ಲ! ಅಂದರೆ ಚುಟುಕು ಡ್ರೆಸ್ ಪ್ರಭಾವ ಅಷ್ಟರ ಮಟ್ಟಿಗೆ ಜನಗಳ ಮೇಲಾಗಿತ್ತು!

ಯುವತಿಯರ ಫ್ಯಾಶನ್ ಮ್ಯಾಕ್ಸಿಯಿಂದ ಮಿಡಿಯಾಯಿತು, ಮಿಡಿಯಿಂದ ಮಿನಿಯಾಯಿತು. ಈಗ ಮಿನಿಮಿನಿ ಡ್ರೆಸ್ ಫ್ಯಾಶನ್! ಹಾಂ, ಮಿನಿಯೆಂದರೆ ಟೆನಿಸ್ ತಾರೆಯೊಬ್ಬಳ ಸ್ಕರ್ಟ್ ನೆನಪಿಗೆ ಬರುತ್ತದೆ. ವಿಂಬಲ್ಡನ್ ಆಟ ಆಡುವಾಗ ಅವಳ ಸ್ಕರ್ಟ್ ಎಷ್ಟು ಚುಟುಕಾಗಿತ್ತೆಂದರೆ, ಅವಳ ಒಳ ಉಡುಪುಗಳ ಧಾರಾಳ ಪ್ರದರ್ಶನವೇರ್ಪಟ್ಟಿತ್ತು! ಅಂದು ಅವಳ ಉಡುಪು ಸಾಕಷ್ಟು ಟೀಕೆಗೂ ಒಳಗಾಗಿತ್ತು. ಅಲ್ಲ, ಪುರುಷ ಆಟಗಾರರು ಹಾಫ್ ಪ್ಯಾಂಟ್ ತೊಟ್ಟು ಆಡಿದರೂ ಅದು ಅವರ ಮೈ ಮುಚ್ಚಿರುತ್ತದೆ. ಆದರೆ ಮಹಿಳಾ ಟೆನಿಸ್ ಆಟಗಾರ್ತಿಯರೇಕೆ ಚುಟುಕು ಸ್ಕರ್ಟ್ ಧರಿಸಿ ಆಡಬೇಕು ಎಂಬುದು ನನ್ನಂತಹವರಿಗಂತೂ ಅರ್ಥವಾಗದ ವಿಷಯ ಬಿಡಿ.

ಅಂತೆಯೇ ಸಿನಿಮಾಗಳಲ್ಲಿ ನಾಯಕಿಯರ ಡ್ರೆಸ್‌ಗಳು ಚುಟುಕಾಗತೊಡಗಿ, ಇನು ಸಾಧ್ಯವಿಲ್ಲ ಎನ್ನುವಷ್ಟು ಚಿಕ್ಕದಾಗಿದೆ. ಬಹುಶಃ ಹುಟ್ಟಿದ ಮಗುವಿನ ಡ್ರೆಸ್ ಕೂಡ ಇನ್ನೂ ಸ್ವಲ್ಪ ದೊಡ್ಡದಿರಬಹುದೇನೋ ಎಂಬಷ್ಟು ಚಿಕ್ಕದಾಗಿದೆ. ಅದರ ಪ್ರಭಾವ ನಮ್ಮ ಹೆಣ್ಣು ಮಕ್ಕಳ ಮೇಲೆ ನೋಡ ಬೇಕಾದರೆ ಮಾಲ್‌ಗಳಿಗೆ ಭೇಟಿ ನೀಡಬೇಕು. ಬಿಂದಾಸ್ ಆಗಿ ತುಂಡು ಮಿನಿಮಿನಿ ಚಡ್ಡಿ, ಶರ್ಟ್ ಧರಿಸಿದ ಹುಡುಗಿಯರು ಸಿನಿಮಾ ನಾಯಕಿರನ್ನೂ ಮೀರಿಸುವಂತೆ ಚುಟುಕು ಡ್ರೆಸ್ ಹಾಕಿರುತ್ತಾರೆ.

★★★

ಹಿಂದೆ ಕ್ರಿಕೆಟ್ ಅಂದರೆ ಟೆಸ್ಟ್ ಕ್ರಿಕೆಟ್–ಐದು ದಿನಗಳ ಸುದೀರ್ಘ ಆಟ. ಆದರೆ, ಜನರ ಆ ಅಭಿರುಚಿ ಬದಲಾಗುತ್ತ ಬಂದು, ಐದು ದಿನಗಳ ಕ್ರಿಕೆಟ್ ಏಕತಾನತೆ ಎನ್ನಿಸಿತೇನೋ ಇಪ್ಪತ್ತನೆಯ ಶತಮಾನದ ಎಂಬತ್ತರ ದಶಕದಲ್ಲಿ ಅದರ ಜನಪ್ರಿಯತೆ ಸ್ವಲ್ಪ ಕಡಿಮೆಯಾಯಿತು. ಆಗಲೇ ಶುರುವಾದದ್ದು ಒನ್ ಡೇ ಕ್ರಿಕೆಟ್–ಐವತ್ತು ಓವರ್‌ಗಳ ಬಿರುಸಿನ ಆಟ. 20ನೆಯ ಶತಮಾನದ ಕೊನೆಯ ಹಂತದ ವೇಳೆಗೆ ಚುಟುಕು ಕ್ರಿಕೆಟ್ ಜನಪ್ರಿಯವಾಯಿತು. ಅಂದರೆ 20 ಓವರ್‌ಗಳ ಕ್ರಿಕೆಟ್ ಆಟ. ಝಟ್ ಪಟ್ ಎಂದು ಮುಗಿದು ಹೋಗುವ, ಆಟದ ಅಂತಿಮ ಹಂತದವರೆಗೂ ಜಯವು ಯಾರ ಪಾಲಿಗೆ ಎಂಬುದು ನಿರ್ಧರಿಸಲಾಗದ ಈ ಚುಟುಕು ಕ್ರಿಕೆಟ್ ಬಲುಬೇಗ ವೀಕ್ಷಕರ ಕುತೂಹಲ, ಆಸಕ್ತಿ ಹಿಡಿದಿಡುವಲ್ಲಿ ಅತ್ಯಂತ ಯಶಸ್ವಿಯಾಗಿ, ಜನಪ್ರಿಯತೆಯ ತುತ್ತ ತುದಿಗೇರಿ ಟಿ–20 ಕ್ರಿಕೆಟ್ ಎಂದೇ ಖ್ಯಾತಿವೆತ್ತ ಆಟವಾಯಿತು.

★★★

ಹಿಂದೆ ಕತೆಗಳು ಎಂದರೆ ಹಲವಾರು ಪುಟಗಳವರೆಗೆ ವ್ಯಾಪ್ತಿ ಇರುತ್ತಿತ್ತು. ನೀಳ್ಗತೆ ಎಂದರೆ ಮೂವತ್ತು ಪುಟಗಳವರೆಗೂ ಓಡುತ್ತಿತ್ತು. ಅಷ್ಟು ದೊಡ್ಡ ಕತೆಗಳನ್ನು ಓದೋರ್‍ಯಾರೂಂತಲೋ ಏನೋ, ಪತ್ರಿಕೆಗಳವರು ಸಣ್ಣ ಕತೆಗಳಿಗೆ ಪ್ರಾಶಸ್ತ್ಯ ನೀಡ ತೊಡಗಿದರು. ಮಾಸ್ತಿಯವರು ಸಣ್ಣ ಕತೆಗಳ ಪ್ರವರ್ತಕರು ಎಂದೂ ಖ್ಯಾತರಾದರು. ಅವರು ಓಂಕಾರ ಹಾಡಿದ ಸಣ್ಣಕತೆಗಳ ಪ್ರಕಾರ ಇಂದಿಗೂ ಜೀವಂತವಾಗಿ ನಳನಳಿಸುತ್ತಿವೆ. ಸಣ್ಣ ಕತೆಗಳೂ ದೊಡ್ಡದಾದವು ಎಂದೋ ಏನೋ, ಕತೆಯನ್ನು ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ, ಚುಟುಕಾಗಿ ಮುಗಿಸ ಬಲ್ಲಂತಹ ಮಿನಿ ಕತೆ ಜನಪ್ರಿಯವಾಯಿತು. ಇದರ ವ್ಯಾಪ್ತಿ ಅರ್ಧ ಪುಟದಿಂದ ಒಂದು ಪುಟದವರೆಗೆ. ಒಂದೇ ಪುಟದಲ್ಲಿ ಕತೆಯ ಘಟನೆಗಳು ನಡೆದುಹೋಗುತ್ತವೆ. ಕತೆಗೆ ಹೆಚ್ಚಿನ ವಿವರಣೆಯಿಲ್ಲ. ಬಿಗಿಯಾಗಿ ಹೆಣೆದ ಮಿನಿಕತೆ ಪ್ರಕಾರ ಬೇಗನೆ ಜನಪ್ರಿಯವಾಯಿತು. ಕತೆಗಳಿಗೆ ಚುಟುಕಿನ ಗೀಳು ಹಿಡಿದಿದೆ. ಕಾರ್ಡಿನಲ್ಲಿ ಕತೆಗಳು, ಹನಿಗತೆಗಳು, ಒಂದು ಸಾಲಿನ ಕತೆಗಳು ಹೀಗೆ ನಾನಾ ಬಗೆಯ ಚುಟುಕು ಕತೆಗಳು ಹುಟ್ಟಿಕೊಂಡಿವೆ. ಒಂದು ಸಾಲಿನಿಂದ ಒಂದೇ ಪದದಲ್ಲಿ ಕತೆ ಹೇಳುವ ಚಾಕಚಕ್ಯತೆಯೂ ಹುಟ್ಟಿಕೊಂಡೀತೇ ಅಥವಾ ಕತೆ ಅದಕ್ಕಿಂತ ಚುಟುಕಾಗಲು ಸಾಧ್ಯವೇ? ಎಂದೆಲ್ಲಾ ಪ್ರಶ್ನೆಗಳು ನನ್ನನ್ನು ಕಾಡುತ್ತವೆ. ಯೋಚಿಸಿದರೆ ಉತ್ತರವಂತೂ ಗೊತ್ತಿಲ್ಲ!!!

ಚುಟುಕು ಎಂಬ ಮಾತು ಕಾವ್ಯದಲ್ಲಿ ಸೊಗಸಾಗಿ ಪ್ರತಿಫಲಿಸಿದೆ. ಅಂದರೆ ಚುಟುಕು ಸಾಹಿತ್ಯದ ಬಗ್ಗೆ ನಾನು ಹೇಳ್ತಿದೀನಿ. ನಾನು ಬಲ್ಲಂತೆ ಮಾನ್ಯ ದಿನಕರ ದೇಸಾಯಿಯವರು ಚುಟುಕು ಸಾಹಿತ್ಯದ ಪ್ರವರ್ತಕರು. ಚಿಕ್ಕಂದಿನಲ್ಲಿ ನಾನು ಅವರ ಚುಟುಕುಗಳನ್ನು ಓದಿ ಸಂತೋಷ ಪಡುತ್ತಿದ್ದೆ. ಅಷ್ಟೇ ಅಲ್ಲ, ನಮ್ಮ ಪೂಜ್ಯ ತಂದೆಯವರು ಸೊಗಸಾಗಿ ಜೋರಾಗಿ ಪಠಿಸಿ ನಮ್ಮ ತಾಯಿಯೊಂದಿಗೆ ಅದರ ಸ್ವಾರಸ್ಯವನ್ನು ಹಂಚಿಕೊಳ್ಳುತ್ತಿದ್ದು ನೆನಪಿದೆ. ಇತ್ತೀಚೆಗೆ ಎಲ್ಲರೂ ಬಲ್ಲಂತೆ ಮಾನ್ಯ ಡುಂಡಿರಾಜ್‌ರವರು ಚುರುಕಾದ ಚುಟುಕು ಸಾಹಿತ್ಯಕ್ಕೆ ಅತ್ಯಂತ ಜನಪ್ರಿಯರು. ಸುಸ್ತು ಎಂಬ ಚುಟುಕದಲ್ಲಿ ಚುಟುಕಾಗಿ ನಮ್ಮ ರಸ್ತೆಯ ದುರವಸ್ಥೆ ಬಗ್ಗೆ ಕಣ್ಣಿಗೆ ಕಟ್ಟುವಂತೆ ಹೇಳಿಬಿಡುತ್ತಾರೆ.

ನಡೆಯಲಿಲ್ಲ

ಓಡಲಿಲ್ಲ

ಕಾರಲ್ಲಿ ಬಂದರೂ ಸುಸ್ತೇ?

ಹೌದು ಮಾರಾಯ್ರೇ,

ಹಾಗಿದೆ ನಮ್ಮ ರಸ್ತೆ.

ಜನರ ಸ್ವಭಾವಕ್ಕೆ ಚುರುಕು ಮುಟ್ಟಿಸುವ ಮತ್ತೊಂದು ಚುಟುಕ

ಮದುವೆಗೆ ಮುಂಚೆ

ಬರೀ ಲವ್, ಲವ್, ಲವ್,

ಮದುವೆಯ ನಂತರ

ಬೌ, ಬೌ, ಬೌ

ದಾಂಪತ್ಯದ ಬಗ್ಗೆ ಅದೆಷ್ಟು ಚೆನ್ನಾಗಿ ಚುಟುಕಾಗಿ ವಿಶ್ಲೇಷಿಸಿದ್ದಾರೆ! ಹತ್ತು ಪುಟಗಳ ಕಾವ್ಯದ ಬದಲು ನಾಲ್ಕು ಸಾಲಿನ ಚುಟುಕು ಪದ್ಯ ಅದೆಷ್ಟು ಪರಿಣಾಮಕಾರಿಯಾಗಿದೆ!

ಚುಟುಕು ಗೀಳು ಇತ್ತೀಚೆಗೆ ದಾಂಪತ್ಯದತ್ತ ಹರಿದಿದೆ ಎನ್ನುವುದು ಆಧುನಿಕ ಜಗತ್ತಿನ ದುರಂತ. ಮದುವೆಯಾಗಿ ಕೆಲವೇ ತಿಂಗಳುಗಳಲ್ಲಿ, ವಾರದಲ್ಲಿ, ಅಷ್ಟೇಕೆ ಮದುವೆಯ ದಿನವೇ ದಾಂಪತ್ಯ ಮುರಿದು ಬಿದ್ದು, ಚುಟುಕು ದಾಂಪತ್ಯಕ್ಕೆ ಅಂತ್ಯ ಹಾಡುತ್ತದೆ. ಇತ್ತೀಚೆಗೆ ಈ ಚುಟುಕು ದಾಂಪತ್ಯಗಳು ಹೆಚ್ಚುತ್ತಿರುವುದು, ಸಾಮಾಜಿಕ ಪಿಡುಗಾಗಿ ಪರಿಣಮಿಸುತ್ತದೆಯೇನೋ ಎಂದು ಚಿಂತೆಯಾಗುತ್ತದೆ.

ಒಟ್ಟಿನಲ್ಲಿ ಈ ವೇಗದ ಯುಗದಲ್ಲಿ ಎಲ್ಲವೂ ಚುಟುಕಾಗಿರಬೇಕು (ಆದರೆ ಈ ಮಾತು ನಮ್ಮ ಟೆಲಿವಿಷನ್ ಧಾರಾವಾಹಿಗಳಿಗೆ ಮಾತ್ರ ಅನ್ವಯಿಸುವುದಿಲ್ಲ ಎಂಬುದನ್ನು ಹೇಳಬೇಕಾಗಿಲ್ಲ).

✵

---

## ಪಾಪದ ಹುಡುಗರು

ಈಗಿನ ಹುಡುಗಿಯರೇ ಸಾಫ್ಟ್ ವೇರು

ಅವರೇ ಎವ್ವೆರಿವೇರು

ಸುತ್ತಾಡುತ್ತಾರೆ, ತಿನ್ನುತ್ತಾರೆ

ಸಮ್‌ವೇರು

ಅವರನ್ನು ಕಟ್ಟಿಕೊಳ್ಳುವ ಹುಡುಗರು

ಪಾಪ

ನೋ ವೇರು

# ಮೀನುಗಳೂ ಮಾತನಾಡುವಂತಿದ್ದರೆ..

**- ನಂನಾಗ್ರಾಜ್**

### ಸ್ಟಿಂಕ್ಸ್ ಲೈಕ್ ಫಿಶ್

ಅಯ್ಯೊ, ಅಯ್ಯೋ ಮೀನಿನ ವಾಸನೆ - ದುರ್ನಾತ ಎಂದು ಮೂಗಳೆಯುತ್ತೀರಾ? ನಾವು ನಮ್ಮ ಆವಾಸಸ್ಥಾನದಲ್ಲಿದ್ದಾಗ ವಾಸನೆ ಸುತರಾಂ ಇರೋದಿಲ್ಲ ತಾನೆ? ಗಾಳ ಹಾಕಿಯೋ ಅಥವಾ ಬಲೆ ಬೀಸಿಯೋ ಕೃತ್ರಿಮದಿಂದ ನಮ್ಮನ್ನು ಹೊರಕ್ಕೆಳೆದು ವಾತಾವರಣಕ್ಕೆ ಎಕ್ಸಪೋಸ್ ಮಾಡಿ ದುರ್ವಾಸನೆ ಎನ್ನುತ್ತೀರಲ್ಲಾ, ಕ್ರೂರಿಗಳು. ನಂತರ ನಮ್ಮನ್ನು ಶುದ್ದಿಮಾಡಿ, ಮಸಾಲೆಗಳನ್ನು ಹಾಕಿ ಬಗೆ ಬಗೆಯಾದ ರುಚಿ ರುಚಿ ಖಾದ್ಯಗಳನ್ನು ತಯಾರಿಸಿ ಬಾಯಿ ಚಪ್ಪರಿಸಿಕೊಂಡು ತಿನ್ನುತ್ತೀರ ಎಂತಹ ವಕ್ರ ಬುದ್ಧಿ ! ನಾವು ಸತ್ತ ಮೇಲೂ ನಿಮ್ಮ ನಾಲಿಗೆಗೆ ರುಚಿಸಿ ಹೊಟ್ಟೆಗೆ ಹಿತ ತರುತ್ತೇವೆ. ನೀವು?

### ಡ್ರಿಂಕ್ಸ್ ಲೈಕ್ ಫಿಶ್

ಮೀನಿನ ಹಾಗೆ ಕುಡಿಯುತ್ತಾನೆ ಎಂದು ಅಲ್ಲಗೆಳೆಯುತ್ತೀರ. ಕುಡಿಯುವುದು ಎಂದರೆ ಏನೆಂದೇ ನಮಗೆ ಗೊತ್ತಿಲ್ಲ, ಏಕೆ ಈ ಅಸಂಬದ್ಧ ಹೋಲಿಕೆ. ಕಂಠಪೂರ್ತಿ ಕುಡಿದಿದ್ದರೆ ಫಿಲ್ಲಡ್ ಟು ದಿ ಗ್ರಿಲ್ಸ್ ಅನ್ನುತ್ತೀರ ಇದು ಅತಿ ಆಯ್ತು.

### ಸಂಥಿಂಗ್ ಫಿಶಿ

ಯಾವುದಾದರೂ ಸನ್ನಿವೇಶ/ವ್ಯವಹಾರ ಅನುಮಾನಾಸ್ಪದವಾಗಿ ಕಂಡುಬಂದಾಗ ಸಂಥಿಂಗ್ ಫಿಶಿ ಅಂತ ಪಿಸುಗುಟ್ಟೀರ. ನೇರ, ಸರಳ ಹಾಗೂ ಪ್ರಮಾಣಿಕವಾಗಿ ಜೀವಿಸುವ ಜಲಚರಗಳು ನಾವು ಭೂಮಿಯ ಮೇಲೆ ದುರ್ಬುದ್ಧಿಗಳಿಂದ ಏರ್ಪಡುವ ಅನುಮಾನಾಸ್ಪದ ಸನ್ನಿವೇಶಗಳಿಗೆ ನಮ್ಮ ಹೆಸರನ್ನೇಕೆ ಜೋಡಿಸುತ್ತೀರ?

### ಬಿಗ್ ಫಿಶ್ ಈಟಿಂಗ್ ಸ್ಮಾಲ್ ಫಿಶ್

ನಿಮ್ಮಲ್ಲಿನ ಬೃಹತ್ ಕಾರ್ಪೋರೇಶನ್‌ಗಳು ತಮ್ಮದೇ ಆದ ವಿವಿಧ ಕಾರಣಗಳಿಗೆ ಸಣ್ಣಸಣ್ಣ ಕಂಪನಿಗಳನ್ನು ಕಬಳಿಸಿದಾಗ ದೊಡ್ಡ ಮೀನು ಚಿಕ್ಕ ಮೀನನ್ನು ತಿಂದ ಹಾಗೆ ಎಂದು ವ್ಯಾಖ್ಯಾನ ಮಾಡುತ್ತೀರ. ನಮ್ಮಲ್ಲಿ ಕೆಲವೊಮ್ಮೆ ಅನಿವಾರ್ಯತೆಯಿಂದ ಹಾಗಾಗಬಹುದು ನಿಮ್ಮದೇನು ತಕರಾರು? ನಿಮ್ಮಂತಹ ನಿರ್ದಯಿ ಹಾಗೂ ಸ್ವಾರ್ಥಿಗಳ ಹೊಟ್ಟೆತುಂಬಿಸುವುದಕ್ಕಿಂತ ನಮ್ಮದೇ ಕುಲದ ದೊಡ್ಡಣ್ಣರ ಹೊಟ್ಟೆ ತುಂಬಿಸುವುದು ಎಷ್ಟೋಮೇಲು ಏನಂತೀರಾ?

### ಫಿಶಿಂಗ್ ಫಾರ್ ಸಂಥಿಂಗ್

ಯಾವುದಾದರೂ ಸನ್ನಿವೇಶ । ಸಂದರ್ಭ ಹಿಡಿತಕ್ಕೆ ಸಿಗದೇ ನೀವು ತಡಕಾಡುತ್ತಿರುವಾಗ ಆ ಪರಿಸ್ಥಿತಿಯನ್ನು ನಮಗೆ ಹೋಲಿಸುತ್ತೀರ. ಇರಬಹುದು ನಿಮ್ಮ ಗಾಳದಲ್ಲಿರುವ ಹುಳದ ಆಸೆಗೆ, ಮೇಲಾಗಿ ಆಹಾರಕ್ಕಾಗಿ ತಿನ್ನಲು ಯತ್ನಿಸಿ ಸಿಕ್ಕಿ ಬಿದ್ದು ಸಾಯುತ್ತೇವೆ. ಆದರೆ ಆ ಗಾಳದ ಇನ್ನೊಂದು ತುದಿಯಲ್ಲಿ ದೊಡ್ಡದೊಂದು ಹುಳ ಇರುವುದೆಂಬ ಕಲ್ಪನೆ ಸಹ ನಮಗಿರುವುದಿಲ್ಲ!

### ಫಿಶ್ ಸ್ಟೋರೀಸ್

ಲೆಕ್ಕವಿಲ್ಲದಷ್ಟು ಸಮಯ ಹಾಳು ಮಾಡಿಕೊಂಡು ಆಗೊಮ್ಮೆ ಈಗೊಮ್ಮೆ ನಮ್ಮನ್ನು ನೀವು ಹಿಡಿದಾಗ ನಿಮ್ಮ ಮನೆಯವರಲ್ಲಿ, ಸ್ನೇಹಿತರಲ್ಲಿ ನಮ್ಮ ಆಕಾರವನ್ನು 10 ಪಟ್ಟು ಹೆಚ್ಚಿಸಿ ಹೇಳಿ ಜಂಭ ಕೊಚ್ಚಿಕೊಳ್ಳುತ್ತೀರ ಬಂಡವಾಳವಿಲ್ಲದ ಬಡಾಯಿಗಳು! ಬರಿಗೈಯಲ್ಲಿ ಮನೆಗೆ ವಾಪಸ್ಸು ಹೋಗಲು ಇರುಸುಮುರುಸಾಗಿ ಒಂದೆರಡು ಮೀನುಗಳನ್ನು ಖರೀದಿಸಿಕೊಂಡು ಹೋದ ಸಂದರ್ಭಗಳೇನು ಕಮ್ಮಿ ಇಲ್ಲ ಅಲ್ವೇ?

### ಸ್ಕೂಲ್ ಆಫ್ ಫಿಶ್

ಆನೆಗಳಿಗೆ 'ಹರ್ಡ್ ಆಫ್ ಎಲಿಫೆಂಟ್ಸ್' ಪಕ್ಷಿಗಳಿಗೆ 'ಫ್ಲಾಕ್ ಆಫ್ ಬರ್ಡ್ಸ್' ಅಂತೀರ. ನಮ್ಮನ್ನು 'ಸ್ಕೂಲ್ ಆಫ್ ಫೀಶ್' ಅಂತೀರ. ಏನು ಕಾಮೆಡೀನಾ? ನಾವು ಶಾಲೆಗೆ ಹೋಗುವುದಿಲ್ಲ, ಹೌದು, ಹೋಗಬೇಕಾಗಿಲ್ಲ ರೀ. ಬುದ್ಧಿವಂತಿಗೆ ನಮ್ಮ ರಕ್ತದಲ್ಲಿಯೇ ಇದೆ. ನಮ್ಮನ್ನು ಪ್ರಧಾನ ಆಹಾರವಾಗಿ ಸೇವಿಸುವವರು ಸೇವಿಸದಿರುವವರಿಗಿಂತ ಬುದ್ಧಿವಂತರಾಗಿರುತ್ತಾರೆ ಎಂಬುದು ಎಳ್ಳಷ್ಟು ಸಂಶಯವಿಲ್ಲದೆ ಸಾಬೀತಾಗಿದೆ. ಆಗ್ಗಾಗ್ಗೆ ಮೀನು ತಿನ್ನುವುದರಿಂದ ಅವರುಗಳು ಬುದ್ಧಿವಂತರಾಗಿದ್ದಾರೆ ಎಂದು ವೋಡ್‌ಹೌಸ್ ಸಾರಿ ಸಾರಿ ಹೇಳುತ್ತಿದ್ದ. ಶಕ್ತಿಯುತವಾಗಿಟ್ಟರಲು ನಿಮ್ಮ ಮಕ್ಕಳಿಗೆ ಕಾಡ್ ಲಿವರ್ ಆಯಿಲ್ (ಮೀನಿನ ಎಣ್ಣೆಯನ್ನು) ಕೊಡುತ್ತೀರಲ್ಲವೇ? ಹ್ಹಿ, ಹ್ಹಿ, ಹ್ಹಿ...

### ಫಿಶಿಂಗ್

ಹಲವಾರು ವಿಧಗಳಲ್ಲಿ ನಮ್ಮನ್ನು ಪರಿಹಾಸ, ಅಣಕು ಮಾಡುತ್ತಿದ್ದಾಗ್ಯೂ ನಮ್ಮನ್ನು ಹಿಡಿಯುವ ಕ್ರಿಯೆ ನಿಮಗೊಂದು ಕ್ರೀಡೆ ಹಾಗೂ ಹವ್ಯಾಸ ಅದಕ್ಕಾಗಿ ಗಂಟೆಗಟ್ಟಳೆ ಸಮಯವನ್ನು ಪೋಲು ಮಾಡುತ್ತೀರ. ಹೆಚ್ಚುಕಮ್ಮಿ ನೀವು ನಿಸರ್ಗದ ಜೊತೆಯೇ ಲೀನವಾಗಿ ಬಿಡುವಷ್ಟು! ಅಪ್ಪಿತಪ್ಪಿ ನಮ್ಮಲ್ಲಿ ಒಬ್ಬಿಬ್ಬರು ಯಾವಾಗಲೊಮ್ಮೆಮ್ಮೆ ಸಿಕ್ಕಿ ಬೀಳುತ್ತೇವೆ ಅಷ್ಟೆ ಸೋಂಬೇರಿತನದ ಪರಮಾವಧಿ !

### ಫಿಶ್ ಔಟ್ ಆಫ್ ವಾಟರ್

ಪರಿಚಯವಿಲ್ಲದ ಸಂದರ್ಭ, ಸನ್ನಿವೇಶಗಳನ್ನು ನಿಭಾಯಿಸಲು ನೀವು ಅಶಕ್ತರಾದಾಗ ಫಿಶ್ ಔಟ್ ಆಫ್ ವಾಟರ್ ಎಂದು ಹೇಳಿಕೆ ಕೊಡುತ್ತೀರಿ. ನಿಮ್ಮ ಈ ದುಃಸ್ಥಿತಿಗೆ ನಮ್ಮನ್ನು ಏಕೆ ಎಳೆಯುತ್ತೀರ ? ನೈಸರ್ಗಿಕವಾದ ಆ ವಾಸಸ್ಥಾನದಲ್ಲಿ ನಾವು ಆರಾಮವಾಗಿದ್ದೇವೆ. ನಮ್ಮನ್ನು ಬಲವಂತವಾಗಿ ಅದರಿಂದ ಹೊರಗೆ ಹಾಕಿದರೆ ನಮಗೆ ಪರಿಚಯವಿಲ್ಲದ, ಸೂಕ್ತವಲ್ಲದ ಪರಿಸರಕ್ಕೆ ಏಕಾಏಕಿ ಹೊಂದಿಕೊಳ್ಳಲು ಸಾಧ್ಯವಿಲ್ಲದೆ ವಿಲಿವಿಲಿ ಎಂದು ಒದ್ದಾಡುತ್ತೇವೆ. ಅದರಲ್ಲಿ ಅತಿಶಯವೇನು? ಪ್ರಾಣಿಗಳ ಹಾಗೆ ನೀವುಗಳೇನು ನೈಸರ್ಗಿಕ ಈಜುಗಾರರಲ್ಲ ಕೆಲವರು ಕಷ್ಟಪಟ್ಟು ಈಜು ಕಲಿಯುತ್ತೀರಿ. ಮಿಕ್ಕವರೋ, ನಾಲ್ಕಡಿ ನೀರಲ್ಲಿ ಬಿದ್ದಾಗ ವಿಲಿವಿಲಿ ಎಂದು ಒದ್ದಾಡಿ ಕೈ, ಕಾಲು, ಬಾಯಿ ಕೂಡ ಬಡಿದುಕೊಂಡು ಅರಚುತ್ತೀರ ಹ ಹ್ಹ ಹ್ಹಾ! ಆಗ ನಾವೇನು ನಿಮ್ಮನ್ನು ಮಣ್ಣಿನಿಂದ ಹೊರಬಂದ ಮನುಷ್ಯ ಎಂದು ಪರಿಹಾಸ್ಯ ಮಾಡುತ್ತೇವೆಯೇ?

✷

# ನೊಂದ ನಾಯಿ

- ವೈ.ವಿ.ಗುಂಡೂರಾವ್

ರಾಮರಾಜ್ಯ... ಸರ್ವ ಜಂತುಗಳೂ ಶಾಂತಿ ಸಮಾಧಾನಗಳಿಂದ ಅತ್ಯಂತ ಸುಖವಾಗಿ ಇದ್ದ ಕಾಲ. ಅದು ಎಲ್ಲರಿಗೂ ರಾಮರಾಜ್ಯವಷ್ಟೇ ಅಲ್ಲ, ಆ..ರಾ..ಮ ರಾಜ್ಯ. ಹೀಗಿರುವಾಗ, ಒಂದು ದಿನ ನಾಯಿಯೊಂದು ಅರಮನೆಯ ಹೊರಬಾಗಿಲಿನ ಹತ್ತಿರ ಜೋರಾಗಿ ಬೊಗಳತೊಡಗಿತು. ರಾಮನಿಗೆ ಆ ಬೊಗೋಳು ಕೇಳಿಸಿತು. ಕೂಡಲೆ ಲಕ್ಷ್ಮಣನನ್ನು ಕರೆದು ''ಲಕ್ಷ್ಮಣ, ಯಾವುದೋ ನಾಯಿ ಏನೋ ದೂರು ತೆಗೆದುಕೊಂಡು ಬಂದಂತಿದೆ. ಹೋಗಿ ಏನದರ ಗೋಳು ಅಂತ ವಿಚಾರಿಸಿಕೊಂಡು ಬಾ'' ಎಂದ. ಬೇರೆ ಯಾರಾದರೂ ಆಗಿದ್ದರೆ ಆ ನಾಯಿಯನ್ನ ''ಹೊಡೆದೋಡಿಸಿ'' ಎಂದು ಆಜ್ಞಾಪಿಸುತ್ತಿದ್ದರು. ಅಥವಾ ಅವರೇ ಹೊಡೆದು ಓಡಿಸಿಬಿಡುತ್ತಿದ್ದರು. ಆದರೆ ರಾಮ ಹಾಗಲ್ಲ. ಲಕ್ಷ್ಮಣ ಕೂಡ ಅಣ್ಣನಿಗೆ ಅನುರೂಪನಾದ ತಮ್ಮ. ಯಾರಲ್ಲಿ? ಎಂದು ಆಳನ್ನು ಕರೆದು, ಆ ನಾಯಿಯನ್ನ ಓಡಿಸಿ ಅಂತಾನೋ, ಇಲ್ಲ ಏನಂತೆ ಆ ನಾಯಿಯ ಗೋಳು, ಕೇಳಿಕೊಂಡು ಬನ್ನಿ ಅಂತನೋ ಹೇಳಬಹುದಾಗಿತ್ತು. ಆದರೆ ಹಾಗೆ ಮಾಡಲಿಲ್ಲ. ಯಾಕೆಂದರೆ ಅವನು ರಾಮನ ತಮ್ಮ. ಅವನೇ ಹೋದ. ನಾಯಿಯನ್ನು ಕೇಳಿದ, ಏನಪ್ಪ ನಿನ್ನ ಗೋಳು? ಯಾಕೆ ಹೀಗೆ ಬೊಗಳತಾ ಇದ್ದೀಯಾ? ಏನಿನ್ನ ಪ್ರಾಬ್ಲಂ? ಆದರೆ ನಾಯಿ ರಾಮನೇ ಇಲ್ಲಿಗೆ ಬಂದು ನನ್ನ ಅಹವಾಲನ್ನು ಕೇಳಬೇಕು. ಅಥವಾ ನಾನೇ ರಾಮನ ಬಳಿ ಹೋಗಿ ನನ್ನ ಅಹವಾಲನ್ನು ಹೇಳಬೇಕು ಎಂದಿತು. ಲಕ್ಷ್ಮಣ ರಾಮನಿಗೆ ಇದನ್ನು ಹೇಳಿದ. ರಾಮ ನಾಯಿಯನ್ನು ಕರೆದುಕೊಂಡು ಬರಲು ತಿಳಿಸಿದ.

ಬಂದಿತು ನಾಯಿ ರಾಮನ ಬಳಿ. ರಾಮನಿಗೆ ನಮಸ್ಕಾರ ಮಾಡಿ ಏನಿಲ್ಲ ರಾಮ! ನಾನು ಸಾಮಾನ್ಯವಾಗಿ ಓಡಾಡಿಕೊಂಡು ಇರುವ ಜಾಗದಲ್ಲಿ ಒಬ್ಬ ಸನ್ಯಾಸಿ ಇದ್ದಾನೆ. ತನ್ನ ಪಾಡಿಗೆ ತಾನಿದ್ದವನು ಈ ದಿನ ಬೆಳಿಗ್ಗೆ ನನಗೆ ತನ್ನ ದಂಡದಿಂದ ಜೋರಾಗಿ ಬಾರಿಸಿದ. ನಾನು ಅವನು ನಡೆದು ಹೋಗುತ್ತಿದ್ದ ದಾರಿಗೆ ಅಡ್ಡ ಬಂದನಂತೆ. ಬಾರಿಸೋ ಅವಶ್ಯಕತೆ ಏನಿತ್ತು? ಸುಮ್ಮನೆ ಓಡಿಸಬಹುದಾಗಿತ್ತು. ಅವನ ದಾರಿಗೆ ಅಡ್ಡ ಬರೋ ಅವಶ್ಯಕತೆ ಆಗಲಿ, ದುರುದ್ದೇಶ ಆಗಲಿ, ನನಗೇನು ಇರಲಿಲ್ಲ. ಏನೋ ಬೈ ಮಿಸ್ಟೇಕ್ ಆಯಿತಪ್ಪ. ಅಷ್ಟಕ್ಕೇ ನನಗೆ ಹಿಂಸಿಸಿದ, ದೇಹಕ್ಕೆ ನೋವುಂಟು ಮಾಡಿದ. ನಾನೀಗ ಕುಂಟುತ್ತಾ ಇದ್ದೀನಿ. ಕಾಲಿನಲ್ಲಿ ರಕ್ತ ಬರ್ತಾ ಇದೆ, ಮೂರೇ ಕಾಲು ನನಗೆ ಸರಿಯಾಗಿರೋದು, ನೋಡಿ... ನಿನ್ನ ರಾಜ್ಯದಲ್ಲಿ ಕೇವಲ ಮನುಷ್ಯರಷ್ಟೇ ಅಲ್ಲದೆ ಪಶು, ಪ್ರಾಣಿ, ಪಕ್ಷಿಗಳೂ ಸುಖ, ಶಾಂತಿ, ನೆಮ್ಮದಿಯಿಂದಿರುವ ವ್ಯವಸ್ಥೆ ಇರೋದರಿಂದ ನನಗೆ ನ್ಯಾಯ ಒದಗಿಸಿ, ನನ್ನ ಮೇಲೆ ದಂಡ ಪ್ರಯೋಗ ಮಾಡಿದ ಆ ಸನ್ಯಾಸಿಗೆ ದಂಡ ವಿಧಿಸಬೇಕಾಗಿ ಪ್ರಾರ್ಥನೆ, ಮಹಾಪ್ರಭೂ ಊಊ, ಎನ್ನುತ್ತಾ ರಾಮನ ಕಾಲಿಗೆ ಬಿತ್ತು.

ಆ ಸನ್ಯಾಸಿನ ಕರೆಸೋದಕ್ಕೆ ರಾಮ ಆರ್ಡರ್ ಪಾಸ್ ಮಾಡಿದ. ಭಟರು ಸನ್ಯಾಸಿಯನ್ನ ಕರೆದು ತಂದರು. ರಾಮ ವಿಚಾರಣೆ ಮಾಡಿದ – ಏನಯ್ಯಾ! ನೀನು ಈ ನಾಯಿಯ ಮೇಲೆ ದಂಡ ಪ್ರಯೋಗ ಮಾಡಿದ್ದು ನಿಜವೇ? ರಕ್ತ ಹರಿಸಿದ್ದು ನಿಜವೇ?

ಸನ್ಯಾಸಿ: ಹೌದು ಪ್ರಭು! ನಾನು ಹೊಡೆದದ್ದು ನಿಜ. ಅದು ತಪ್ಪು.

ರಾಮ : ಹಾಗಾದರೆ ಶಿಕ್ಷೆ ವಿಧಿಸಬೇಕಲ್ಲವೇ?

ಸನ್ಯಾಸಿ: ಹೌದು ಪ್ರಭು!

ರಾಮ ಯೋಚಿಸಿದ. ಏನು ಶಿಕ್ಷೆ ವಿಧಿಸೋದು? ನಾಯಿಯನ್ನೇ ಕೇಳಿಬಿಡೋಣ, ಅಫ್ಫೆಕ್ಟೆಡ್ ಪಾರ್ಟಿ ಅದು ಏನು ಹೇಳುತ್ತೋ ಹಾಗೆ ಮಾಡೋಣ...

'ಏನಪ್ಪಾ ನಾಯಿ! ನೀನೇ ಹೇಳು, ಈ ಸನ್ಯಾಸಿಗೆ ಏನು ಶಿಕ್ಷೆ ಶಿಫಾರಸ್ಸು ಮಾಡ್ತೀಯ?'

ನಾಯಿ: ಪ್ರಭು! ಇಲ್ಲಿಂದ ಸ್ವಲ್ಪ ದೂರದಲ್ಲಿ ಒಂದು ಹಳ್ಳಿ ಇದೆ. ಆ ಹಳ್ಳಿ ಹತ್ತಿರ ಒಂದು ಮಠ ಇದೆ. ಹಳೇ ಕಾಲದ ಮಠ. ಆ ಮಠ ಈಗ ಕೆಲವು ಕಾಲದಿಂದ ಸರಿಯಾದ ಮಠಾಧಿ ೀಶರಿಲ್ಲದೆ ಪಾಳು ಬಿದ್ದಿದೆ. ತಾವು ಒಪ್ಪೋದಾದರೆ, ಈ ಸನ್ಯಾಸೀನ ಅದಕ್ಕೆ ಮಠಾಧಿಪತಿಯನ್ನಾಗಿ ಮಾಡಬೇಕಾಗಿ ಪ್ರಾರ್ಥನೆ...

ಸಭೆಯಲ್ಲಿದ್ದವರೆಲ್ಲರೂ ಜೋರಾಗಿ ನಕ್ಕರು. ನಂತರ ರಾಮ ಅಲ್ಲಪ್ಪ ನಾಯಿ, ಹಾಗೆ ಮಾಡಿದರೆ ಅವನಿಗೆ ಅನುಕೂಲ ಅಲ್ಲವೇ? ಶಿಕ್ಷೆ ಹೇಗಾಗುತ್ತೆ?

ನಾಯಿ ಗಂಭೀರವಾಗಿ ಹೇಳಿತು: ಕ್ಷಮಿಸಿ ಪ್ರಭು! ನನ್ನ ಹಿಂದಿನ ಜನ್ಮದಲ್ಲಿ ನಾನು ಅಲ್ಲಿ ಮಠಾಧಿಪತಿಯಾಗಿದ್ದೆ. ನಾನು ಮಾಡಿದ ಯಾವುದೋ ತಪ್ಪಿನಿಂದಾಗಿ ಈಗ ನನಗೆ ನಾಯಿ ಜನ್ಮ ಬಂದಿದೆ. ಇದರಿಂದ ಮುಕ್ತಿ ಹೇಗೋ, ಯಾವಾಗಲೋ? ಹಾಗೇ ಈ ಮನುಷ್ಯನೂ ಆ ಮಠಾಧೀಶನಾಗಲಿ. ಮತ್ತೆ ಏನಾದರೂ ತಪ್ಪು ಮಾಡಿದರೆ ನನ್ನ ಹಾಗೆ ಅವನೂ ನಾಯಿ ಆಗುತ್ತಾನೆ. ಸಿಕ್ಕ ಸಿಕ್ಕ ಜನಗಳಿಂದ ಓಡಿಸಿಕೊಳ್ಳೋದು, ಹೊಡಿಸಿಕೊಳ್ಳೋದು, ಇದರಿಂದ ನಾಯಿಯಾದ ನನ್ನನ್ನು ಹಿಂಸಿಸಿದ್ದಕ್ಕೆ ಅವನದ್ದೂ ನಾಯಿ ಪಾಡಾಗುತ್ತೆ. ಅಕಸ್ಮಾತ್ ಒಳ್ಳೆಯವನಾದರೆ, ಒಳ್ಳೆಯದೇ ಆಯಿತಲ್ಲಾ? ತಾನು ಮಾಡಿದ ತಪ್ಪಿನ ಪಶ್ಚಾತ್ತಾಪದಿಂದ ಶುದ್ಧನಾಗುತ್ತಾನೆ. ಇನ್ನೆಂದೂ ಯಾರಿಗೂ ಅವನಿಂದ ತಪ್ಪಾಗುವುದಿಲ್ಲ. ಅಷ್ಟೇ ಅಲ್ಲ, ಒಳ್ಳೆಯದೇ ಆಗುತ್ತದೆ. ಯಾಕೆಂದರೆ ಮಠಾಧಿಪತಿ ತಾನೇ? ಪ್ರಭು! ತಮಗೆ ಸರಿ ಎನಿಸಿದರೆ ಈ ಶಿಕ್ಷೆ ಆ ಸನ್ಯಾಸಿಗೆ ನೀಡಬೇಕಾಗಿ ಪ್ರಾರ್ಥನೆ...

ಎಲ್ಲರೂ ನಾಯಿಯ ಮುಂದಾಲೋಚನೆಗೆ ತಲೆದೂಗಿದರು. ಹಾಗೇ ಆಯಿತು...

ಈಗ ಯೋಚಿಸೋಣ. ಇದರಲ್ಲಿ ರಾಮ ಗ್ರೇಟೋ, ಲಕ್ಷ್ಮಣ ಗ್ರೇಟೋ, ಆ ನಾಯಿ ಗ್ರೇಟೋ? ಅಥವಾ ತನ್ನ ತಪ್ಪನ್ನು ತಿದ್ದಿಕೊಳ್ಳೋದಕ್ಕೆ, ತಿದ್ದಿಕೊಂಡು ಉದ್ಧಾರವಾಗುವುದಕ್ಕೆ ಅವಕಾಶ ಪಡೆದುಕೊಂಡ ಆ ಸನ್ಯಾಸಿ ಗ್ರೇಟೋ? ಇವರೆಲ್ಲರೂ ಹೌದು. ಮತ್ತು ಮುಖ್ಯವಾಗಿ ಈ ಕಥೆಯನ್ನು ಹೇಳಿದವರು, ಕೇಳಿದವರು, ಓದಿದವರು ತಪ್ಪು ಮಾಡದೆ ಇದ್ದರೆ, ಅಕಸ್ಮಾತ್ ಮಾಡಿದರೆ ತಿದ್ದಿಕೊಂಡು ಉದ್ಧಾರವಾಗುವ ಅವಕಾಶ ಸಿಕ್ಕಾಗ ಉಪಯೋಗಿಸಿಕೊಂಡರೆ ಅವರೂ ಗ್ರೇಟೇ. ಏನಂತೀರಾ? ಯಾಕೆಂದರೆ, ನಮ್ಮ ಜೀವನದಲ್ಲೂ ಒಂದಲ್ಲ ಒಂದು ರೀತಿಯಲ್ಲಿ ಇದಕ್ಕೆ ಹೋಲುವಂಥ ಪ್ರಸಂಗಗಳು ಎದುರಾಗಬಹುದು. ಆಗ ನಾವು ಒಂದಲ್ಲ ಒಂದು ರೀತಿ ಈ ಪಾತ್ರಗಳಿಗೆ ಹತ್ತಿರವಾಗಿರುತ್ತೇವೆ. ಈ ಘಟನೆಯಿಂದ ಸ್ಫೂರ್ತಿ ಪಡೆದು, ನಮ್ಮ ಜೀವನದಲ್ಲೂ ಸೂಕ್ತ ನಿರ್ಣಯ ತೆಗೆದುಕೊಳ್ಳೋದಕ್ಕೆ ಈ ಘಟನೆ ಸಹಾಯವಾಗಬಹುದಲ್ಲವೆ?

✷

**STATEMENT OF OWNERSHIP OF APARANJI**
**(KANNADA MONTHLY)**
**(SEE RULES AND FORM IV)**

| | | | |
|---|---|---|---|
| 1. | Place of Publication | : | Bangalore |
| 2. | Periodicity of Publication | : | Monthly |
| 3. | Printer's Name | : | V.R. Nath |
| | Nationality | : | Indian |
| | Address | : | Ravi Graphics<br>49, 4th Cross, SSI Area<br>Rajajinagar<br>Bangalore - 560010 |
| 4. | Publisher's Name | : | Koravanji Aparanji Trust |
| | Address | : | No 36, 6th Main Road<br>Malleswaram<br>Bangalore - 560003 |
| 5. | Editor's Name | : | M. ShivaKumar |
| | Nationality | : | Indian |
| | Address | : | 36, 6th Main Road<br>Malleswaram<br>Bangalore - 560003 |
| 6. | Name and address of Individuals who own the Paper | : | Koravanji Aparanji Trust<br>36, 6th Main Road<br>Malleswaram<br>Bangalore - 560003 |

I M. Shivakumar hereby declare that the particulars given above are true to the best of my knowledge and belief.

1-3-2017 **M. ShivaKumar**
Bangalore (Signature of the Publisher)